ಸ್ವಾತಂತ್ರ್ಯ ಹೋರಾಟಗಾರ್ತಿ ಎಂ.ಆರ್.ಲಕ್ಷ್ಮಮ್ಮನವರ ಜೀವನ ಮತ್ತು ಸಾಧನೆ

(ಇತಿಹಾಸ ಎಂ.ಫಿಲ್.ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನಾ ನಿಬಂಧ)

ಸಂಶೋಧಕರು:

ಎ.ಸಿ.ಮಂಜುಳ

REG.NO.KRSMH-00638

ಮಾರ್ಗದರ್ಶಕರು:

ಡಾ.ಎಸ್.ಶಿವರಾಮು

ಇತಿಹಾಸ ಸಹಾಯಕ ಪ್ರಾಧ್ಯಾಪಕರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜು,

ಪಿರಿಯಾಪಟ್ಟಣ –571107. ಮೈಸೂರು ಜಿಲ್ಲೆ.

Kannada University Logo

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ (ರಿ), ಮಂಡ್ಯ

(ಕನ್ನಡ ವಿ.ವಿ.ಹಂಪಿ ಮಾನ್ಯತೆ ಪಡೆದಿದೆ)

2012–13

1072

ಸಂಶೋಧಕರ ಪ್ರಮಾಣ ಪತ್ರ

ಹಂಪಿ ಕನ್ನಡ ವಿಶ್ವ ವಿದ್ಯಾನಿಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2012–13ನೇ ಸಾಲಿಗೆ ಇತಿಹಾಸ ಎಂ.ಫಿಲ್., ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. ನನ್ನ ಎಂ.ಫಿಲ್ ಅಧ್ಯಯನದ ಅಂಗವಾಗಿ ಸಂಶೋಧನಾ ನಿಬಂಧ ರಚಿಸಲು **"ಸ್ವಾತಂತ್ರ್ಯ ಹೋರಾಟಗಾರ್ತಿ ಎಂ.ಆರ್.ಲಕ್ಷಮ್ಮನವರ ಜೀವನ ಮತ್ತು ಸಾಧನೆ"** ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ.ಎಸ್.ಶಿವರಾಮು ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ.

ಈ ನಿಬಂಧವನ್ನಾಗಲಿ, ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತ ಕಾಲಿಕೆಗಳಲ್ಲಿ ಪ್ರಕಟಿಸಿರುವುದಿಲ್ಲ ಮತ್ತು ಕನ್ನಡ ವಿಶ್ವ ವಿದ್ಯಾಲಯವು ನೀಡುವ ಎಂ.ಫಿಲ್ ಪದವಿಗಾಗಿ ಈ ನಿಬಂಧವನ್ನು ಒಪ್ಪಿಸುತ್ತೇನೆ.

Manjula.

ಎ.ಸಿ.ಮಂಜುಳ
ಸಂಶೋಧಕರು, ಚರಿತ್ರೆ ವಿಭಾಗ
ಎಂ.ಎಲ್.ಶ್ರೀಕಂಠೇಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ

ದಿನಾಂಕ: 30-7-2013

ಸ್ಥಳ: ಮಂಡ್ಯ

ಮಾರ್ಗದರ್ಶಕರ ಪ್ರಮಾಣ ಪತ್ರ

"ಸ್ವಾತಂತ್ರ್ಯ ಹೋರಾಟಗಾರ್ತಿ ಎಂ.ಆರ್.ಲಕ್ಷಮ್ಮನವರ ಜೀವನ ಮತ್ತು ಸಾಧನೆ" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ಎಂ.ಫಿಲ್ ಪದವಿಗಾಗಿ ಶ್ರೀಮತಿ ಎ.ಸಿ.**ಮಂಜುಳ** ರವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ: ಮಂಡ್ಯ
ದಿನಾಂಕ: 30.7.2013

ಡಾ.ಎಸ್.ಶಿವರಾಮು
ಇತಿಹಾಸ ಸಹಾಯಕ ಪ್ರಾಧ್ಯಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಪಿರಿಯಾಪಟ್ಟಣ –571 107
ಮೈಸೂರು ಜಿಲ್ಲೆ

ಪರಿವಿಡಿ

ಅಧ್ಯಾಯ ಒಂದು

ಪೀಠಿಕೆ

ಕನ್ನಡ ನಾಡು ಕಂಡ ಅಪರೂಪದ ವ್ಯಕ್ತಿತ್ವಗಳಲ್ಲಿ ಎಂ.ಆರ್.ಲಕ್ಷಮ್ಮನವರು ಒಬ್ಬರು. ತಮ್ಮ ನಿಸ್ವಾರ್ಥ ಸೇವೆಯಿಂದ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ ಹಲವು ಜನರು ತಮ್ಮ ತ್ಯಾಗ ಬಲಿದಾನಗೈದಿದ್ದಾರೆ. ಅವರ ಆ ನಿಲುವು ಇಂದು ನಾವೆಲ್ಲರೂ ಸ್ವಾತಂತ್ರ್ಯದ ಸವಿಯನ್ನು ಅನುಭವಿಸಿದ್ದೇವೆ. ಅಂತಹವರಲ್ಲಿ ಪುರುಷರು, ಮಹಿಳೆಯರು, ಕಾರ್ಮಿಕರು, ವಿದ್ಯಾರ್ಥಿಗಳು ಮುಖ್ಯರು. ಅದರಲ್ಲೂ ಪುರುಷ ಪ್ರಧಾನ ಸಮಾಜದ ಹಲವು ನಿರ್ಬಂಧಗಳ ನಡುವೆ ಒಬ್ಬೊಬ್ಬರು ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿಯರು ಈ ಪರಿಧಿಯನ್ನು ದಾಟಿ ಮುಂದೆ ಬಂದು ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಡಿದು ಅಮರರಾಗಿದ್ದಾರೆ. ಅಂತಹವರಲ್ಲಿ ಯಶೋಧರ ದಾಸಪ್ಪ, ಸುಬ್ಬಮ್ಮಜೋಯಿಸ್, ಬಳ್ಳಾರಿಸಿದ್ದಮ್ಮ, ಟಿ.ಸುನಂದಮ್ಮ ಹಾಗೂ ಎಂ.ಆರ್.ಲಕ್ಷಮ್ಮನವರು ಪ್ರಮುಖರು, ಇವರ ಕೇವಲ ಸ್ವಾತಂತ್ರ್ಯ ಹೋರಾಟವೇ ಮಾತ್ರವಲ್ಲ ಸ್ವಾತಂತ್ರ್ಯ ನಂತರ ಮಹಿಳೆಯರ, ಅಬಲೆಯರ ಶೋಚನೀಯ ಬದುಕನ್ನು ಹಸನಾಗಿಸಲು ಶಕ್ತಿಮೀರಿ ದುಡಿದು ಅವರ ಉದ್ಧಾರಕ್ಕಾಗಿ ಹಗಲಿರುಳು ಶ್ರಮಿಸಿ ಅಮರರಾಗಿದ್ದಾರೆ. ಇವರ ಕಾರ್ಯಕ್ಷೇತ್ರ ವಿಶಾಲವಾದದ್ದು.

'ಆಡು ಮುಟ್ಟದ ಸೊಪ್ಪಿಲ್ಲ ಎಂ.ಆರ್.ಲಕ್ಷಮ್ಮನವರು ಕೆಲಸ ಮಾಡದ ಕ್ಷೇತ್ರವಿಲ್ಲ' ಸಾವಿರಾರು ಸ್ವಾತಂತ್ರ್ಯ ಹೋರಾಟಗಾರರ ನಡುವೆ ವಿಭಿನ್ನ ವ್ಯಕ್ತಿತ್ವ ಹೊಂದಿರುವ ಸಮಾಜದ ಬಗ್ಗೆ, ಮಹಿಳೆಯರ ಬಗ್ಗೆ ದೀನದಲಿತರ ಬಗ್ಗೆ ಪ್ರಾಮಾಣಿಕ ಕಳಕಳಿಯನ್ನು ಇಟ್ಟುಕೊಂಡು ಅವರಿಗೆ ಸಾಂತ್ವನ ಹೇಳುತ್ತಾ, ಅಭಯ ಹಸ್ತನೀಡಿ, ಅವರಿಗೆ ಸ್ಫೂರ್ತಿಯ ಚಿಲುಮೆಯಾಗಿ ನಿಂತು, ಸಕಲರ ಅಭ್ಯುದಯಕ್ಕಾಗಿ ನಿಸ್ವಾರ್ಥ ಸೇವಾ ಮನೋಭಾವದಿಂದ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರಲ್ಲಿ ಎಂ.ಆರ್.ಲಕ್ಷಮ್ಮನವರು ಒಬ್ಬರು. ತಮ್ಮ ಮುಪ್ಪಿನ ದಿನಗಳಲ್ಲಿ ಕೂಡ ಸಮಾಜ ಸುಧಾರಣೆಗೆ ಶ್ರಮಿಸುತ್ತಿದ್ದ ಎಂ.ಆರ್.ಲಕ್ಷಮ್ಮನವರು ಅವರ ಜೀವನ ಮತ್ತು ಸಾಧನೆಗಳ ಬಗ್ಗೆ ತಿಳಿದುಕೊಳ್ಳುವುದು ಮತ್ತು ಅವರ ಆದರ್ಶ ಮತ್ತು ಅನುಕರಣಿಯ ಬದುಕನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.[1]

ಸಂಶೋಧನಾ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳ ಸಮೀಕ್ಷೆ

ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಎಂ.ಆರ್.ಲಕ್ಷಮ್ಮನವರ **ಸ್ವವಿವರ** ಒಂಬತ್ತು ಪುಟಗಳನ್ನು ಒಳಗೊಂಡಿದ್ದು, ಅವರ ಕಾರ್ಯಕ್ಷೇತ್ರಗಳ ವಿವರವನ್ನು ಸಂಕ್ಷಿಪ್ತವಾಗಿ ತಿಳಿಸುತ್ತದೆ. ಎಂ.ಆರ್.ಲಕ್ಷಮ್ಮನವರ **'ತುರಂಗವಾಸ ಅನುಭವ'** ಅವರ ಸ್ವಾತಂತ್ರ್ಯ ಹೋರಾಟದ ಬಗ್ಗೆ ಮತ್ತು ಸೆರೆಮನೆಯಲ್ಲಿ ಕಳೆದ ಕ್ಷಣಗಳ ಬಗ್ಗೆ ತಿಳಿಸುವಂತಹ ಪ್ರಾಥಮಿಕ ಆಕರಗಳಾಗಿವೆ.

"ಮಾರುತಿ" ಮತ್ತು **"ಕುಂತೀದೇವಿ"** ಎಂಬ ಸಣ್ಣ ಕಥೆಗಳು ಲಕ್ಷಮ್ಮನವರ ಸಾಹಿತ್ಯಾಸಕ್ತಿಯನ್ನು ತಿಳಿಸುವುದರ ಜೊತೆಗೆ ಮಹಿಳೆಯರ ಬಗ್ಗೆ ಕೆಳವರ್ಗದ ಜನತೆಯ ಬಗ್ಗೆ ಅವರ ದೃಷ್ಟಿಕೋನವನ್ನು ಬಿಂಬಿಸುತ್ತವೆ. 1950ರಲ್ಲಿ ಎಂ.ಆರ್.ಲಕ್ಷಮ್ಮನವರು ಪ್ರಾರಂಭಿಸಿದ **'ಸೋದರಿ'** ವಾರಪತ್ರಿಕೆ ದೇಶವಿದೇಶಗಳ ಸುದ್ದಿಗಳನ್ನು, ಮಹಿಳೆಯರ ಬಗೆಗಿನ ಕಾರ್ಯಕ್ರಮಗಳನ್ನು ಮಹಾನ್ ವ್ಯಕ್ತಿಗಳ ಜೀವನ ಚರಿತ್ರೆಯನ್ನು ಅನೇಕ ಐತಿಹಾಸಿಕ ಘಟನೆಗಳನ್ನು, ಸ್ಥಳಪುರಾಣವನ್ನು ಕರ್ನಾಟಕದ ಏಕೀಕರಣ ಮುಂತಾದ ವಿಷಯಗಳ ವಿವರಗಳನ್ನು ಒಳಗೊಂಡಿದ್ದು, ಸಂಶೋಧನೆಗೆ ಪ್ರಮುಖವಾದ ಆಧಾರವಾಗಿದೆ. 1950 ರಿಂದ 1957 ರವರೆಗಿನ ಸೋದರಿ ಪತ್ರಿಕೆಗಳು ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾನೂನು ಕಟ್ಟಲೆಗಳ ಬಗ್ಗೆ ಕೂಡ ವಿವರಗಳನ್ನು ನೀಡುತ್ತದೆ. 1974 ರಲ್ಲಿ ಪ್ರಾರಂಭವಾದ ಕರ್ನಾಟಕ ರಾಜ್ಯ ಗ್ರಾಹಕರ ವೇದಿಕೆಯ ಸಂಘಟನಾ ಕಾರ್ಯಾಧ್ಯಕ್ಷೆಯಾಗಿದ್ದ ಎಂ.ಆರ್.ಲಕ್ಷಮ್ಮನವರು **'ಬಳಕೆದಾರ'** ಎಂಬ ಒಂದು ವಾರ್ತಾ ಪತ್ರವನ್ನು ಪ್ರಾರಂಭಿಸಿದ್ದು, ಅದರಲ್ಲಿ ಗ್ರಾಹಕರಿಗೆ ವಿನಂತಿಯನ್ನು ಮಾಡಿಕೊಂಡಿದ್ದು, ಕಲಬೆರಕೆ, ಮೋಸ, ವಂಚನೆ, ಲಂಚಗುಳಿತನ ಮುಂತಾದ ಸಾಮಾಜಿಕ ಪಿಡುಗನ್ನು ನಿವಾರಿಸಲು ಸಂಘಟನೆಯ ಮಹತ್ವವನ್ನು ತಿಳಿಸಿದ್ದು ಪ್ರಮುಖ ಆಧಾರವಾಗಿದೆ. 2000 ದಲ್ಲಿ ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಕಟಿಸಿರುವ ಎನ್.ನಾಗಲಕ್ಷ್ಮಿಯವರ **'ಕರ್ನಾಟಕ ಪತ್ರಿಕಾ ಲೋಕದ ಧೀಮಂತರು ಭಾಗ–8'** ಎಂ.ಆರ್.ಲಕ್ಷಮ್ಮನವರು ಪತ್ರಿಕೋದ್ಯಮಕ್ಕೆ ನೀಡಿದ ಕೊಡುಗೆಯನ್ನು ಸವಿವರವಾಗಿ ತಿಳಿಸುತ್ತದೆ. ಸುರೇಶ್‌ಮೂನರವರು ರಚಿಸಿದ **'ಬೆಂಗಳೂರು ನಗರ ನಿರ್ಮಾಪಕರು'** ಕೃತಿಯು ಎಂ.ಆರ್.ಲಕ್ಷಮ್ಮನವರ ಬಗ್ಗೆ ಸವಿವರವಾಗಿ ತಿಳಿಸುತ್ತದೆ. **"ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ವೀರವನಿತೆಯರು"** ಶ್ರೀಮತಿ ಕಮಲಾ ಸಂಪಳ್ಳಿಯವರು ರಚಿಸಿದ್ದು, ಈ ಕೃತಿಯಲ್ಲಿ ಎಂ.ಆರ್.ಲಕ್ಷಮ್ಮನವರ ಸ್ವಾತಂತ್ರ್ಯ ಹೋರಾಟದ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಬ.ನಾ.ಸುಂದರರಾವ್ ಅವರು **"ಚಲೋ ಮೈಸೂರು"** ಕೃತಿಯನ್ನು 1981 ರಲ್ಲಿ ಪ್ರಕಟಿಸಿದ್ದು, ಈ ಕೃತಿಯಲ್ಲಿ ಚಲೋ ಮೈಸೂರು ಚಳವಳಿಯ ಘಟನೆಗಳನ್ನು ವಿವರವಾಗಿ ತಿಳಿಸಿದ್ದಾರೆ.

ಡಾ.ಹೆಚ್.ಎಸ್.ದೊರೆಸ್ವಾಮಿಯವರ **"ಸ್ವಾತಂತ್ರ್ಯ ಸಂಗ್ರಾಮ ಕರ್ನಾಟಕ"** ಮತ್ತು **"ಹೋರಾಟದ ದಿಟ್ಟ ಹೆಜ್ಜೆಗಳು"** ಕೃತಿಗಳು ಮೈಸೂರು ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಡಾ.ಸೂರ್ಯನಾಥಕಾಮತ್ ಸಂಪಾದಕತ್ವದ **"ಕರ್ನಾಟಕ ರಾಜ್ಯ ಗೆಜೆಟಿಯರ್ ಸಂಪುಟ 1 ಮತ್ತು 2"** ಕೃತಿಗಳು ಕರ್ನಾಟಕದಲ್ಲಿ ನಡೆದಿರುವ ಸ್ವಾತಂತ್ರ್ಯ ಚಳವಳಿಯ ಬಗ್ಗೆ ವಿವರಣೆ ನೀಡುತ್ತದೆ. ಕೆ.ವೀರತ್ತಪ್ಪ ಅವರು ಬರೆದಿರುವ **"ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ"** ಕೃತಿಯು ಮೈಸೂರು ಸಂಸ್ಥಾನದಲ್ಲಿ ನಡೆದ ಹಲವು ಸ್ವಾತಂತ್ರ್ಯ ಸಂಗ್ರಾಮಗಳ ಬಗ್ಗೆ ವಿವರವಾಗಿ ತಿಳಿಸುತ್ತದೆ. ಡಾ.ಜಮುನರವರ **"ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರು"** ಕೃತಿಯು ಎಂ.ಆರ್.ಲಕ್ಷಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದುದರ ಬಗ್ಗೆ ವಿವರವಾಗಿ ತಿಳಿಸುತ್ತದೆ.

ಡಾ.ಎಂ.ಸಿ.ಸಿಂಗಮಾಳ್‌ರವರು ರಚಿಸಿದ **"ರಾಜಕಾರಣದಲ್ಲಿ ಮಹಿಳೆ"** ಎಂಬ ಕೃತಿಯು ಎಂ.ಆರ್.ಲಕ್ಷ್ಮಮ್ಮನವರು ಪುರಸಭಾ ಸದಸ್ಯರಾಗಿ ಹಾಗೂ ವಿಧಾನ ಪರಿಷತ್ತಿನ ಸದಸ್ಯರಾಗಿ ಅವರು ಮಾಡಿದ ಕೆಲಸ ಕಾರ್ಯಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಡಾ.ಸೂರ್ಯನಾಥಕಾಮತ್ ರವರ **"ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು"** ದ್ವಿತೀಯ ಸಂಪುಟ ಚಲೋ ಮೈಸೂರು ಚಳವಳಿಯ ಬಗ್ಗೆ ವಿವರವಾಗಿ ತಿಳಿಸುತ್ತದೆ. **"ಸ್ವಾತಂತ್ರ್ಯದೆಡೆಗೆ"** ಎಂ.ಎನ್.ಜೋಯಿಸ್‌ರ ಅಭಿನಂದನ ಗ್ರಂಥವನ್ನು ಪ್ರೇಮಲತಾ ಸುಂದರೇಶನ್‌ರ ಸಂಪಾದಕತ್ವದಲ್ಲಿ ಪ್ರಕಟಿಸಿದ್ದು, ಮೈಸೂರು ಸಂಸ್ಥಾನದಲ್ಲಿ ನಡೆದ ಧ್ವಜಸತ್ಯಾಗ್ರಹಗಳು, ಹೋರಾಟಗಳು ಮುಂತಾದ ಮಾಹಿತಿಯನ್ನು ಒಳಗೊಂಡಿವೆ. ಡಾ.ಸಿ.ಸುಶೀಲಮ್ಮನವರ ಪಿಹೆಚ್.ಡಿ ಪ್ರಬಂಧ **'ಮೈಸೂರು ರಾಜ್ಯದಲ್ಲಿ ಮಹಿಳಾ ಕಲ್ಯಾಣದ ಒಂದು ಅಧ್ಯಯನ'**(1881–1956) ದಲ್ಲಿ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಮಹಿಳೆಯರ ಬಗ್ಗೆ ಮಾಹಿತಿ ದೊರೆಯುತ್ತದೆ.

ಮೇಲಿನ ಗ್ರಂಥಗಳಲ್ಲದೇ **"Mysore legislative council debates 1945"**ರಲ್ಲಿ ಎಂ.ಆರ್.ಲಕ್ಷ್ಮಮ್ಮನವರು ನ್ಯಾಯವಿಧಾಯಕ ಸಭೆಯಲ್ಲಿ ನಡೆಸಿದ ಚರ್ಚೆಗಳು ಮತ್ತು ಭಾಷಣಗಳನ್ನು ಅಧ್ಯಯನ ಮಾಡಲಾಗಿದೆ. **"Mysore legislative council debates"(1952,1958,1964)** ಗಳನ್ನು ಅಧ್ಯಯನ ಮಾಡಿ ಅವರು ವಿಧಾನ ಪರಿಷತ್ತಿನ ಸದಸ್ಯೆಯಾಗಿ ಅವರು ಮಾಡಿರುವ ರಾಜಕೀಯ ಚಿಂತನೆಗಳನ್ನು ಸವಿವರವಾಗಿ ಚರ್ಚಿಸಲಾಗಿದೆ. **'ಸಾಧ್ವಿ'** ದಿನಪತ್ರಿಕೆಗಳಲ್ಲಿ ಅವರು ಕೈಗೊಂಡ ಮಹಿಳಾ ಸಮಾಜದ ಕೆಲಸಕಾರ್ಯಗಳ ಬಗ್ಗೆ ಜವಾಬ್ದಾರಿ ಸರ್ಕಾರ ರಚನೆಗಾಗಿ ಮಾಡಿದ ಹೋರಾಟದ ಬಗ್ಗೆ ಅನೇಕ ಮಾಹಿತಿಗಳನ್ನು ಪಡೆದುಕೊಳ್ಳಲಾಗಿದೆ. ನಿಯತಕಾಲಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಈ ಮೇಲ್ಕಂಡ ಮೂಲಾಧಾರಗಳಲ್ಲದೇ ಅವರ ಕುಟುಂಬದ ಸದಸ್ಯರಾದ ಅವರ ಮಕ್ಕಳಾದ ಮಾಧವ.ಎನ್.ಮೂರ್ತಿಂಗ್, ಶಾಂತಿ ದೇಶಪಾಂಡೆ, ನಂದಿನಿ ಮೊದಲಾದವರಿಂದ ಎಂ.ಆರ್.ಲಕ್ಷ್ಮಮ್ಮನವರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಈ ನಿಬಂಧವನ್ನು ರಚಿಸಲಾಗಿದೆ.

ಅಧ್ಯಯನ ವಿಷಯದ ಮಹತ್ವ

ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರ್ತಿ, ಸಮಾಜಸೇವಕಿ, ಪತ್ರಕರ್ತೆ, ಸ್ತ್ರೀಸುಧಾರಕಿ ಎಂ.ಆರ್.ಲಕ್ಷ್ಮಮ್ಮನವರು 1913 ಮಾರ್ಚ್ 24 ರಂದು ಜನಿಸಿದರು. ತಂದೆ ರಾಣ್ಯಾದ ರಾಮರಾವ್, ತಾಯಿ ಪದ್ಮಾವತಮ್ಮ. ತಂದೆಯವರು ಮೂಲತಃ ಚಿತ್ರದುರ್ಗ ಜಿಲ್ಲೆಯ ನರಗನಹಳ್ಳಿಯವರಾಗಿದ್ದು, ಮೈಸೂರಿನ ಪುರಾತತ್ವ ಇಲಾಖೆಯಲ್ಲಿ

ಸಂಶೋಧಕರು ಮತ್ತು ಪುರಾತತ್ವ ಶಾಸ್ತ್ರಜ್ಞರು ಆಗಿದ್ದರು. ಮೈಸೂರಿನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಲಕ್ಷ್ಮಮ್ಮನವರು ತಮ್ಮ 11ನೇ ವಯಸ್ಸಿನಲ್ಲಿ ಎಂ.ನಾರಾಯಣಮೂರ್ತಿ

ಅವರೊಡನೆ ವಿವಾಹವಾದರು. ಪತಿಯ ಸಹಕಾರ ಮತ್ತು ಉತ್ತೇಜನದಿಂದ ಮೆಟ್ರಿಕ್ ಪರೀಕ್ಷೆಯನ್ನು ಪೂರೈಸಿದರು. ಮಹಾರಾಣಿ ಕಾಲೇಜಿನಲ್ಲಿ ತಮ್ಮ ಇಂಟರ್‌ಮೀಡಿಯಟ್ ಶಿಕ್ಷಣವನ್ನು ಪಡೆದ ಎಂ.ಆರ್.ಲಕ್ಷಮ್ಮನವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪ್ರಥಮ ರ‍್ಯಾಂಕ್ ಪಡೆದರು. ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಪದವಿಯನ್ನು ಪಡೆದ ಲಕ್ಷಮ್ಮನವರು ಮೈಸೂರು ವಿಶ್ವವಿದ್ಯಾನಿಲಯದಿಂದ ಇತಿಹಾಸ ಮತ್ತು ಪುರಾತತ್ವ ವಿಷಯದಲ್ಲಿ ಎಂ.ಎ ಪದವಿಯನ್ನು ಚಿನ್ನದ ಪದಕದೊಂದಿಗೆ ಪಡೆದರು.[2]

ಶಿಕ್ಷಣವನ್ನು ಪಡೆಯುತ್ತಿದ್ದಾಗಲೇ ಸಾಹಿತ್ಯದ ಮೇಲೆ ಆಸಕ್ತಿಯನ್ನು ಹೊಂದಿದ್ದ ಎಂ.ಆರ್.ಲಕ್ಷಮ್ಮನವರು ಪ್ರಸಿದ್ಧ ಪತ್ರಿಕೆಗಳಾದ ಸಾಧ್ವಿ, ಪ್ರಬುದ್ಧಕರ್ನಾಟಕಗಳಿಗೆ ಕವನಗಳನ್ನು ಮತ್ತು ಲೇಖನಗಳನ್ನು ಬರೆಯುತ್ತಿದ್ದರು.

ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ 'ಬೆಳಕು' ವಾರಪತ್ರಿಕೆಯ ಪ್ರಥಮ ಸಂಪಾದಕಿಯಾಗಿ ಮೂರು ವರ್ಷಗಳ ಕಾಲ ಕೆಲಸ ನಿರ್ವಹಿಸಿದರು. 'ಕೊಂತಮ್ಮನ ಪದಗಳು' ಎನ್ನುವ ಜಾನಪದ ಸಾಹಿತ್ಯವನ್ನು ಸಂಗ್ರಹಿಸಿ, ಅದನ್ನು ಪ್ರಕಟಿಸಿದರು. ಎಂ.ಆರ್.ಲಕ್ಷಮ್ಮನವರ ಪತಿ ಎಂ.ನಾರಾಯಣಮೂರ್ತಿಯವರು ಹಾಸನ ಜಿಲ್ಲೆಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ಆಗಿದ್ದಾಗ ಹಾಸನ ಜಿಲ್ಲೆಯ ಹಗರೆಯಲ್ಲಿ ಸುಮಾರು 19 ಶಾಸನಗಳನ್ನು ಸಂಗ್ರಹಿಸಿದರು. 1945ರಲ್ಲಿ ಕಾಂಗ್ರೆಸ್ ಸದಸ್ಯೆಯಾಗಿ ರಾಜಕೀಯ ಕ್ಷೇತ್ರ ಪ್ರವೇಶಿಸಿದ ಲಕ್ಷಮ್ಮನವರು ಸಾರ್ವಜನಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.

1945ರಲ್ಲಿ ನ್ಯಾಯವಿಧಾಯಕ ಸಭೆಯ ಸದಸ್ಯೆಯಾಗಿ ಮಹಿಳಾ ಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಯಾದರು.[3] 1946ರಲ್ಲಿ ಪುರಸಭಾ ಸದಸ್ಯೆಯಾಗಿ ಕಾರ್ಯ ನಿರ್ವಹಿಸಿದರು. ಎಂ.ಆರ್.ಲಕ್ಷಮ್ಮನವರು ದೇಶಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ, 1947ರಲ್ಲಿ 32 ದಿನಗಳ ಕಾಲ ಸೆರೆಮನೆ ವಾಸವನ್ನು ಅನುಭವಿಸಿದರು.

ಕಾಸರಗೋಡು ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ಮಹಿಳಾಗೋಷ್ಠಿಯ ಅಧ್ಯಕ್ಷ ಪಟ್ಟವನ್ನು ಅಲಂಕರಿಸಿದರು. ಮಹಿಳೆಯರ ಮೊಟ್ಟಮೊದಲ ವಾರಪತ್ರಿಕೆ 'ಸೋದರಿ'ಯ ಸಂಪಾದಕಿ, ಪ್ರಕಾಶಕಿಯಾಗಿ ಜೊತೆಗೆ ಮುದ್ರಣ ಕಾರ್ಯವನ್ನು ನಿರ್ವಹಿಸಿ 8 ವರ್ಷಗಳ ಕಾಲ ಸೋದರಿ ಪತ್ರಿಕೆ ಪ್ರಕಟಣೆಗೊಂಡು ಮಹಿಳೆಯರ ಹಕ್ಕು ಬಾಧ್ಯತೆಗಳ ಬಗ್ಗೆ ಅಭಿವೃದ್ಧಿಯ ಬಗ್ಗೆ ಶ್ರಮಿಸಿದ್ದಾರೆ.

ಬೆಂಗಳೂರಿನ ಎ.ಪಿ.ಎಸ್ ಮತ್ತು ಬಿ.ಎಮ್.ಎಸ್ ಕಾಲೇಜುಗಳಲ್ಲಿ ಉಪನ್ಯಾಸಕಿಯಾಗಿ ಮತ್ತು 4 ವರ್ಷ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸಿದ್ದಾರೆ. 1952, 1958 ಮತ್ತು 1964ರಲ್ಲಿ 3 ಬಾರಿ ವಿಧಾನಪರಿಷತ್ತಿನ ಸದಸ್ಯೆಯಾಗಿ ಆಯ್ಕೆಯಾಗಿದ್ದು, 2 ವರ್ಷಗಳ ಕಾಲ ವಿಧಾನಪರಿಷತ್ತಿನ ಉಪಾಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿದರು.

1954ರಲ್ಲಿಯೇ ಹಳೆಯ ಮೈಸೂರು ಸಂಸ್ಥಾನದಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಅಧ್ಯಕ್ಷೆಯಾಗಿದ್ದರು. ಇದಲ್ಲದೆ ಗ್ರಾಹಕರ ವೇದಿಕೆಯ ಅಧ್ಯಕ್ಷೆಯಾಗಿ ಆಹಾರ ಕಲಬೆರಕೆ ಹಾಗೂ ಅಳತೆ ಮತ್ತು ತೂಕಗಳಲ್ಲಿ ಆಗುವ ಮೋಸದ ವಿರುದ್ಧ ಹೋರಾಡಿದ್ದಾರೆ. ಕರ್ನಾಟಕ ಪಾನ ಸಂಯಮ ಮಂಡಳಿಯ ಪ್ರಥಮ ಅಧ್ಯಕ್ಷೆಯಾಗಿ ಪಾನ ವ್ಯಸನದ ಅನಾಹುತಗಳ ಬಗ್ಗೆ ಜನರಿಗೆ ಅರಿವು ಮೂಡಿಸಲು ಪ್ರಯತ್ನಿಸಿದರು. ಅನೇಕ ಮಹಿಳಾ ಮಂಡಲಿಗಳು, ವನಿತಾಸದನ, ಭಗಿನಿಸಮಾಜಗಳಲ್ಲಿ ಸಕ್ರಿಯ ಸೇವೆಯನ್ನು ಮಾಡಿದರು. ಇದರೊಂದಿಗೆ ರಾಜ್ಯ ಮಹಿಳಾ ಸ್ಕೌಟ್ ಮತ್ತು ಗೈಡ್ಸ್ ಸಂಸ್ಥೆಯ ಕಮಿಷನರ್ ಆಗಿ, ಮಹಿಳೆಯರ ಮತ್ತು ಕಲ್ಯಾಣ ಮಂಡಳಿಯ ಸದಸ್ಯೆಯಾಗಿ ಅನೇಕ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸಿದರು. ರಾಜಕೀಯ ಮತ್ತು ಸಂಸ್ಕೃತಿ ವಿನಿಮಯ ಯೋಜನೆಯಲ್ಲಿ ವಿದೇಶ ಪ್ರವಾಸ ಮಾಡಿ, ಹಾಗೆಯೇ ನಮ್ಮಲ್ಲೂ ಕೂಡ ಮಹಿಳೆಯರ ಪ್ರಗತಿಗಾಗಿ ಪ್ರಯತ್ನಿಸಿದರು. 1970ರಲ್ಲಿ ರಾಜಕೀಯ ನಿವೃತ್ತಿ ಪಡೆದು ಸಮಾಜ ಸೇವೆಗಳಲ್ಲಿ ತೊಡಗಿಕೊಂಡು 1984 ಜೂನ್ 7ನೇ ತಾರೀಖಿನಂದು ಇಹಲೋಕವನ್ನು ತ್ಯಜಿಸಿದರು.[4]

ಇತಿಹಾಸದ ಹೊಸ ಒಲವುಗಳಲ್ಲಿ ಸ್ತ್ರೀವಾದಿ ಚರಿತ್ರೆಯು ಒಂದಾಗಿದ್ದು, ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ, ಉಪನ್ಯಾಸಕರಾಗಿ ಮತ್ತು ಪ್ರಾಂಶುಪಾಲರಾಗಿ, ರಾಜಕಾರಣಿಯಾಗಿ, ಸಮಾಜಸುಧಾರಕಿಯಾಗಿ, ಪತ್ರಕರ್ತೆಯಾಗಿ ಕರ್ನಾಟಕದ ಚರಿತ್ರೆಯಲ್ಲಿ ಎಂ.ಆರ್.ಲಕ್ಷಮ್ಮನವರ ಬಗ್ಗೆ ಅಧ್ಯಯನ ನಡೆಸುವುದು ಸೂಕ್ತವೆನಿಸುತ್ತದೆ. ಅಂದಿನ ಕಾಲದಲ್ಲಿ ಸಾಂಪ್ರದಾಯಿಕ ಕುಟುಂಬದಲ್ಲಿ ಜನಿಸಿದ್ದರೂ ವೈಚಾರಿಕ ಮನೋಭಾವವನ್ನು ಬೆಳೆಸಿಕೊಂಡು ಉನ್ನತ ಶಿಕ್ಷಣ ಪಡೆದು ಸಾಮಾಜಿಕ ಸುಧಾರಣೆಗಳಲ್ಲಿ ರಾಜಕೀಯ ರಂಗದಲ್ಲಿ ಪ್ರಮುಖ ಪಾತ್ರ ವಹಿಸಿದ ಎಂ.ಆರ್.ಲಕ್ಷಮ್ಮನವರ ಅಧ್ಯಯನ ಮಾಡುವುದು ಮತ್ತು ಸಾಧನೆಗಳನ್ನು ದಾಖಲಿಸುವುದು ಅಧ್ಯಯನ ವಿಷಯದ ಮಹತ್ವವಾಗಿದೆ. ಸಮಾಜದ ಅಲಕ್ಷಿತ ಸಮುದಾಯವಾದ ಮಹಿಳೆಯರ ಮತ್ತು ದೀನ ದಲಿತರ ಏಳಿಗೆಗಾಗಿ ಶ್ರಮಿಸಿದ, ದೇಶಕ್ಕಾಗಿ ಸಮರ್ಪಿಸಿಕೊಂಡ ಎಂ.ಆರ್.ಲಕ್ಷಮ್ಮನವರ ಜೀವನ ಮತ್ತು ಸಾಧನೆಗಳನ್ನು ಸಂಶೋಧನೆಗಳ ಮೂಲಕ ಸ್ಮರಿಸುವುದು ಅತ್ಯಗತ್ಯವಾಗಿದೆ.

ಸಂಶೋಧನಾ ವಿಧಾನ

ಎಂ.ಆರ್.ಲಕ್ಷಮ್ಮನವರ ವ್ಯಕ್ತಿಚರಿತ್ರೆಯ ಸಂಶೋಧನಾ ವಿಷಯವನ್ನು ಸಂಶೋಧನಾ ಮಾರ್ಗದ ತತ್ವಗಳನ್ನು ಅನುಸರಿಸಿ ಸಂಶೋಧನೆ ನಡೆಸಲಾಗಿದೆ. ವಿಷಯ ಸಂಗ್ರಹಣೆ, ಬಾಹ್ಯ ಮತ್ತು ಅಂತರಿಕ ವಿಮರ್ಶೆಯ ಸೂತ್ರಗಳು, ವಿಶ್ಲೇಷಣಾ ಕ್ರಮಗಳು ಮತ್ತು ನಿರೂಪಣಾ ತತ್ವಗಳನ್ನು ಸಂಶೋಧನೆಯಲ್ಲಿ ಅಳವಡಿಸಲಾಗಿದೆ.

ವಿಮರ್ಶಾತ್ಮಕ ಮತ್ತು ವಿಶ್ಲೇಷಣಾ ಮಾರ್ಗದ ಮೂಲಕ ಎಂ.ಆರ್.ಲಕ್ಷಮ್ಮನವರಿಗೆ ಸಂಬಂಧಿಸಿದ ಪ್ರಕಟಿತ ಮತ್ತು ಅಪ್ರಕಟಿತ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಅವರ ಕುರಿತು ಹೊರ ಬಂದಿರುವ ಗ್ರಂಥಗಳು, ನಿಯತಕಾಲಿಕೆಗಳಲ್ಲಿ ಪ್ರಕಟವಾಗಿರುವ ಗ್ರಂಥಗಳನ್ನು, ಲೇಖನಗಳನ್ನು ಅಧ್ಯಯನ ಮಾಡಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಅದಲ್ಲದೆ ಎಂ ಆರ್ ಲಕ್ಷಮ್ಮನವರ ಸಮಕಾಲೀನರು, ಒಡನಾಡಿಗಳು, ಬಂಧುಮಿತ್ರರು, ಹಿತೈಷಿಗಳನ್ನು ಸಂದರ್ಶಿಸಿ ಪ್ರಬಂಧವನ್ನು ರಚಿಸಲಾಗಿದೆ. ಅಲ್ಲದೇ ಎಂ.ಆರ್.ಲಕ್ಷಮ್ಮನವರಿಗೆ ಸಂಬಂಧಿಸಿದಂತೆ ಹೇಳಿಕೆಯಲ್ಲಿನ ಹೊಗಳಿಕೆ ಮತ್ತು ತೆಗಳಿಕೆಗಳೆರಡನ್ನು ವಿಮರ್ಶೆಯ ಓರೆಗಲ್ಲಿಗೆ ಹಚ್ಚಿ ಸತ್ಯಾಂಶವನ್ನು ಪರಮರ್ಶಿಸಲಾಗಿದೆ. ಆನಂತರ ಲಕ್ಷಮ್ಮನವರ ಜೀವನ ಸಾಧನೆಗಳನ್ನು ಕುರಿತು ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಲಾಗಿದೆ. ಅಧ್ಯಯನದ ದೃಷ್ಟಿಯಿಂದ ಈ ಸಂಶೋಧನಾ ವಿಷಯವನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

:ಅಧ್ಯಾಯಗಳ ವರ್ಗೀಕರಣ:

ಅಧ್ಯಾಯ–ಒಂದು: ಪೀಠಿಕೆ

ಈ ಅಧ್ಯಾಯದಲ್ಲಿ ಎಂ.ಆರ್.ಲಕ್ಷಮ್ಮನವರ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ನಂತರ ಪ್ರಸ್ತುತ ಅಧ್ಯಯನ ವಿಷಯದ ಮಹತ್ವ ಚರ್ಚಿಸಲಾಗಿದೆ. ಎಂ.ಆರ್.ಲಕ್ಷಮ್ಮನವರು ಸ್ವಾತಂತ್ರ್ಯ ಹೋರಾಟಗಾರರಾಗಿ, ಪುರಸಭಾ ಸದಸ್ಯರು, ನ್ಯಾಯವಿಧಾಯಕಸಭೆಯ ಸದಸ್ಯರು, ವಿಧಾನಪರಿಷತ್ತಿನ ಸದಸ್ಯರಾಗಿ ರಾಜಕಾರಣಿ ಯಾಗಿ, ಸಮಾಜಸೇವಕಿಯಾಗಿ ಸ್ತ್ರೀವಾದಿ ನೆಲೆಯಲ್ಲಿ ಚಿಂತಿಸಿ ಗಣನೀಯ ಸಾಧನೆಗೈದು ವ್ಯಕ್ತಿಚರಿತ್ರೆಯ ಇತಿಹಾಸದಲ್ಲಿ ಒಂದು ಶಾಶ್ವತವಾದ ಸ್ಥಾನವನ್ನು ಗಳಿಸಿದ್ದಾರೆ. ಇಷ್ಟೆಲ್ಲಾ ಸಾಧನೆಗೈದ ಎಂ.ಆರ್.ಲಕ್ಷಮ್ಮನವರ ಬಗ್ಗೆ ಹಲವಾರು ಗ್ರಂಥವೂ ಲಭ್ಯವಾದರೂ ಯಾವುದೊಂದು ಗ್ರಂಥವೂ ಇದುವರೆಗೂ ಅವರ ವ್ಯಕ್ತಿತ್ವದ ಬಗ್ಗೆ, ಅವರು ಎಲ್ಲಾ ರಂಗದಲ್ಲಿ ಸಾಧನೆ ಮಾಡಿರುವ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ನೀಡಿರುವುದಿಲ್ಲ. ಈ ಅಧ್ಯಾಯದಲ್ಲಿ ಎಂ.ಆರ್.ಲಕ್ಷಮ್ಮನವರ ಬಗ್ಗೆ ಪ್ರಕಟಿತ ಹಾಗೂ ಅಪ್ರಕಟಿತ ಗ್ರಂಥಗಳ ಪರಿಚಯವನ್ನು ಮಾಡಲಾಗಿದೆ. ಈ ನಿಬಂಧವನ್ನು ರಚಿಸಲು ಉಪಯೋಗಿಸಿದ ಮೂಲಧಾರಗಳ ಬಗ್ಗೆಯೂ ಹಾಗೂ ಈ ಪ್ರಬಂಧವನ್ನು ಸಿದ್ದಪಡಿಸಲು ಅನುಸರಿಸಿದ ಸಂಶೋಧನಾ ವಿಧಾನದ ಬಗ್ಗೆಯೂ ಚರ್ಚಿಸಲಾಗಿದೆ.

ಅಧ್ಯಾಯ–ಎರಡು: ಎಂ.ಆರ್.ಲಕ್ಷಮ್ಮನವರ ವ್ಯಕ್ತಿಜೀವನ

ಈ ಅಧ್ಯಾಯದಲ್ಲಿ ಎಂ.ಆರ್.ಲಕ್ಷಮ್ಮನವರ ಬಾಲ್ಯಜೀವನದ ಬಗ್ಗೆ ವಿಧ್ಯಾಭ್ಯಾಸದ ಬಗ್ಗೆ ವಿವರಿಸಲಾಗಿದೆ. ಅವರು ಕೈಗೊಂಡ ಕಾರ್ಯಕ್ಷೇತ್ರಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಅವರ ವೃತ್ತಿಜೀವನದ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ–ಮೂರು: ಸ್ವಾತಂತ್ರ್ಯ ಹೋರಾಟದಲ್ಲಿ ಎಂ.ಆರ್.ಲಕ್ಷಮ್ಮನವರ ಪಾತ್ರ

ಈ ಅಧ್ಯಾಯದಲ್ಲಿ ಎಂ.ಆರ್.ಲಕ್ಷಮ್ಮನವರು ಕಾಂಗ್ರೆಸ್ ಪಕ್ಷದ ಸದಸ್ಯೆಯಾದ ಬಗ್ಗೆ ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಪಕ್ಷಗಳು ವಹಿಸಿದ ಪಾತ್ರದ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ. ಮೈಸೂರು ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯಲ್ಲಿ ಎಂ.ಆರ್.ಲಕ್ಷಮ್ಮನವರ ಪಾತ್ರದ ಬಗ್ಗೆ ವಿವರಿಸಲಾಗಿದೆ. ಎಂ.ಆರ್.ಲಕ್ಷಮ್ಮನವರು ಸೆರೆವಾಸ ಅನುಭವಿಸಿದರ ಬಗ್ಗೆ, ಸೆರೆಮನೆಯಲ್ಲಿ ಕಳೆದ ದಿನಗಳ ಬಗ್ಗೆ ರಚಿಸಿದ ತುರಂಗವಾಸದ ಅನುಭವವನ್ನು ದಾಖಲಿಸಲಾಗಿದೆ.

ಅಧ್ಯಾಯ–ನಾಲ್ಕು: ಎಂ.ಆರ್.ಲಕ್ಷಮ್ಮನವರ ರಾಜಕೀಯ ಸಾಧನೆಗಳು

ಈ ಅಧ್ಯಾಯದಲ್ಲಿ ಎಂ.ಆರ್.ಲಕ್ಷಮ್ಮನವರು ಆಕಸ್ಮಿಕವಾಗಿ ರಾಜಕೀಯ ರಂಗಕ್ಕೆ ಪ್ರವೇಶ ಮಾಡಿದರೂ ನ್ಯಾಯವಿಧಾಯಕ ಸಭೆಯ ಸದಸ್ಯೆಯಾಗಿ, ಪುರಸಭೆ ಸದಸ್ಯೆಯಾದ ಅವರ ಚಿಂತನೆಗಳ ಬಗ್ಗೆ ಚರ್ಚಿಸಲಾಗಿದೆ. 1952, 1958, 1964 ರಲ್ಲಿ ವಿಧಾನ ಪರಿಷತ್ತಿನ ಸದಸ್ಯೆಯಾಗಿ ಅವರ ಚರ್ಚೆ ಮತ್ತು ಭಾಷಣಗಳಲ್ಲಿನ ನಿಲುವುಗಳನ್ನು, ಚಿಂತನೆಗಳನ್ನು ವಿವರಿಸಲಾಗಿದೆ. ರಾಜಕೀಯ ಮತ್ತು ಸಂಸ್ಕೃತಿಯ ರಾಯಭಾರಿಯಾಗಿ ಅಮೇರಿಕಾ ದೇಶದ ಪ್ರವಾಸ ಮಾಡಿದ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ ಐದು: ಎಂ.ಆರ್.ಲಕ್ಷಮ್ಮನವರು ಮತ್ತು ಪತ್ರಿಕೋದ್ಯಮ

ಎಂ.ಆರ್.ಲಕ್ಷಮ್ಮನವರು ಸಾಹಿತ್ಯ ಸೇವೆ ಮತ್ತು ಅವರು ಪ್ರಾರಂಭಿಸಿದ 'ಸೋದರಿ' ವಾರ ಪತ್ರಿಕೆಯ ಬಗ್ಗೆ ಈ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಆರು: ಸಮಾಜಸೇವಾಕ್ಷೇತ್ರ ಮತ್ತು ಎಂ.ಆರ್.ಲಕ್ಷಮ್ಮ

ಈ ಅಧ್ಯಾಯದಲ್ಲಿ ಮಹಿಳಾ ಮಂಡಳಿಗಳ ಸ್ಥಾಪನೆಯಲ್ಲಿ ಎಂ.ಆರ್.ಲಕ್ಷಮ್ಮನವರು ವಹಿಸಿದ ಪಾತ್ರದ ಬಗ್ಗೆ ವಿವರಿಸಲಾಗಿದೆ. 1954ರಲ್ಲಿ ಪ್ರಾರಂಭವಾದ ಮೈಸೂರು ರಾಜ್ಯದ ಸಮಾಜಕಲ್ಯಾಣ ಇಲಾಖೆಯ ಅಧ್ಯಕ್ಷೆಯಾಗಿ ಎಂ.ಆರ್.ಲಕ್ಷಮ್ಮನವರು ಸಲ್ಲಿಸಿದ ಸೇವೆ ಬಗ್ಗೆ, ಗ್ರಾಹಕರ ವೇದಿಕೆಯ ಕಾರ್ಯಾಧ್ಯಕ್ಷೆಯಾಗಿ ಅವರು ನಿರ್ವಹಿಸಿದ ಕಾರ್ಯದ ಬಗ್ಗೆ, ಕರ್ನಾಟಕ ಪಾನ ಸಂಯಮ ಮಂಡಳಿಯ ಅಧ್ಯಕ್ಷೆಯಾಗಿ ಜನರಲ್ಲಿ ಜಾಗೃತಿ ಮೂಡಿಸಿದ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ ಏಳು: ಉಪಸಂಹಾರ

ಈ ಅಧ್ಯಾಯದಲ್ಲಿ ನಿಬಂಧದ ಅಧ್ಯಯನದ ಒಟ್ಟಾರೆ ಫಲಿತಾಂಶದ ವಿವರಣೆಗಳನ್ನು ನೀಡಲಾಗಿದೆ. ಸಮಾಜಸೇವಕಿಯಾಗಿ, ರಾಜಕಾರಣಿಯಾಗಿ,

ಪತ್ರಕರ್ತೆಯಾಗಿ, ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ ಅವರ ಕಾರ್ಯಚಟುವಟಿಕೆಗಳ ಕ್ಷೇತ್ರ ವಿಸ್ತಾರವಾಗಿದ್ದು ಎಲ್ಲ ರಂಗದಲ್ಲಿಯೂ ಅವರ ಸಾಧನೆ ಅಪ್ರತಿಮವಾದದ್ದು ಮತ್ತು ಅನುಕರಣೀಯವಾಗಿದೆ. ಓರ್ವ ಸ್ತ್ರೀ ಸಮಾಜದ ವಿವಿಧ ರಂಗದಲ್ಲಿ ಮಾಡಬಹುದಾದ ಕಾರ್ಯಗಳ ಬಗ್ಗೆ, ಅಲ್ಲದೇ ಈ ಎಲ್ಲಾ ಕ್ಷೇತ್ರಗಳಲ್ಲೂ ಎಂ.ಆರ್.ಲಕ್ಷಮ್ಮನವರು ಮಾಡಿದ ನಿಸ್ವಾರ್ಥ ಸೇವೆಯನ್ನು ವಿಮರ್ಶಾದೃಷ್ಠಿಯಿಂದ ಪರಮಾರ್ಶಿಸಲಾಗಿದೆ.

ಅಡಿಟಿಪ್ಪಣಿಗಳು

1. ಸುರೇಶ್‌ಮೂನ, ಬೆಂಗಳೂರು ನಗರ ನಿರ್ಮಾಪಕರು ಭಾಗ–2, ಪುಟಸಂಖ್ಯೆ–171
2. ಎಂ.ಆರ್.ಲಕ್ಷಮ್ಮನವರ ಸ್ವವಿವರ, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು. ಪುಟಸಂಖ್ಯೆ–1
3. ಕರ್ನಾಟಕ ವಿಧಾನಸಭೆ 1952–2012. 60ನೇ ವಾರ್ಷಿಕೋತ್ಸವ ಸಮಾರಂಭದ ಸ್ಮರಣ ಸಂಚಿಕೆ. ಪುಟಸಂಖ್ಯೆ–34
4. ಮಾಹಿತಿಸಂಗ್ರಹಣೆ ಸಂಶೋಧಕರಿಂದ ಶ್ರೀ ಮಾಧವ.ಎನ್.ಮೂರ್ಚಿಂಗ್, (ಎಂ.ಆರ್.ಲಕ್ಷಮ್ಮನವರ ಮಗ) ದಿನಾಂಕ.12–05–2013

ಅಧ್ಯಾಯ ಎರಡು

ಎಂ.ಆರ್.ಲಕ್ಷಮ್ಮನವರ ವ್ಯಕ್ತಿಜೀವನ :

ಹೆಣ್ಣೆಂದರೆ ಮನೆಯ ನಾಲ್ಕು ಗೋಡೆಯ ನಡುವೆ ಮನೆ, ಮದುವೆ ಮಕ್ಕಳು ಎಂಬ ಬಂಧನದಲ್ಲಿ ಸಿಲುಕಿ ತನ್ನ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳುವ ಸಾಮಾಜಿಕ ವಾತಾವರಣದಲ್ಲಿ ಹುಟ್ಟಿದರೂ, ಹೆಣ್ಣಿನ ಜಗತ್ತು ಇಷ್ಟೇ ಅಲ್ಲ, ಆಕೆಯೂ ಶಕ್ತಳು. ಆಕೆಯು ಸಾಹಿತ್ಯ, ಶಿಕ್ಷಣ, ಪತ್ರಿಕೋದ್ಯಮ, ರಾಜಕಾರಣ, ಸಮಾಜಸೇವೆ, ಚಳುವಳಿ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಭಾಗವಹಿಸಿ ಅವುಗಳನ್ನು ದಕ್ಷತೆಯಿಂದ ನಿರ್ವಹಿಸಿ ಅಧಿಕಾರದ ಚುಕ್ಕಾಣಿ ಹಿಡಿದು ಯೋಗ್ಯ ಸೇವೆ ಸಲ್ಲಿಸಬಲ್ಲಳು ಎಂಬುದನ್ನು ತಮ್ಮ ಬದುಕಿನಲ್ಲಿ ತೋರಿಸಿಕೊಟ್ಟವರು ಎಂ.ಆರ್.ಲಕ್ಷಮ್ಮ.

ಬಾಲ್ಯ ಜೀವನ

ಎಂ.ಆರ್.ಲಕ್ಷಮ್ಮನವರು ರಾಣ್ಯದ ರಾಮರಾವ್ ಮತ್ತು ಶ್ರೀಮತಿ ಪದ್ಮಾವತಮ್ಮ ದಂಪತಿಗಳ ಜೇಷ್ಠ ಪುತ್ರಿಯಾಗಿ ದಿನಾಂಕ:24–3–1913ರಂದು ಅವರ ತಾಯಿಯ ತವರೂರಾದ ಆಂಧ್ರ ಪ್ರದೇಶದ ಅನಂತಪುರ ಜಿಲ್ಲೆಯ ಅಯ್ಯಗಾರ್ಲಪಳ್ಳಿಯಲ್ಲಿ ಜನಿಸಿದರು. ಅವರ ತಂದೆ ರಾಜ್ಯದ ರಾಮರಾವ್ ಅವರು ಮೂಲತಃ ದಾವಣಗೆರೆ ಜಿಲ್ಲೆಯ ನರಗನಹಳ್ಳಿಯವರಾಗಿದ್ದು, ಮೈಸೂರಿನ ಪುರಾತತ್ವ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರು ಹಾಗೂ ಸಂಶೋಧಕರಾಗಿದ್ದರು.[1] ಶ್ರೀಮತಿ ಎಂ.ಆರ್. ಲಕ್ಷಮ್ಮನವರ ಇಬ್ಬರು ಕಿರಿಯ ಸಹೋದರಿಯರು ಹಾಗೂ ಒಬ್ಬ ಕಿರಿಯ ಸಹೋದರನ್ನೊಳಗೊಂಡ ತುಂಬು ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿದರೂ ತಮ್ಮ ವ್ಯಕ್ತಿತ್ವವನ್ನು ವಿಶಿಷ್ಠ ರೀತಿಯಲ್ಲಿ ರೂಪಿಸಿಕೊಂಡವರಾಗಿದ್ದಾರೆ. ಕಿರಿಯ ಸಹೋದರಿಯರಾದ ಎಂ.ಆರ್.ನಾಗರತ್ನಮ್ಮ, ಎಂ.ಆರ್.ಸೇತು ಸಾವಿತ್ರಿ ಹಾಗೂ ಎಂ.ಆರ್ ಅನಂತರಾವ್‌ರವರಿಗೆ ಪ್ರೀತಿಯ ಅಕ್ಕನಾಗಿದ್ದರು.

ವಿದ್ಯಾಭ್ಯಾಸ ಮತ್ತು ವೈವಾಹಿಕ ಜೀವನ

ಮೈಸೂರಿನಲ್ಲಿ ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದ ಎಂ.ಆರ್.ಲಕ್ಷಮ್ಮನವರು ಮಾಧ್ಯಮಿಕ ಮೂರನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ಅವರ ತಂದೆ ಆಗಿನ ಕಾಲದ ಸಂಪ್ರದಾಯದಂತೆ ಲಕ್ಷಮ್ಮನವರಿಗೆ ಹನ್ನೊಂದು ವರ್ಷ ವಯಸ್ಸಿನಲ್ಲಿಯೇ ಮೈಸೂರಿನ ಎಂ. ನಾರಾಯಣ ಮೂರ್ತಿಯವರೊಡನೆ ವಿವಾಹವನ್ನು ನೆರವೇರಿಸಿದರು.

'ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ' ಎಂಬುದು ಎಷ್ಟು ಸತ್ಯವೋ ಹಾಗೆಯೇ ಪ್ರತಿಯೊಬ್ಬ ಯಶಸ್ವಿ ಮಹಿಳೆಯ ಹಿಂದೆ ಒಬ್ಬ ಪುರುಷನೂ ಕೂಡ ಇರುತ್ತಾನೆ ಎಂಬುದು ಅಷ್ಟೇ ಸತ್ಯ. ವೃತ್ತಿಯಲ್ಲಿ ಇಂಜಿನಿಯರ್ ಆಗಿದ್ದ

ಲಕ್ಷಮ್ಮನವರ ಪತಿ ಎಂ. ನಾರಾಯಣಮೂರ್ತಿಯವರು ತಮ್ಮ ಪತ್ನಿಗೆ ವಿದ್ಯೆಯಲ್ಲಿ ಇದ್ದ ಆಸಕ್ತಿಯನ್ನು ಗಮನಿಸಿ, ಮುಂದೆ ಓದಲು ಸಂಪೂರ್ಣ ಸಹಕಾರ ಉತ್ತೇಜನ ನೀಡಿ ಪ್ರೋತ್ಸಾಹಿಸಿದರು. ಬುದ್ದಿವಂತೆ ಹಾಗೂ ವಿದ್ಯೆಯಲ್ಲಿ ಶ್ರದ್ಧೆ ಇದ್ದುದರಿಂದ ಎಂ.ಆರ್ ಲಕ್ಷಮ್ಮನವರು ವಿವಾಹದ ನಂತರ ತಮ್ಮ ಓದನ್ನು ಮುಂದುವರಿಸಿ ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಮುಂದೆ ಮೆಟ್ರಿಕ್ ಶಿಕ್ಷಣವನ್ನು ಪೂರೈಸಿ ಮೈಸೂರಿನ ಮಹಾರಾಣಿ ಕಾಲೇಜಿಗೆ ಇಂಟರ್ ಮೀಡಿಯೇಟ್‌ಗೆ ಸೇರಿ ಕಾಲೇಜು ಶಿಕ್ಷಣವನ್ನು ಮುಂದುವರಿಸಿದರು. ಇಂಟರ್ ಮೀಡಿಯೇಟ್‌ನ ಕಲಾವಿಭಾಗದಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮೊದಲ ರ್‍ಯಾಂಕ್ ಪಡೆದರು[2]. ಕಾಲೇಜು ಶಿಕ್ಷಣಕ್ಕೆ ಸೇರುವ ವಿದ್ಯಾರ್ಥಿನಿಯರಿಗೆ ಮೈಸೂರು ಮಹಾರಾಜರು ಪೆಟ್ಟಿಗೆ ಗಾಡಿಯ ವ್ಯವಸ್ಥೆಯನ್ನು ಮಾಡಿದ್ದು, ಲಕ್ಷಮ್ಮನವರು ಎತ್ತುಗಳಿಂದ ಎಳೆಯಲ್ಪಡುತ್ತಿದ್ದ ಪೆಟ್ಟಿಗೆ ಗಾಡಿಯಲ್ಲಿ ಕಾಲೇಜಿಗೆ ಹೋಗುತ್ತಿದ್ದರು.[3] ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಬಿ.ಎ ತರಗತಿ ಸೇರಿಕೊಂಡು ಪದವಿ ಶಿಕ್ಷಣವನ್ನು ಪೂರೈಸಿದರು. ಹೆಣ್ಣು ಮಕ್ಕಳಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದವರು ಅತಿ ವಿರಳವಾಗಿದ್ದ ಕಾಲದಲ್ಲಿ ಲಕ್ಷಮ್ಮನವರು ತಮ್ಮ ಮೊದಲ ಮಗುವಿಗೆ ಒಂದು ತಿಂಗಳಾಗಿದ್ದು, ತಾಯಿಯಾಗಿದ್ದ ಸಮಯದಲ್ಲಿ ಬಿ.ಎ. ಅಂತಿಮ ವರ್ಷದ ಪರೀಕ್ಷೆಯನ್ನು ಬರೆದಿದ್ದರು. ಅವರ ಆತ್ಮ ವಿಶ್ವಾಸ ವಿದ್ಯೆ ಬಗ್ಗೆ ಅವರಿಗಿದ್ದ ಆಸಕ್ತಿ ಗುರಿ ಸಾಧಿಸುವ ಛಲ ಅನುಕರಣೀಯವಾದದ್ದು. ಅವರ ಮೊದಲ ಮಗ ಶ್ರೀ ಮಾಧವ ಮೂರ್ಚಿಂಗ್‌ರು. **'ನಾನು ವೃತ್ತಿಯಲ್ಲಿ ಎಂಜಿನಿಯರ್ ಆಗಿದ್ದರೂ ನನಗೆ ಇತಿಹಾಸದ ಬಗ್ಗೆ ಬಹಳ ಆಸಕ್ತಿ. ಬಹುಶ: ನಾನು ಗರ್ಭದಲ್ಲಿ ಇರುವಾಗ ನಮ್ಮ ತಾಯಿಯವರು ಬಿ.ಎ ಪರೀಕ್ಷೆಗೆ ಇತಿಹಾಸ ವಿಷಯದಲ್ಲಿ ಸಿದ್ದತೆ ಮಾಡಿಕೊಂಡಿದ್ದರ ಪರಿಣಾಮವಿರಬಹುದು'** ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ವಿಭಾಗದ ವಿದ್ಯಾರ್ಥಿನಿಯಾಗಿ ಸೇರಿಕೊಂಡು ಎಂ.ಆರ್ ಲಕ್ಷಮ್ಮನವರು ಎಂ.ಎ ಪರೀಕ್ಷೆಯನ್ನು ಬರೆಯುವಾಗ ಎಂಟೊಂಬತ್ತು ತಿಂಗಳ ಗರ್ಭಿಣಿಯಾಗಿದ್ದರೂ ಓದಿನ ಬಗ್ಗೆ ಇದ್ದ ಶ್ರದ್ಧೆ ಕಡಿಮೆಯಾಗದ ಇವರು ಎಂ.ಎ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯೊಡನೆ ಚಿನ್ನದ ಪದಕವನ್ನು ಪಡೆದು ತಮ್ಮ ಸ್ನಾತಕೋತ್ತರ ಪದವಿಯನ್ನು ಪಡೆಯುವಲ್ಲಿ ಸಫಲವಾದರು.[4]

ವೃತ್ತಿ ಜೀವನ

'ಆಡು ಮುಟ್ಟದ ಸೊಪ್ಪಿಲ್ಲ ಎಂ.ಆರ್.ಲಕ್ಷಮ್ಮನವರು ಮಾಡದ ಕೆಲಸವಿಲ್ಲ' ಎಂ.ಆರ್ ಲಕ್ಷಮ್ಮನವರು ಏಕಕಾಲದಲ್ಲಿಯೇ ಹಲವಾರು ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಇಂಗ್ಲೀಷ್‌ನ ಗಾದೆ **'ಎಲ್ಲ ಕ್ಷೇತ್ರವನ್ನು ತಿಳಿದಿರು. ಆದರೆ ಒಂದು ಕ್ಷೇತ್ರದಲ್ಲಿ ಪರಿಣಿತನಾಗು'** ಎಂಬುದು ಎಂ.ಆರ್.ಲಕ್ಷಮ್ಮನವರ ವಿಷಯದಲ್ಲಿ ಸುಳ್ಳಾಗಿದೆ. ಬಹುಮುಖ ಪ್ರತಿಭೆಯನ್ನೊಳಗೊಂಡ ವ್ಯಕ್ತಿತ್ವವನ್ನು ಹೊಂದಿದ್ದ ಅವರು ಎಲ್ಲ

ಕ್ಷೇತ್ರಗಳಲ್ಲಿಯೂ ಪರಿಣಿತಿಯನ್ನು ಹೊಂದಿದವರಾಗಿದ್ದು, ಅವರ ಸೇವಾ ಕ್ಷೇತ್ರದ ವ್ಯಾಪ್ತಿ ಬಹಳ ವಿಶಾಲವಾದುದ್ದು. ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗಲೇ ಸಾಧ್ವಿ ಪತ್ರಿಕೆ ಮತ್ತು ಪ್ರಬುದ್ಧಕರ್ನಾಟಕಕ್ಕೆ ಕವನಗಳನ್ನು ಲೇಖನಗಳನ್ನು ಬರೆಯುತ್ತಿದ್ದರು. ಇತಿಹಾಸದ ವಿದ್ಯಾರ್ಥಿನಿಯಾಗಿದ್ದ ಅವರು ಜಾನಪದ ಕ್ಷೇತ್ರದ ಕಡೆಗೆ ಒಲವನ್ನಿಟ್ಟುಕೊಂಡಿದ್ದರು. ಜಾನಪದ ಕಥೆಗಳನ್ನು ಸಂಗ್ರಹಿಸುವುದು ಎಂ.ಆರ್ ಲಕ್ಷಮ್ಮನವರ ಹವ್ಯಾಸವಾಗಿತ್ತು. **'ಕೊಂತಮ್ಮನ ಪದಗಳು'** ಎಂಬ ಜಾನಪದ ಗೀತೆಗಳನ್ನು ಸಂಗ್ರಹಿಸಿ ಅವುಗಳನ್ನು ಪ್ರಕಟಿಸಿ ಅವುಗಳ ಮೇಲೆ ವಿಮರ್ಶೆಯನ್ನು ಬರೆದಿದ್ದಾರೆ.[5] ಜನಸಾಮಾನ್ಯರ ಜೀವನವನ್ನು ಅರಿಯಲು ಸಹಾಯಕವಾಗುವ ಜಾನಪದ ಕ್ಷೇತ್ರವನ್ನು ಇತಿಹಾಸದ ದೃಷ್ಟಿಕೋನದಿಂದ ನೋಡಿ ವಿಮರ್ಶೆಯನ್ನು ರಚಿಸಿದ್ದಾರೆ.

ಇತಿಹಾಸದ ಮತ್ತು ಪುರಾತತ್ವ ಶಾಸ್ತ್ರದ ವಿದ್ಯಾರ್ಥಿನಿಯಾಗಿದ್ದ ಇವರು ಓದು ಮುಗಿದ ನಂತರ ಆರ್ಥಿಕ ಪರಿಸ್ಥಿತಿ ದುಸ್ಥಿತಿಯಲ್ಲಿದ್ದ ಕಾರಣ ಕೆಲಸಕ್ಕೆ ಸೇರಲು ಪ್ರಯತ್ನಿಸಿದರು. ವಿಶ್ವವಿದ್ಯಾನಿಲಯದ ಪುರಾತತ್ವ ವಿಭಾಗದಲ್ಲಿ ಕೆಲಸಕ್ಕೆ ಸೇರುವ ಇಚ್ಚೆಯನ್ನು ವ್ಯಕ್ತಪಡಿಸಿದಾಗ **'ಮಹಿಳೆಯಾಗಿದ್ದರಿಂದ ಹಾಗೂ ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ್ದರಿಂದ ವಿಶ್ವವಿದ್ಯಾನಿಲಯದ ಬಾಗಿಲು ನಿಮಗೆ ಮುಚ್ಚಿವೆ'** ಎಂಬ ಮಾತನ್ನು ಪ್ರೊಫೆಸರ್ ಆಗಿದ್ದ ವಿ.ಎಲ್. ಡಿಸೋಜಾರವರು ಹೇಳಿದಾಗ ಲಕ್ಷಮ್ಮನವರ ಆಸಕ್ತಿ ಸಾಹಿತ್ಯ ಮತ್ತು ಸಮಾಜ ಸೇವಾ ಕ್ಷೇತ್ರದತ್ತ ಹರಿಯಿತು.[6]

ಆಕಾಶವಾಣಿ ಮತ್ತು ಸಮಾಜ ಸೇವೆಯಲ್ಲಿ ಎಂ.ಆರ್.ಲಕ್ಷಮ್ಮ

ಹಿಂದಿನ ಕಾಲದಲ್ಲಿ ಹೆಣ್ಣು ಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ಕಳುಹಿಸುವುದೇ ಕಷ್ಟವಾಗಿದ್ದ ಹಾಗೂ ಅವರಿಗೆ ಸ್ವಾತಂತ್ರ್ಯ ನೀಡಿ ಸಾರ್ವಜನಿಕ ಸೇವೆಗೆ ಕಳುಹಿಸುವುದಂತೂ ದೂರದ ಮಾತಾಗಿದ್ದ ಕಾಲದಲ್ಲಿ ಸಂಪ್ರದಾಯಸ್ಥ ಮನೆತನದಲ್ಲಿ ಜನಿಸಿದ್ದರೂ ಅವರ ತಂದೆಯವರು ಬೆಂಬಲ ನೀಡುವುದರೊಂದಿಗೆ 'ಕೆಲಸಕ್ಕೆ ಸೇರಿ ಹಣ ಸಂಪಾದಿಸುವುದಕ್ಕಿಂತ ನೀನೊಬ್ಬ ಸಮಾಜ ಸೇವಕಿಯಾಗಬೇಕೆಂಬುದು ನನ್ನಾಸೇ ಮಗಳೇ' ಎಂದು ಲಕ್ಷಮ್ಮನವರ ಸಮಾಜ ಸೇವೆಗೆ ಅಡಿಪಾಯವನ್ನು ಹಾಕಿದರು ಮತ್ತು ಅದನ್ನು ನೀರೆರೆದು ಪೋಷಿಸಿದವರು ವಿಶಾಲ ಹೃದಯದ ಪತಿ ಎಂ. ನಾರಾಯಣಮೂರ್ತಿಯವರು.[7] ಎಂ.ಆರ್ ಲಕ್ಷಮ್ಮನವರಿಗಿದ್ದ ಜಾಣ್ಮೆ, ಮಾತುಗಾರಿಕೆ, ಸೇವಾ ಮನೋಭಾವ, ಸಾಮಾಜಿಕ ಪ್ರಜ್ಞೆ, ವಿದ್ಯೆ ಇವೆಲ್ಲದರ ಜೊತೆಗೆ ಅವರ ಹಸನ್ಮುಖ ಮತ್ತು ಸದಾ ಪುಟಿಯುವ ಉತ್ಸಾಹ ಅವರು ಸಮಾಜ ಕ್ಷೇತ್ರದಲ್ಲಿ ತೊಡಗಿಕೊಳ್ಳಲು ಸಹಾಯಕಾರಿಯಾಯಿತು. ಹಲವಾರು ಮಹಿಳಾ ಮಂಡಳಿಗಳನ್ನು ಸ್ಥಾಪಿಸಿದರು. ವನಿತಾಸದನ, ಭಗಿನಿಸೇವಾಸಮಾಜ ಮುಂತಾದ ಮಹಿಳಾ ಸಮಾಜಗಳಲ್ಲಿ ಸದಸ್ಯೆಯಾಗಿ ಅಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸಿದರು.

ಸಾಹಿತ್ಯ ಪ್ರಿಯೆಯಾಗಿದ್ದ ಎಂ.ಆರ್.ಲಕ್ಷಮ್ಮನವರು ಆಕಾಶವಾಣಿಗೆ ನಾಟಕಗಳನ್ನು ಮತ್ತು ರೂಪಕಗಳನ್ನು ಬರೆಯುತ್ತಿದ್ದು, ಮೈಸೂರಿನ ಆಕಾಶವಾಣಿಯ ವಿವಿಧ ವಿಭಾಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಕೆಲಸಕ್ಕೆ ಸೇರಿಸಿಕೊಂಡಿದ್ದರೂ ಅದರಿಂದ ಬರುತ್ತಿದ್ದ ಗಳಿಕೆ ಅಲ್ಪಾದಾಯವಾಗಿತ್ತು. ಸಾಹಿತ್ಯ ಕ್ಷೇತ್ರದಲ್ಲಿನ ಆಸಕ್ತಿ ಹವ್ಯಾಸವಾಗಿ ಆಕಾಶವಾಣಿಯಲ್ಲಿ ಅನಾವರಣಗೊಂಡಿತು. ಎಂ.ಆರ್.ಲಕ್ಷಮ್ಮ ನವರು ರಚಿಸಿದ ಅನೇಕ ನಾಟಕಗಳು ಮೈಸೂರು ಆಕಾಶವಾಣಿಯಲ್ಲಿ ಅಲ್ಲದೇ ಹೈದ್ರಾಬಾದ್ ಮತ್ತು ಮದ್ರಾಸಿನ ಆಕಾಶವಾಣಿಯ ಕನ್ನಡ ವಿಭಾಗದಲ್ಲಿ ಪ್ರಸಾರಗೊಂಡವು.[8]

ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಎಂ.ಆರ್.ಲಕ್ಷಮ್ಮ

ಎಂ.ಆರ್.ಲಕ್ಷಮ್ಮನವರು ಪದವಿ ವ್ಯಾಸಂಗ ಮಾಡುತ್ತಿದ್ದಾಗಲೇ ನಾ.ಕಸ್ತೂರಿ ಮತ್ತಿತರ ವಿದ್ಯಾವಂತರೊಂದಿಗೆ ಸೇರಿ ಪ್ರೊ.ಈಗಲ್ಟನ್‌ರ ನೇತ್ರತ್ವದಲ್ಲಿ ಮೈಸೂರಿನ ಕೂರ್ಗಳ್ಳಿಯಲ್ಲಿ ಅನಕ್ಷರಸ್ಥರಿಗೆ ಅಕ್ಷರ ಕಲಿಸುವ ಕಾರ್ಯಕ್ರಮದ ಮೂಲಕ ಇರುವ ಶಿಕ್ಷಣದ ಅರಿವನ್ನು ಮೂಡಿಸಲು ಪ್ರಾರಂಭಿಸಿದರು.[9] ಅನೇಕ ಲೇಖನಗಳನ್ನು ಕವನಗಳನ್ನು ಬರೆಯುತ್ತಿದ್ದ ಎಂ.ಆರ್ ಲಕ್ಷಮ್ಮನವರು ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ನ.ಭದ್ರಯ್ಯ, ಎಸ್.ಬಿ.ಶ್ರೀನಿವಾಸರಾವ್, ಟಿ. ಕೃಷ್ಣಮೂರ್ತಿಯವರೊಂದಿಗೆ ಕಾರ್ಯ ನಿರ್ವಹಿಸುತ್ತಿದ್ದರು.[10] ಇವರ ಸಮಾಜ ಸೇವೆ ಮತ್ತು ಇವರಿಗಿದ್ದ ಸಾಹಿತ್ಯದ ಪ್ರತಿಭೆಯನ್ನು ಅರಿತು ವಯಸ್ಕರ ಶಿಕ್ಷಣ ಸಮಿತಿಯ ಪದಾಧಿಕಾರಿಗಳು **'ಬೆಳಕು'** ವಾರ ಪತ್ರಿಕೆಯ ಪ್ರಥಮ ಸಂಪಾದನೆಯಾಗುವ ಹೊಣೆಗಾರಿಕೆಯನ್ನು ನೀಡಿದರು.[11] ಇದರಿಂದ ಬರುವ ಆರ್ಥಿಕ ಲಾಭಕ್ಕಿಂತ ಸಾಹಿತ್ಯದ ಆಸಕ್ತಿ ಮತ್ತು ಸಮಾಜ ಸೇವಾಸಕ್ತರಾದ ಎಂ.ಆರ್.ಲಕ್ಷಮ್ಮನವರು ಸಂಪಾದಕಿಯಾಗಲು ಒಪ್ಪಿಕೊಂಡರು.

ಹೆಣ್ಣು ಮಕ್ಕಳಿಗೆ ಪತ್ರಿಕೋದ್ಯಮ ದೂರದ ಬೆಟ್ಟವಾಗಿದ್ದ ಕಾಲದಲ್ಲಿ ಸತತವಾಗಿ ಮೂರು ವರ್ಷಗಳ ಕಾಲ ಬೆಳಕು ವಾರ ಪತ್ರಿಕೆಯ ಸಂಪಾದಕಿಯಾಗಿ ಕಾರ್ಯ ನಿರ್ವಹಿಸಿದರು. ಈ ಮೊದಲೇ ಎಂ. ಆರ್ ಲಕ್ಷಮ್ಮನವರು **'ಕುಂತಿದೇವಿ'** ಮತ್ತು **'ಮಾರುತಿ'** ಎಂಬ ಎರಡು ಸಣ್ಣ ಕಥೆಗಳನ್ನು ಬರೆದಿದ್ದು, ಅವುಗಳನ್ನು ಮೈಸೂರು ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿಯು ವಯಸ್ಕರ ಶಿಕ್ಷಣದ ಪುಸ್ತಕ ಮಾಲೆಯಲ್ಲಿ ಈ ಎರಡು ಪುಸ್ತಕಗಳನ್ನು ಅಂಗೀಕರಿಸಿದ್ದರು.

ಹೊಸದಾಗಿ ಅಕ್ಷರವನ್ನು ಕಲಿಯುವವರಿಗೆ ಚಿಕ್ಕ ಚೊಕ್ಕ ಮತ್ತು ಸರಳ ವಾಕ್ಯಗಳಲ್ಲಿ ವಿಚಾರಗಳನ್ನು ತಿಳಿಸುವ, ಅರಿವನ್ನು ಜ್ಞಾನವನ್ನು ಮೂಡಿಸುವ ಕೆಲಸವನ್ನು ಲಕ್ಷಮ್ಮ ನವರು ಮಾಡಿಸಿದರು. **'ಎಲ್ಲ ದಾನಕ್ಕಿಂತ ಶ್ರೇಷ್ಠ ದಾನ ವಿದ್ಯಾದಾನ'** ಎಂಬುದನ್ನು ಅರಿತು 'ಬೆಳಕು' ಪತ್ರಿಕೆಯ ಸಂಪಾದಕಿಯಾಗಿ ಅಕ್ಷರ ಜ್ಞಾನವನ್ನು ನೀಡುವುದರಲ್ಲಿ ಮಗ್ನರಾದ ಇವರ ಕಾರ್ಯ ಎಲ್ಲರಿಂದ ಪ್ರಶಂಸೆಯನ್ನು ಮೆಚ್ಚುಗೆಯನ್ನು ಗಳಿಸಿತು.

ರಾಜಕೀಯ ರಂಗಕ್ಕೆ ಎಂ.ಆರ್.ಲಕ್ಷಮ್ಮನವರ ಆಗಮನ

ಸಮಾಜ ಸೇವೆ, ಸಾಹಿತ್ಯ ಸೇವೆ ಮಾಡಿಕೊಂಡಿದ್ದ ಎಂ.ಆರ್.ಲಕ್ಷಮ್ಮನವರು ಆಕಸ್ಮಿಕವಾಗಿ ರಾಜಕೀಯ ರಂಗಕ್ಕೆ ಅಡಿ ಇಟ್ಟರು. 1945ರಲ್ಲಿ ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಸಾಹುಕಾರ ಚನ್ನಯ್ಯನವರು ಮತ್ತು ಮೈಸೂರು ಪುರಸಭೆಯ ಸದಸ್ಯರು ಮತ್ತು ಕಾಂಗ್ರೆಸ್ ನಾಯಕರಾಗಿದ್ದ ಟಿ.ಮರಿಯಪ್ಪನವರು ಎಂ.ಆರ್.ಲಕ್ಷಮ್ಮನವರ ಸಮಾಜ ಸೇವೆಯನ್ನು ಗಮನಿಸಿ ರಾಜಕೀಯ ಕ್ಷೇತ್ರಕ್ಕೆ ಬರುವಂತೆ ಒತ್ತಾಯಿಸಿದರು. 1945ರಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯತ್ವವನ್ನು ಪಡೆದುಕೊಂಡ ಎಂ.ಆರ್.ಲಕ್ಷಮ್ಮನವರು ರಾಜಕಾರಣಕ್ಕೆ ಒಲ್ಲದ ಮನಸ್ಸಿನಿಂದಲೇ ಕಾಲಿಟ್ಟರೂ ಅವರು ಸಲ್ಲಿಸಿದ ಸೇವೆ ಗಣನೀಯವಾದುದ್ದು.

1945ರಲ್ಲಿ ಪ್ರಜಾಪ್ರತಿನಿಧಿ ಸಭೆಯ ಮೇಲ್ಮನೆಯಾದ ನ್ಯಾಯ ವಿಧಾಯಕ ಸಭೆಗೆ ಮೈಸೂರು ಮಹಿಳಾ ಕ್ಷೇತ್ರದಿಂದ ಚುನಾವಣೆ ನಡೆಯಲಿದ್ದು, ಚುನಾವಣೆಗೆ ನಿಲ್ಲುವ ಮೂಲಕ ರಾಜಕೀಯ ರಂಗವನ್ನು ಪ್ರವೇಶಿಸಿದ ಎಂ.ಆರ್.ಲಕ್ಷಮ್ಮನವರು ಅವಿರೋಧವಾಗಿ ನ್ಯಾಯ ವಿಧಾಯಕ ಸಭೆಗೆ ಆಯ್ಕೆಯಾದರು. 1946ರಲ್ಲಿ ಮೈಸೂರು ಪುರಸಭೆಗೆ ಆಯ್ಕೆಯಾಗಿ ಮೂರು ವರ್ಷಗಳ ಕಾಲ ಪುರಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದರು. ಒಂದು ವರ್ಷದ ಅವಧಿಗೆ ಪುರಸಭೆಯ ಉಪಾಧ್ಯಕ್ಷೆಯಾಗಿ ಸೇವೆ ಸಲ್ಲಿಸಿದರು.[12] ರಾಜಕೀಯ ರಂಗದ ಪ್ರವೇಶದ ನಂತರ ದೇಶಸೇವೆಗೆ ತಮ್ಮನ್ನು ಮುಡಿಪಾಗಿಟ್ಟ ಎಂ.ಆರ್.ಲಕ್ಷಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ಮೈಸೂರು ಸಂಸ್ಥಾನದಲ್ಲಿ ನಡೆದ ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ಭಾಗವಹಿಸಿ, 1947 ಸೆಪ್ಟೆಂಬರ್ 4 ರಂದು ರಾತ್ರಿ 10.30 ಗಂಟೆಗೆ ಬಂಧಿಸಲ್ಪಟ್ಟರು.[13]

33 ದಿನಗಳ ಕಾರಾಗೃಹ ವಾಸವನ್ನು ಅನುಭವಿಸಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಸೆರೆವಾಸ ಅನುಭವಿಸಿ ಹೊರ ಬಂದ ಎಂ.ಆರ್.ಲಕ್ಷಮ್ಮನವರ ನ್ಯಾಯವಿಧಾಯಕ ಸಭೆಯ ಸದಸ್ಯತ್ವ ರದ್ದುಗೊಳಿಸಲ್ಪಟ್ಟಿತ್ತು. ಎಂ.ಆರ್.ಲಕ್ಷಮ್ಮನವರು 1949ರಿಂದ 1952ರವರೆಗೆ ಮಹಿಳಾ ಅಭಿವೃದ್ಧಿಗೆ ಸಂಬಂಧಪಟ್ಟ ಅನೇಕ ಕಾರ್ಯಗಳನ್ನು ಕೈಗೊಳ್ಳುವುದರ ಮೂಲಕ ತಮ್ಮನ್ನು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡರು.

ಸ್ವಾತಂತ್ರ್ಯ ನಂತರ 1952ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ರಾಜಕೀಯ ರಂಗಕ್ಕೆ ಪುನರಾಗಮಿಸಿದರು. 1958ರಲ್ಲಿ ಮತ್ತು 1964ರಂದು ಸತತವಾಗಿ ಪಧವೀಧರ ಕ್ಷೇತ್ರದಿಂದ ಚುನಾವಣೆಯಲ್ಲಿ ಬಹುಮತವನ್ನು ಗಳಿಸಿ ವಿಧಾನ ಪರಿಷತ್ತಿನ ಸದಸ್ಯೆಯಾಗಿ ಆಯ್ಕೆಯಾದರು. ವಿಧಾನ ಪರಿಷತ್ತಿನ ಉಪ ಸಭಾಧ್ಯಕ್ಷೆಯಾಗಿ

ಆಯ್ಕೆಯಾದ ಎಂ.ಆರ್.ಲಕ್ಷಮ್ಮನವರು 1962ರಿಂದ 64ರವರೆಗೆ ಎರಡು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ವಿಧಾನ ಪರಿಷತ್ತಿನ ಸದಸ್ಯರಾಗಿ ಅನೇಕ ಸಮಿತಿಗಳಲ್ಲಿ ಸದಸ್ಯರಾಗಿ ಸೇವೆ ಸಲ್ಲಿಸಿದರು. ಸತತವಾಗಿ 15 ವರ್ಷಗಳ ಕಾಲ ವಿಧಾನ ಪರಿಷತ್ತಿನ ಸದಸ್ಯರಾಗಿದ್ದು, ಪ್ರಜಾ ಸೇವೆಯಲ್ಲಿ ತೊಡಗಿದ್ದರು.

ಶೈಕ್ಷಣಿಕ ರಂಗದಲ್ಲಿ ಎಂ.ಆರ್.ಲಕ್ಷಮ್ಮನವರ ಸೇವೆ

ಎಂ.ಆರ್.ಲಕ್ಷಮ್ಮನವರು ಪ್ರಥಮ ದರ್ಜೆಯೊಡನೆ ಚಿನ್ನದ ಪದಕವನ್ನು ಪಡೆದುಕೊಂಡು ತಮ್ಮ ಸ್ನಾತಕೋತ್ತರ ಪದವಿಯನ್ನು ಪೂರೈಸಿದ ನಂತರ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹಾಗೆಯೇ ರಾಜಕೀಯ ಕ್ಷೇತ್ರಕ್ಕೂ ಕಾಲಿಟ್ಟರು. ಆದರೆ ಅವರಿಗೆ ಶೈಕ್ಷಣಿಕ ರಂಗದಲ್ಲಿ ಆಸಕ್ತಿ ಇದ್ದು, ಅನೇಕ ಶೈಕ್ಷಣಿಕ ಸುಧಾರಣೆಗೆ ಕಾರಣಕರ್ತರಾಗಿದ್ದಾರೆ. 1945ರಲ್ಲಿ ನ್ಯಾಯವಿಧಾಯಕ ಸಭೆಯಿಂದ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ಆಯ್ಕೆಯಾಗಿ 2 ವರ್ಷಗಳ ಕಾಲ ಸೇವೆ ಸಲ್ಲಿಸಿದರು. 1952ರಲ್ಲಿ ಎಂ.ಆರ್.ಲಕ್ಷಮ್ಮನವರ ಪತಿ ಎಂ.ನಾರಾಯಣಮೂರ್ತಿಯವರು ಬೆಂಗಳೂರಿನ ಹೆಚ್.ಎ.ಎಲ್.ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸಲು ಮೈಸೂರಿನಿಂದ ನಿಯೋಜನೆಗೊಂಡಿದ್ದರು. ನಂತರ ಎಂ.ಆರ್.ಲಕ್ಷಮ್ಮನವರ ಕಾರ್ಯಕ್ಷೇತ್ರ ಮೈಸೂರಿನಿಂದ ಬೆಂಗಳೂರಿಗೆ ವರ್ಗಾಯಿಸಲ್ಪಟ್ಟಿತು. ಬೋಧನಾ ವೃತ್ತಿಯಲ್ಲಿ ಆಸಕ್ತಿಯನ್ನು ಇಟ್ಟುಕೊಂಡಿದ್ದ ಎಂ.ಆರ್.ಲಕ್ಷಮ್ಮನವರು ಬೆಂಗಳೂರು ನಗರದ ಪ್ರತಿಷ್ಠಿತ ವಿದ್ಯಾಸಂಸ್ಥೆಯಾದ ಆಚಾರ್ಯ ಪಾಠಶಾಲೆ ಮತ್ತು ಬಿ.ಎಂ.ಎಸ್.ಕಾಲೇಜುಗಳಲ್ಲಿ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಿದರು.

ಆಚಾರ್ಯ ಪಾಠಶಾಲೆಯ ಸಂಜೆ ಕಾಲೇಜಿನ ಪ್ರಾಂಶುಪಾಲರಾಗಿ 4 ವರ್ಷಗಳ ಕಾಲ ಸೇವೆ ಸಲ್ಲಿಸಿದ ಎಂ.ಆರ್.ಲಕ್ಷಮ್ಮನವರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಸಮಿತಿಯ ಸದಸ್ಯೆಯಾಗಿ 4 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಬೆಂಗಳೂರು ವಿಶ್ವವಿದ್ಯಾನಿಲಯದ ಪದನಿಮಿತ್ತ ಉಪನ್ಯಾಸಕರ ಸಮಿತಿಯ ಅಧ್ಯಕ್ಷರಾಗಿ 2 ವರ್ಷಗಳ ಕಾಲ ಕಾರ್ಯ ನಿರ್ವಹಿಸಿದರು. ಬೆಂಗಳೂರು ವಿಶ್ವವಿದ್ಯಾನಿಲಯದ ಇತಿಹಾಸ ವಿಭಾಗದ ಮುಖ್ಯ ಪರೀಕ್ಷಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು. ಬೆಂಗಳೂರು ವಿಶ್ವವಿದ್ಯಾನಿಲಯದ ಅಧ್ಯಾಪಕರ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ ಸೇವೆ ಸಲ್ಲಿಸಿದರು.

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹೊರ ಪದವಿಯನ್ನು ಕಲಾವಿಭಾಗದಲ್ಲಿ ಪ್ರಾರಂಭಿಸಲು ಎಂ.ಆರ್.ಲಕ್ಷಮ್ಮನವರು ಹೋರಾಟ ಮಾಡಿದರು. ಆಚಾರ್ಯ ಪಾಠಶಾಲೆಯಲ್ಲಿ ಪ್ರಾಂಶುಪಾಲರಾಗಿದ್ದಾಗ ಕಲಾವಿಭಾಗದ ವಿಷಯಗಳನ್ನು ಕನ್ನಡ ಮಾಧ್ಯಮದಲ್ಲಿ ಭೋಧಿಸಲು ಪ್ರಾರಂಭಿಸಿದರು.

ಎಂ.ಆರ್.ಲಕ್ಷಮ್ಮನವರು ಇತಿಹಾಸದ ವಿದ್ಯಾರ್ಥಿನಿಯಾಗಿದ್ದರಿಂದ ಶಾಸನಗಳನ್ನು ಸಂಶೋಧಿಸಿ ಇತಿಹಾಸಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಎಂ.ಆರ್.ಲಕ್ಷಮ್ಮನವರ ಪತಿಯವರು ಹಾಸನ ಜಿಲ್ಲೆಯ ಹಗರೆಯಲ್ಲಿ ಎಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾಗ ಅಲ್ಲಿ ಸುತ್ತಮುತ್ತಲಿನ ಸ್ಥಳಗಳಲ್ಲಿ 19 ಶಾಸನಗಳನ್ನು ಪತ್ತೆಹಚ್ಚಿ ಅವುಗಳನ್ನು ಪುರಾತತ್ವ ಇಲಾಖೆಗೆ ಹಸ್ತಾಂತರಿಸಿದರು. ಅವುಗಳು ಗಂಗ ವಂಶದ ರಾಜ ಶ್ರೀ ಪುರುಷನಿಗೆ ಸಂಬಂಧಪಟ್ಟಿದ್ದು ಅವುಗಳು 9ನೇ ಶತಮಾನದ ಕಾಲಕ್ಕೆ ಸಂಬಂಧಪಟ್ಟವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.[14]

ಎಂ.ಆರ್.ಲಕ್ಷಮ್ಮಮರವರ ಪತ್ರಿಕೋದ್ಯಮ ಸೇವೆ

ಎಂ.ಆರ್.ಲಕ್ಷಮ್ಮನವರು ಸಮಾಜ ಸೇವೆ. ರಾಜಕೀಯ ಕ್ಷೇತ್ರ, ಶೈಕ್ಷಣಿಕ ರಂಗದಲ್ಲಿ ಮಾತ್ರವಲ್ಲ ಪತ್ರಿಕೋದ್ಯಮದಲ್ಲೂ ತಮ್ಮದೇ ಆದ ಪ್ರಭಾವ ಬೀರಿದ್ದಾರೆ. ಸಾಹಿತ್ಯ ಪ್ರಿಯೆಯಾಗಿದ್ದ ಎಂ. ಆರ್. ಲಕ್ಷಮ್ಮನವರು ಈ ಮೊದಲೇ ಅನೇಕ ನಾಟಕಗಳನ್ನು ಸಣ್ಣಕಥೆಗಳನ್ನು ಲೇಖನಗಳನ್ನು ಬರೆದಿದ್ದ ಅವರು ವಯಸ್ಕರ ಶಿಕ್ಷಣ ಸಮಿತಿಯ ಪತ್ರಿಕೆಯಾದ 'ಬೆಳಕು' ಪತ್ರಿಕೆಯ ಸಂಪಾದಕಿಯಾಗಿ ಕಾರ್ಯ ನಿರ್ವಹಿಸಿದ್ದರು. ಮಹಿಳೆಯರಿಗಾಗಿ ಪತ್ರಿಕೆಯನ್ನು ಸ್ಥಾಪಿಸಲು ನಿರ್ಧರಿಸಿದ ಎಂ.ಆರ್.ಲಕ್ಷಮ್ಮನವರು 'ಸೋದರಿ' ಎಂಬ ವಾರ ಪತ್ರಿಕೆಯನ್ನು 1950ರಲ್ಲಿ ಪ್ರಾರಂಭಿಸಿದರು. ಸಂಪಾದಕಿಯಾಗಿ, ಮುದ್ರಕಿಯಾಗಿ, ಎಲ್ಲ ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡ ಎಂ.ಆರ್. ಲಕ್ಷಮ್ಮನವರು ಜನಸಂಖ್ಯೆಯಲ್ಲಿ ಶೇಕಡಾ 50 ಭಾಗದಷ್ಟಿರುವ ಮಹಿಳೆಯರ ಅಭಿವೃಧ್ಧಿ, ಮಹಿಳೆಯರ ಸಂಘಟನೆ ಮತ್ತು ಮಹಿಳೆಯ ಸಾಧನೆ ಬಗ್ಗೆ ತಿಳಿಸಲು, ಮಹಿಳೆಯರು ರಾಜಕೀಯ ರಂಗದಲ್ಲಿ ಸಲ್ಲಿಸಬೇಕಾದ ಸೇವೆ ಮುಂತಾದ ಗಂಭೀರವಾದ ಲೇಖನಗಳನ್ನು 'ಸೋದರಿ' ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು.

ಹರಿತವಾದ ಲೇಖನಗಳು ಚಿಂತನಾರ್ಹವಾದ ವಿಷಯಗಳು, ದೇಶ ವಿದೇಶಗಳ ಸುದ್ಧಿ ಸಮಾಚಾರಗಳನ್ನು ಒಳಗೊಂಡ 'ಸೋದರಿ' ಪತ್ರಿಕೆ 5 ವರ್ಷಗಳ ಕಾಲ ವಾರ ಪತ್ರಿಕೆಯಾಗಿ ಪ್ರಕಟವಾಗುತ್ತಿತ್ತು. ನಂತರ ಕಾರ್ಯಬಾರ ಒತ್ತಡದಿಂದ ಮಾಸ ಪತ್ರಿಕೆಯಾಗಿ ಬದಲಾಯಿಸಲಾಯಿತು. ಸತತವಾಗಿ 10 ವರ್ಷಗಳ ಕಾಲ ಪ್ರಕಟವಾದ 'ಸೋದರಿಯ' ಕಾರ್ಯ ನಿರ್ವಹಣೆ ಸಾಧ್ಯವಾಗದೆ ಅದರ ಪ್ರಕಟಣೆಯನ್ನು ನಿಲ್ಲಿಸಬೇಕಾಯಿತು.

ಇಂತಹ ಉತ್ತಮ ಪತ್ರಿಕೆಯನ್ನು ಅನಿವಾರ್ಯ ಕಾರಣದಿಂದ ನಿಲ್ಲಿಸಲಾಗಿದ್ದರೂ ಎಂ.ಆರ್ ಲಕ್ಷ್ಮಮ್ಮನವರ ಸಾಹಿತ್ಯಾಸಕ್ತಿಯೇನೂ ಕಡಿಮೆಯಾಗಲಿಲ್ಲ. ಅನೇಕ ಪತ್ರಿಕೆಗಳಿಗೆ ಲೇಖನಗಳನ್ನು ಸಣ್ಣ ಕಥೆಗಳನ್ನು ಬರೆಯುತ್ತಿದ್ದರು. ಬಹುಮುಖ ಪ್ರತಿಭೆಯ ಎಂ.ಆರ್ ಲಕ್ಷಮ್ಮನವರ ವ್ಯಕ್ತಿ ಜೀವನವು ಏಳು ಬಣ್ಣಗಳ ಸಂಗಮದ ಕಾಮನ ಬಿಲ್ಲಿನಂತೆ ವೈವಿಧ್ಯಮಯವಾಗಿದ್ದು ಎಲ್ಲ ಕ್ಷೇತ್ರದಲ್ಲಿಯೂ ಅವರ ಸೇವೆ ಅಮೋಘವಾಗಿದೆ.

ಅಡಿಟಿಪ್ಪಣಿಗಳು

1. ಮಾಹಿತಿ ಸಂಗ್ರಹಣೆ ಸಂಶೋದಕರಿಂದ, ಶ್ರೀಮಾಧವ್.ಎನ್.ಮೂರ್ಚಿಂಗ್ (ಎಂ.ಆರ್.ಲಕ್ಷಮ್ಮನವರ ಮಗ) ದಿನಾಂಕ.12–5–13
2. ಎಂ.ಆರ್ ಲಕ್ಷಮ್ಮನವರ ವ್ಯಕ್ತಿ ವಿವರ ವಿಭಾಗೀಯ ಪತ್ರಾಗಾರ ಕಚೇರಿ, ಮೈಸೂರು. ಪುಟಸಂಖ್ಯೆ–1
3. ಕರ್ನಾಟಕ ವಿಧಾನ ಸಭೆ 60ನೇ ವಾರ್ಷಿಕೋತ್ಸವ ಸಮಾರಂಭ ಸ್ಮರಣೆ ಸಂಚಿಕೆ
4. ಸುರೇಶಮೂನ, ಬೆಂಗಳೂರು ನಗರ ನಿರ್ಮಾಪಕರು ಭಾಗ 2 ಪುಟ ಸಂಖ್ಯೆ–171
5. ಎಂ ಆರ್.ಲಕ್ಷಮ್ಮನವರ ವ್ಯಕ್ತಿ ವಿವರ, ವಿಭಾಗಿಯ ಪತ್ರಾಗಾರ ಕಚೇರಿ, ಮೈಸೂರು, ಪುಟಸಂಖ್ಯೆ–1
6. ಎಂ.ಆರ್. ಲಕ್ಷಮ್ಮನವರ ಸ್ವವಿವರ, ವಿಭಾಗೀಯ ಪತ್ರಗಾರ ಕಚೇರಿ, ಮೈಸೂರು. ಪುಟಸಂಖ್ಯೆ–7
7. ಸುರೇಶಮೂನ, ಬೆಂಗಳೂರ ನಗರ ನಿರ್ಮಾಪಕರು ಭಾಗ–172
8. ಎಂ.ಆರ್. ಲಕ್ಷಮ್ಮನವರ ಸ್ವವಿವರ, ವಿಭಾಗೀಯ ಪತ್ರಗಾರ ಕಚೇರಿ, ಮೈಸೂರು. ಪುಟಸಂಖ್ಯೆ–1
9. ಎಂ.ಆರ್. ಲಕ್ಷಮ್ಮನವರ ಸ್ವವಿವರ, ವಿಭಾಗೀಯ ಪತ್ರಗಾರ ಕಚೇರಿ, ಮೈಸೂರು. ಪುಟಸಂಖ್ಯೆ–3
10. ಎಂ.ಆರ್. ಲಕ್ಷಮ್ಮನವರ ಸ್ವವಿವರ, ವಿಭಾಗೀಯ ಪತ್ರಗಾರ ಕಚೇರಿ, ಮೈಸೂರು. ಪುಟಸಂಖ್ಯೆ–3
11. ಎಂ.ಆರ್. ಲಕ್ಷಮ್ಮನವರ ಸ್ವವಿವರ, ವಿಭಾಗೀಯ ಪತ್ರಗಾರ ಕಚೇರಿ, ಮೈಸೂರು. ಪುಟಸಂಖ್ಯೆ–2
12. ಎಂ.ಆರ್. ಲಕ್ಷಮ್ಮನವರ ಸ್ವವಿವರ, ವಿಭಾಗೀಯ ಪತ್ರಗಾರ ಕಚೇರಿ, ಮೈಸೂರು. ಪುಟ ಸಂಖ್ಯೆ–7
13. ತುರಂಗವಾಸ ಅನುಭವ, ಎಂ.ಆರ್.ಲಕ್ಷಮ್ಮನವರ ಸೆರೆಮನೆ ದಿನಚರಿ, ವಿಭಾಗೀಯ ಪತ್ರಾಗಾರ ಕಚೇರಿ, ಮೈಸೂರು. ಪುಟಸಂಖ್ಯೆ–1
14. ಎಂ.ಆರ್. ಲಕ್ಷಮ್ಮನವರ ಸ್ವವಿವರ, ವಿಭಾಗೀಯ ಪತ್ರಾಗಾರ ಕಚೇರಿ, ಮೈಸೂರು. ಪುಟಸಂಖ್ಯೆ–1

ಅಧ್ಯಾಯ ಮೂರು

ಸ್ವಾತಂತ್ರ್ಯ ಹೋರಾಟದಲ್ಲಿ ಎಂ.ಆರ್.ಲಕ್ಷಮ್ಮನವರ ಪಾತ್ರ

ಮೈಸೂರು ಸಂಸ್ಥಾನವು ಭಾರತದ ಮಾದರಿ ಸಂಸ್ಥಾನವಾಗಿದ್ದು, ತನ್ನದೇ ಆದ ವೈಶಿಷ್ಟ್ಯತೆಗಳನ್ನು ಹೊಂದಿದೆ. ಮೈಸೂರು ಸಂಸ್ಥಾನವು ಪರೋಕ್ಷವಾಗಿ ಬ್ರಿಟೀಷರ ಆಳ್ವಿಕೆಗೆ ಒಳಪಟ್ಟಿದ್ದರೂ ಮೈಸೂರಿನಲ್ಲಿ ದೇಶದಲ್ಲಿಯೇ ಮೊಟ್ಟಮೊದಲ ಬಾರಿಗೆ ಪ್ರಜಾಪ್ರತಿನಿಧಿ ಸಭೆ ಸ್ಥಾಪನೆಯಾಗಿ ಮೈಸೂರು ಸಂಸ್ಥಾನದ ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಪ್ರಜಾಪ್ರತಿನಿಧಿ ಸಭೆಯ ಸ್ಥಾಪನೆಯು ಜನಸಾಮಾನ್ಯರು ಆಡಳಿತದಲ್ಲಿ ಭಾಗವಹಿಸಿ ನಿರಂಕುಶಾಡಳಿತದ ವಿರುದ್ಧ ಹೋರಾಟ ಮಾಡಲು ಸಹಕಾರಿಯಾಯಿತು. ದೇಶದಾದ್ಯಂತ ಸ್ವಾತಂತ್ರ್ಯಕ್ಕಾಗಿ ಚಳವಳಿ ನಡೆಯುತ್ತಿದ್ದಂತಹ ಸಂದರ್ಭದಲ್ಲಿ ಪ್ರಾರಂಭದಲ್ಲಿ ಮೈಸೂರು ಸಂಸ್ಥಾನದಲ್ಲಿ ನಿರ್ದಿಷ್ಟವಾದ ಸ್ವಾತಂತ್ರ್ಯ ಚಳವಳಿ ನಡೆಯದಿದ್ದರೂ ರಾಜಕೀಯ ಸಾಮಾಜಿಕ ಆರ್ಥಿಕ ಸಮಾನತೆಗಾಗಿ ಹೋರಾಟಗಳು ನಡೆದವು. ಈ ಹೋರಾಟಗಳನ್ನು ನಡೆಸಲು ಮೈಸೂರಿನಲ್ಲಿ ಹಲವು ರಾಜಕೀಯ ಪಕ್ಷಗಳು ಹುಟ್ಟಿಕೊಂಡವು ಅವುಗಳು ಹಂತ ಹಂತವಾಗಿ ಬೆಳೆದು ಮೈಸೂರಿನಲ್ಲಿ ಕಾಂಗ್ರೆಸ್ ಸ್ಥಾಪನೆಯಾಗಿ ರಾಷ್ಟ್ರೀಯ ಚಳವಳಿಯ ಧ್ಯೆಯೋದ್ದೇಶಗಳನ್ನು ಅಳವಡಿಸಿಕೊಂಡು ಹೋರಾಟ ಮಾಡಲು ಪ್ರಾರಂಭಿಸಿತು.

ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಲ್ಲಿ ಮೈಸೂರಿನ ರಾಜಕೀಯ ಪಕ್ಷಗಳು.

ಪ್ರಜಾಮಿತ್ರ ಮಂಡಲಿ 1917

ಮೈಸೂರು ಸಂಸ್ಥಾನದ ಪ್ರಥಮ ರಾಜಕೀಯ ಪಕ್ಷ ಪ್ರಜಾಮಿತ್ರ ಮಂಡಲಿಯಾಗಿದ್ದು, ಸರ್ಕಾರದ ಶಾಸಕಾಂಗ ಮತ್ತು ಕಾರ್ಯಾಂಗಗಳಲ್ಲಿ ಎಲ್ಲರಿಗೂ ಪ್ರಾತಿನಿಧ್ಯ ದೊರಕಿಸಲು ಪ್ರಯತ್ನಿಸಿತು. 1917 ಡಿಸೆಂಬರ್ 6 ರಂದು ಸ್ಥಾಪನೆಯಾದ ಪ್ರಜಾಮಿತ್ರ ಮಂಡಲಿಯ ಅಧ್ಯಕ್ಷರಾದ ರಾವ್‌ಸಾಹೇಬ್, ಹೆಚ್.ಚನ್ನಯ್ಯನವರು, ಎಂ.ಬಸವಯ್ಯನವರು ಕಾರ್ಯದರ್ಶಿಗಳಾಗಿದ್ದರು. ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಡಿ.ಬನುಮಯ್ಯ, ಎಂ.ಸುಬ್ಬಯ್ಯ, ಮಹಮದ್‌ಅಬ್ದುಲ್‌ಕಲಾಮ್, ಮಹಮದ್‌ಅಬ್ಬಾಸ್‌ಖಾನ್ ಆಯ್ಕೆಯಾಗಿದ್ದರು.[1] ಸರ್ಕಾರದ ಆಡಳಿತದಲ್ಲಿ ಜನಸಾಮಾನ್ಯರು ಭಾಗವಹಿಸಬೇಕು ಎಲ್ಲಾ ಹಿಂದುಳಿದ ವರ್ಗದವರು ತಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಸಂಘಟಿತರಾಗಿ ಹೋರಾಟ ಮಾಡಬೇಕೆಂದು ಹುಟ್ಟಿಕೊಂಡ ಪ್ರಜಾಮಿತ್ರಮಂಡಲಿಯ ಪ್ರಥಮ ಅಧಿವೇಶನ ಬೆಂಗಳೂರಿನಲ್ಲಿ ನಡೆಯಿತು. ಪ್ರಥಮ ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಿದವರು ಮದ್ರಾಸ್ ಸಂಸ್ಥಾನದ ಹಿಂದುಳಿದ ವರ್ಗದ ನಾಯಕರಾದ ರಾವ್‌ಸಾಹೇಬ್. ಪ್ರಜಾಮಿತ್ರ ಮಂಡಳಿಯು ಮಹಾರಾಜರಿಗೆ ಭಿನ್ನವತ್ತಳೆ ಸಲ್ಲಿಸಿ, ಹಿಂದುಳಿದ ವರ್ಗಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುವಂತೆ ಮನವಿ ಮಾಡಿಕೊಂಡಿತು.

ಅದರಂತೆ ಮೈಸೂರಿನ ಮಹಾರಾಜರು 1918 ರಲ್ಲಿ ಜಸ್ಟಿಸ್ ಲೆಸ್ಲಿ.ಸಿ.ಮಿಲ್ಲರ್‌ರವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿದರು. ಸಮಿತಿಯ ವರದಿಯ ಅನ್ವಯ ಹಿಂದುಳಿದ ವರ್ಗಗಳಿಗೆ ಸರ್ಕಾರದ ಸೇವೆಗಳಲ್ಲಿ ಸಾಕಷ್ಟು ಮೀಸಲಾತಿಯನ್ನು ನೀಡಿದರು. ಆದರೆ ಈ ಪಕ್ಷವು ಹಿಂದುಳಿದ ವರ್ಗಗಳಿಗೆ ಮಾತ್ರ ಸೀಮಿತವಾಗಿದ್ದರಿಂದ ಮತ್ತೊಂದು ಪಕ್ಷದ ಉದಯವಾಯಿತು.

ಪ್ರಜಾಪಕ್ಷ 1930

ಮೈಸೂರಿನ ಎಲ್ಲ ವರ್ಗದವರು, ಜನಸಾಮಾನ್ಯರು ಮತ್ತು ಗ್ರಾಮೀಣ ಭಾಗದ ರೈತರಿಗೆ ಪ್ರಜಾಮಿತ್ರ ಮಂಡಲಿಯಲ್ಲಿ ಪ್ರಾತಿನಿಧ್ಯ ದೊರಕದ ಕಾರಣ ಎಲ್ಲ ವರ್ಗದ ಜನಸಾಮಾನ್ಯರನ್ನೊಳಗೊಂಡ ಹೊಸಪಕ್ಷದ ಸ್ಥಾಪನೆಯಾಯಿತು. ಎಲ್ಲ ಜನಾಂಗಗಳಿಗೂ ಸಮಾನ ಅವಕಾಶಗಳನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಪ್ರಜಾಮಿತ್ರಮಂಡಲಿಯ ಕೆಲವು ಸದಸ್ಯರು ಹೊರಬಂದು ಪ್ರಜಾಪಕ್ಷವೆಂಬ ಹೊಸ ರಾಜಕೀಯ ಪಕ್ಷವನ್ನು 1930ರಲ್ಲಿ ಸ್ಥಾಪಿಸಿದರು.[2] ಈ ಪ್ರಜಾಪಕ್ಷವು ಎಲ್ಲ ವರ್ಗದವರಿಗೂ ಪ್ರಾತಿನಿಧ್ಯ ನೀಡುವವರ ಜೊತೆಗೆ ಜನಸಾಮಾನ್ಯರ ಸಮಸ್ಯೆಗಳನ್ನು ನಿವಾರಿಸಿ ಅವರ ನಾಗರೀಕ ಹಕ್ಕುಗಳ ರಕ್ಷಣೆಯ ಜೊತೆಗೆ ಜವಾಬ್ದಾರಿ ಸರ್ಕಾರವನ್ನು ರಚಿಸುವ ಗುರಿಯನ್ನು ಇಟ್ಟುಕೊಂಡಿತ್ತು. 1931ರ ಸೆಪ್ಟೆಂಬರ್‌ನಲ್ಲಿ ಚನ್ನಪಟ್ಟಣದಲ್ಲಿ ಪ್ರಥಮ ಸಮ್ಮೇಳನವನ್ನು ನಡೆಸಿದ ಪ್ರಜಾಪಕ್ಷವು 1931 ರ ಅಕ್ಟೋಬರ್‌ನಲ್ಲಿ ಮೈಸೂರಿನಲ್ಲಿ ತನ್ನ ಎರಡನೇ ಸಮ್ಮೇಳನವನ್ನು ಹಮ್ಮಿಕೊಂಡಿತ್ತು.[3] ನ್ಯಾಯವಿಧಾಯಕ ಸಭೆಯ ಸದಸ್ಯರಾಗಿದ್ದ ಹಾಸನದ ಹೆಚ್.ವಿ.ಗುಂಡಪ್ಪಗೌಡರು ಈ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ಪ್ರಜಾಪಕ್ಷವು ತನ್ನ ಕಾರ್ಯ ವೈಖರಿಯಿಂದಾಗಿ ಪ್ರಜಾಮಿತ್ರ ಮಂಡಲಿಗಿಂತ ಹೆಚ್ಚು ಸದಸ್ಯರನ್ನು ಹೊಂದಿ ಜನಸಾಮಾನ್ಯರಿಗೆ ಹತ್ತಿರವಾಗಿತ್ತು.

ಸಂಯುಕ್ತ ಪ್ರಜಾಪಕ್ಷ 1935

1917 ರಲ್ಲಿ ಪ್ರಾರಂಭವಾದ ಪ್ರಜಾಮಿತ್ರ ಮಂಡಲಿ ಮತ್ತು 1930 ರಲ್ಲಿ ಸ್ಥಾಪಿಸಲ್ಪಟ್ಟ ಪ್ರಜಾಪಕ್ಷಗಳು ಏಕಉದ್ದೇಶಗಳನ್ನಿಟ್ಟುಕೊಂಡು ಕಾರ್ಯನಿರ್ವಹಿಸುತ್ತಿದ್ದು, ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ಮಾಡುತ್ತಿದ್ದವು. ಒಗ್ಗಟ್ಟಿನಲ್ಲಿ ಬಲವಿದೆ ಎಂದರಿತ ಎರಡು ಪಕ್ಷಗಳು ಜೊತೆಗೂಡಿ ಕಾರ್ಯ ನಿರ್ವಹಿಸಲು ತೀರ್ಮಾನಿಸಿ 1935ರಲ್ಲಿ ವಿಲೀನಗೊಂಡವು. ನಂತರ ಸಂಯುಕ್ತ ಪ್ರಜಾಪಕ್ಷವೆಂದು ಕರೆಯಲ್ಪಟ್ಟು ತನ್ನ ಹೋರಾಟವನ್ನು ಮುಂದುವರಿಸಿತು.

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ 1921

1885 ಡಿಸೆಂಬರ್ 25ರಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆ ಸ್ಥಾಪನೆಯಾಗಿ ಸಂಘಟಿತವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದರೂ, ಭಾರತದ ಎಲ್ಲ ಪ್ರಾಂತ್ಯಗಳಲ್ಲಿ ಕಾಂಗ್ರೆಸ್‌ನ ಸ್ಥಾಪನೆಯಾಗಿರಲಿಲ್ಲ. ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟ 19 ಪ್ರಾಂತ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಸ್ಥಾಪನೆಯಾಗಿತ್ತು. ಕರ್ನಾಟಕದಲ್ಲಿ ಮುಂಬೈ ಕರ್ನಾಟಕ ಮತ್ತು ಮದ್ರಾಸ್ ಕರ್ನಾಟಕದ ಭಾಗಗಳು ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟಿದ್ದರಿಂದ ಅಲ್ಲಿ ಕಾಂಗ್ರೆಸ್‌ನ ಸ್ಥಾಪನೆಯಾಗಿ ರಾಷ್ಟ್ರೀಯ ಚಳವಳಿಯು ಪ್ರತಿಧ್ವನಿಸಿತು.

ಆದರೆ ಮೈಸೂರು ಸಂಸ್ಥಾನದಲ್ಲಿ ನಿಜವಾದ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾಗಲಿಲ್ಲ. 1920ರಲ್ಲಿ ನಾಗಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಕರ್ನಾಟಕದಿಂದ ಸುಮಾರು 800ರಷ್ಟು ಪ್ರತಿನಿಧಿಗಳು ಭಾಗವಹಿಸಿದರು. ಅಲ್ಲಿ ಪ್ರತ್ಯೇಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸ್ಥಾಪನೆ ಬಗ್ಗೆ ಚರ್ಚೆಯಾಗಿ ಮೈಸೂರು ಸಂಸ್ಥಾನವನ್ನು ಒಂದು ಜಿಲ್ಲೆಯಾಗಿ ಪರಿಗಣಿಸಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಸ್ಥಾಪನೆಗೆ ಚಾಲನೆ ದೊರಕಿತು. ನಿವೃತ್ತ ನ್ಯಾಯಾಧೀಶರಾದ ಎಸ್.ಎಸ್.ಸೆಟ್ಲೂರ್‌ರವರ ಅಧ್ಯಕ್ಷತೆಯಲ್ಲಿ 1921ರಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಸ್ಥಾಪನೆಯಾಯಿತು. ಅದರ ಸ್ಥಳೀಯ ಸಮಿತಿಗಳು ಬೆಂಗಳೂರು, ಮೈಸೂರು, ಚಿಕ್ಕಮಗಳೂರು, ತುಮಕೂರುಗಳಲ್ಲಿ ಪ್ರಾರಂಭವಾಯಿತು.

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಧ್ಯೇಯೋದ್ದೇಶಗಳನ್ನು ಅಳವಡಿಕೊಂಡು ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ತನ್ನ ಹೋರಾಟವನ್ನು ಮಾಡುತ್ತಿದ್ದು, 1924ರ ಬೆಳಗಾಂ ಕಾಂಗ್ರೆಸ್ ಅಧಿವೇಶನ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆದು ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದ ಮೇಲೆ ಗಾಂಧೀಜಿಯವರ ಪ್ರಭಾವ ಗಾಢ ಪರಿಣಾಮವನ್ನು ಬೀರಿತು. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ರಚನಾತ್ಮಕ ಕಾರ್ಯಕ್ರಮಗಳಾದ ಹರಿಜನೋದ್ಧಾರ, ಖಾದಿ ಪ್ರಚಾರ, ಪಾನ ನಿರೋಧ, ಅಸ್ಪೃಶ್ಯತಾ ನಿವಾರಣೆ, ಶಿಕ್ಷಣ, ಗ್ರಾಮನೈರ್ಮಲ್ಯ, ಸರ್ವೋದಯ ಕಾರ್ಯಕ್ರಮಗಳು, ಮೈಸೂರು ಸಂಸ್ಥಾನದಲ್ಲಿ ಕಾರ್ಯಗತಗೊಂಡವು. ಆದರೂ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯು ಮೈಸೂರು ಸಂಸ್ಥಾನದಲ್ಲಿ ಅಷ್ಟೇನೂ ಪ್ರಭಾವ ಬೀರಲಿಲ್ಲ. ಕಾಂಗ್ರೆಸ್ ಎಂದರೆ ಬ್ರಾಹ್ಮಣರ ಪಕ್ಷವೆಂದು ಪ್ರಚಾರಗೊಂಡಿತು. ಹಿಂದುಳಿದ ವರ್ಗಗಳ ಸಂಘಟನೆಯಿಂದಲೇ ಪ್ರಾರಂಭವಾದ ಸಂಯುಕ್ತ ಪ್ರಜಾಪಕ್ಷದ ಚಟುವಟಿಕೆಗಳಲ್ಲಿ ಹೆಚ್ಚಿನ ಸದಸ್ಯರು ತೊಡಗಿಕೊಂಡಿದ್ದರು.

ಮೈಸೂರು ಕಾಂಗ್ರೆಸ್ ಪಕ್ಷ 1938

1938ರ ಭಾರತ ಸಂವಿಧಾನ ಕಾಯ್ದೆ ಅನ್ವಯ ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟ ಪ್ರಾಂತ್ಯಗಳಲ್ಲಿ ಪ್ರಾಂತೀಯ ಸ್ವಾಯತ್ತತೆ ಜಾರಿಗೆ ಬಂದು ಕಾಂಗ್ರೆಸ್ ತನ್ನದೇ ಆದ ಮಂತ್ರಿಮಂಡಲ ರಚಿಸಿಕೊಂಡು ಜವಾಬ್ದಾರಿ ಸರ್ಕಾರವನ್ನು ಅನುಷ್ಠಾನಕ್ಕೆ ತಂದಿತು. ಆದರೆ ಮೈಸೂರು ಸಂಸ್ಥಾನದಲ್ಲಿ ಸಂಯುಕ್ತ ಪ್ರಜಾಪಕ್ಷ ಮತ್ತು ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯಿಸಿ ತಮ್ಮದೇ ಆದ ರೀತಿಯಲ್ಲಿ ಹೋರಾಟ ನಡೆಸುತ್ತಿದ್ದವು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟ ಪ್ರಾಂತ್ಯಗಳಿಗೆ ಮಾತ್ರ ಗಮನ ಹರಿಸುತ್ತಿದ್ದು, ಸಂಸ್ಥಾನಗಳ ಆಡಳಿತದ ಆಂತರಿಕ ವಿಷಯಗಳಲ್ಲಿ ಸಹಕಾರ ನೀಡುತ್ತಿರಲಿಲ್ಲ. ಇದರ ಪರಿಣಾಮ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟ ಮತ್ತು ಜವಾಬ್ದಾರಿ ಸರ್ಕಾರದ ರಚನೆ ನಿಧಾನಗತಿಯಲ್ಲಿ ಸಾಗಿತು. ಇದನ್ನರಿತ ಸಂಯುಕ್ತ ಪ್ರಜಾಪಕ್ಷ ಮತ್ತು ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಗಳು ವಿಲೀನಗೊಳ್ಳಲು ನಿರ್ಧರಿಸಿದವು.

1938 ಫೆಬ್ರವರಿ 28 ರಂದು ವಿಲೀನಗೊಳ್ಳುವ ಬಗ್ಗೆ ಚರ್ಚೆಯಾಗಿ ಎರಡು ಪಕ್ಷಗಳು ಒಂದಾಗಿ 1938 ರಲ್ಲಿ ಮೈಸೂರು ಕಾಂಗ್ರೆಸ್ ಪಕ್ಷ ಎಂಬ ಹೆಸರಿನೊಂದಿಗೆ ಪ್ರಬಲ ರಾಜಕೀಯ ಪಕ್ಷವಾಗಿ ಹೊರಹೊಮ್ಮಿತು. ಮುಂದಿನ ದಿನಗಳಲ್ಲಿ ಜನಸಾಮಾನ್ಯರ ಬೆಂಬಲದೊಂದಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ಜವಾಬ್ದಾರಿ ಸರ್ಕಾರದ ರಚನೆಯಲ್ಲಿ ಮೈಸೂರು ಕಾಂಗ್ರೆಸ್ ಪ್ರಮುಖ ಪಾತ್ರ ವಹಿಸಿತು.

ಮೈಸೂರು ಸಂಸ್ಥಾನದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯ ಪ್ರಮುಖ ಘಟ್ಟಗಳು.

ಭಾರತದ ಇತಿಹಾಸದಲ್ಲಿ ಕ್ರಿ.ಶ 1885 ರಿಂದ 1947ರವರೆಗಿನ ಕಾಲವನ್ನು ಸ್ವಾತಂತ್ರ್ಯ ಹೋರಾಟದ ಕಾಲವೆಂದು ಕರೆಯಲಾಗಿದೆ. 1885ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದಂದಿನಿಂದ 1947ರವರೆಗೆ ಭಾರತಿಯುರು ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯಕಾಗಿ ನಿರಂತರ ಹೋರಾಟದಲ್ಲಿ ನಿರತರಾಗಿದ್ದರು. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕದ ಪಾತ್ರ ಅಮೋಘವಾದುದು. ಬ್ರಿಟೀಷರ ಆಡಳಿತದ ವಿರುದ್ದ ಭಾರತದಾದ್ಯಂತ ವ್ಯಾಪಕವಾಗಿ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ಕನ್ನಡಿಗರು ನಿರೀಕ್ಷೆಗೂ ಮೀರಿ ಹೋರಾಡಿದ್ದಾರೆ. ಬ್ರಿಟೀಷರ ವಿರುದ್ಧ ಮೊದಲು ಆರಂಭವಾದ ಸಶಸ್ತ್ರ ಬಂಡಾಯಗಳು ವಿಫಲವಾದವು. ಆದುದರಿಂದ ಭಾರತೀಯರು ಅಹಿಂಸಾತ್ಮಕ ಚಳುವಳಿಯ ಕಡೆಗೆ ಮುಖ ಮಾಡುವಂತೆ ಮಾಡಿತು. ಅದು ಸರಿಯಾದ ಮಾರ್ಗವೇ ಆಗಿತ್ತು. ಆ ಮಾರ್ಗದಲ್ಲಿ ಮುನ್ನುಡಿ ಬರೆದ ಗಾಂಧಿಜೀಯವರು ಭಾರತೀಯರ ಮಾರ್ಗದರ್ಶಕರಾದರು. 1920 ರಿಂದ 1947ರ ವರೆಗಿನ ಕಾಲವನ್ನು ಗಾಂಧಿಯುಗವೆಂದು ಕರೆಯಲಾಗಿದೆ.

ಗಾಂಧಿಯುಗದ ಮೊದಲಿನಿಂದಲೂ ಕರ್ನಾಟಕದ ಜನರು ಬ್ರಿಟೀಷ್ ವಿರೋಧಿ ಸಂಘಟನೆಗಳಲ್ಲಿ ಸಕ್ರಿಯವಾಗಿ ಪ್ರತಿನಿಧಿಸಿದ್ದಾರೆ. ಉದಾಹರಣೆಗೆ ಉಮೇಶ್ ಚಂದ್ರ ಬ್ಯಾನರ್ಜಿಯವರ ಅಧ್ಯಕ್ಷತೆಯಲ್ಲಿ ನಡೆದ 1885ರ ಡಿಸೆಂಬರ್ 27, 28, 29ರ ದಿನಗಳಲ್ಲಿ ಮುಂಬೈನ ಗವಾಲಿಯ ರಸ್ತೆಯಲ್ಲಿರುವ ಗೋಕುಲ್‌ದಾಸ್ ತೇಜ್‌ಪಾಲ್ ಸಂಸ್ಕೃತ ಕಾಲೇಜಿನಲ್ಲಿ ಅಖಿಲ ಭಾರತೀಯ ಕಾಂಗ್ರೆಸಿನ ಅಧಿವೇಶನ ಜರುಗಿತು.

ಈ ಅಧಿವೇಶನದಲ್ಲಿ ಭಾಗವಹಿಸಲು ಭಾರತದ ವಿವಿಧ ಭಾಗಗಳಿಂದ ಸುಮಾರು 72 ಪ್ರತಿನಿಧಿಗಳು ಬಂದಿದ್ದರು. ಅವರಲ್ಲಿ ಬಳ್ಳಾರಿಯ ಕೋಲಾಚಲಂ ವೆಂಕಟರಾವ್ ಮತ್ತು ಸಭಾಪತಿ ಮೊದಲಿಯಾರ್ ಅವರು ಕರ್ನಾಟಕವನ್ನು ಪ್ರತಿನಿಧಿಸಿದ್ದರು. ಅಖಿಲ ಭಾರತೀಯ ಕಾಂಗ್ರೆಸ್ಸಿನ ಅಧಿವೇಶನ ಪಂಜಾಬಿನ ಲಾಹೋರಿನಲ್ಲಿ ಜರುಗಿತು. ಕನ್ನಡಿಗರಾದ ನಾರಾಯಣರಾವ್ ಚಂದಾವರ್ಕರ್ ಅದರ ಅಧ್ಯಕ್ಷತೆ ವಹಿಸಿದ್ದುದು ವಿಶೇಷವಾಗಿತ್ತು. ಹೀಗೆ ಬ್ರಿಟೀಷ್ ವಿರೋಧಿ ಹೋರಾಟದಲ್ಲಿ ಕರ್ನಾಟಕದ ಅನೇಕ ಗಣ್ಯ ವ್ಯಕ್ತಿಗಳೊಂದಿಗೆ ಮೈಸೂರು ಸಂಸ್ಥಾನದ ಜನತೆಯು ಭಾಗವಹಿಸಿ ತಮ್ಮ ಬೆಂಬಲ ವ್ಯಕ್ತಪಡಿಸಿರುವುದು ಗಮನಾರ್ಹವಾಗಿದೆ.

ಅಖಿಲ ಭಾರತೀಯ ಕಾಂಗ್ರೆಸ್ ಸ್ವಾತಂತ್ರ್ಯ ಹೋರಾಟವನ್ನಾರಂಭಿಸಿತು. ಮೈಸೂರು ಸಂಸ್ಥಾನದ ಜನತೆಯು ಜಾಗೃತರಾಗಿ ರಾಷ್ಟ್ರೀಯ ಭಾವನೆಯಿಂದ ಹೋರಾಟ ಮಾಡಲಾರಂಭಿಸಿದರು. ಆದರೆ ಬ್ರಿಟೀಷರ ಪರವಾಗಿದ್ದ ರಾಜಪ್ರಮುಖರು ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ ಮಾಡತೊಡಗಿದರು. ಆಗ ಪ್ರಜ್ಞಾವಂತ ಮೈಸೂರಿನ ನಾಗರೀಕರು ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಗೆ ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿದ್ದ ದಿವಾನರುಗಳ ಅಧಿಕಾರವನ್ನು ಮೊಟಕುಗೊಳಿಸುವ ಚಳುವಳಿಯನ್ನು ಸಹ ಆರಂಭಿಸಿದರು.[4]

ಸ್ವಾತಂತ್ರ್ಯ ಹೋರಾಟವನ್ನು ದಮನ ಮಾಡುವ ಅಧಿಕಾರಿಗಳ ವಿರೋಧಿ ಚಳುವಳಿಗಳು ಮತ್ತು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿದ ಮೈಸೂರಿನ ಪ್ರಜ್ಞಾವಂತ ಸ್ವಾತಂತ್ರ್ಯ ಹೋರಾಟಗಾರರು ರಾಜ್ಯ ಮಟ್ಟದ ಕಾಂಗ್ರೆಸ್ ಸ್ಥಾಪನೆಯ ಪ್ರಯತ್ನದಲ್ಲಿದ್ದರು. ಅವರ ಪ್ರಯತ್ನಕ್ಕೆ ಸಕಲ ಬೆಂಬಲ ಸ್ಪೂರ್ತಿಯನ್ನು ನೀಡಿದ ಕೀರ್ತಿಗೆ ಮೈಸೂರು ಭಾಗದ ಪತ್ರಿಕೋದ್ಯಮಿ ಪಿತಾಮಹರೆಂದು ಎಂ.ವೆಂಕಟಕೃಷ್ಣಯ್ಯರವರು (ತಾತಯ್ಯ) ಪಾತ್ರರಾಗಿದ್ದಾರೆ.[5]

ಮೈಸೂರು ಸಂಸ್ಥಾನದಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ 1921ರಲ್ಲಿ ಮೈಸೂರಿನ ಮಾಜಿ ನ್ಯಾಯಾಧೀಶರಾದ ಎಸ್.ಎಸ್.ಸೆಟ್ಲೂರು ಅವರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಯಿತು. ಚರಕ ಮತ್ತು ಖಾದಿ ಇದರ ಮೂಲಕ ಮಂತ್ರವಾಯಿತು. 1924ರ ಬೆಳಗಾಂ ಕಾಂಗ್ರೆಸ್ ಅಧಿವೇಶನದ ನಂತರ ಕಾಂಗ್ರೆಸಿನ ನಾಯಕರು ರಾಜ್ಯಕ್ಕೆ ಭೇಟಿ

ನೀಡಿ ರಾಷ್ಟ್ರೀಯ ಚಳುವಳಿಯ ಗುರಿ ಮತ್ತು ಉದ್ದೇಶಗಳನ್ನು ತಿಳಿಸಿಕೊಟ್ಟು ಮಾರ್ಗದರ್ಶನ ಮಾಡಿದರು. ಅದರ ಪ್ರಕಾರ ಮೈಸೂರು ಜಿಲ್ಲಾ ಕಾಂಗ್ರೆಸ್ ಹಲವು ಚಳುವಳಿಗಳಲ್ಲಿ ಭಾಗವಹಿಸಿತು. ಮೈಸೂರು ರಾಜ್ಯ ಕಾಂಗ್ರೆಸ್ ಪ್ರತ್ಯೇಕ ರಾಜಕೀಯ ಸಂಸ್ಥೆಯಾಗಿ 1938 ಫೆಬ್ರವರಿ 28 ರಂದು ಅಸ್ತಿತ್ವಕ್ಕೆ ಬಂದಿತು. ಇದು ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಧ್ವಜ ಸತ್ಯಾಗ್ರಹ, ಕರ ನಿರಾಕರಣೆ, ಮಧುಪಾನ ನಿಷೇಧ ಮುಂತಾದ ಸತ್ಯಾಗ್ರಹಗಳಲ್ಲಿ ಭಾಗವಹಿಸಿತು. ಅಲ್ಲದೇ ಗಾಂಧೀಜಿಯವರ ಸಲಹೆಗಳನ್ನು ಪಡೆದು ಸಂವಿಧಾನ ಬದ್ಧ ಮತ್ತು ಶಾಂತಿಯುತ ಹೋರಾಟವನ್ನು ಸಂಸ್ಥಾನದಾದ್ಯಂತ ಆರಂಭಿಸಿತು.[6]

ಶಿವಪುರ ಧ್ವಜ ಸತ್ಯಾಗ್ರಹ

ಅಖಿಲ ಭಾರತ ಕಾಂಗ್ರೆಸ್‌ನ ತ್ರಿವರ್ಣ ಧ್ವಜವನ್ನೇ ಮೈಸೂರು ಪ್ರಾಂತ್ಯ ಕಾಂಗ್ರೆಸ್ ತನ್ನ ಧ್ವಜವನ್ನಾಗಿ ಅಂಗೀಕರಿಸಿತು. ಸ್ವಾತಂತ್ರ್ಯದ ಪ್ರತೀಕವಾಗಿ ಸರ್ಕಾರಿ ಕಛೇರಿಗಳಲ್ಲಿ ಬಾವುಟವನ್ನು ಹಾರಿಸುವ ಕಾರ್ಯಕ್ರಮವನ್ನು ರೂಪಿಸಿತು. ಅದರ ಅಂಗವಾಗಿ ಮೈಸೂರು ಪ್ರಾಂತ್ಯ ಕಾಂಗ್ರೆಸ್ ಪ್ರಥಮ ಬಾರಿಗೆ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ 1938ರ ಏಫ್ರಿಲ್ 11 ರಂದು ಸಮಾವೇಶಗೊಂಡಿತು. ಇಲ್ಲಿ ಧ್ವಜರೋಹಣ ಮಾಡುವುದನ್ನು ಸರ್ಕಾರ ನಿಷೇಧಿಸಿತು. ಆದರೆ ಮೈಸೂರು ಪ್ರಾಂತ್ಯ ಕಾಂಗ್ರೆಸ್ ಧ್ವಜ ರೋಹಣ ಮಾಡಲು ಸರ್ವ ಸಿದ್ಧತೆ ಮಾಡಿಕೊಂಡಿತು. ಹಾಗೆಯೆ ಬ್ರಿಟೀಷ್ ಅಧಿಕಾರಿಗಳು ಸಹ ಆ ಧ್ವಜರೋಹಣ ಕಾರ್ಯಕ್ರಮವನ್ನು ತಡೆಯಲು 300 ಜನರ ಪೊಲೀಸ್ ತುಕಡಿಯನ್ನು 1938ರ ಏಫ್ರಿಲ್ 10 ರಂದೆ ಶಿವಪುರಕ್ಕೆ ರವಾನಿಸಿದರು.

ಸಂಸ್ಥಾನದ ನಾನಾ ಕಡೆಗಳಿಂದ ಶಿವಪುರದ ಧ್ವಜ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಸುಮಾರು 30 ಸಾವಿರ ಜನರು ಆಗಮಿಸಿದರು. ಮೈಸೂರು ಪ್ರಾಂತ್ಯ ಕಾಂಗ್ರೆಸ್‌ನ ಟಿ ಸಿದ್ದಲಿಂಗಯ್ಯನವರ ನೇತೃತ್ವದಲ್ಲಿ 1938ರ ಏಫ್ರಿಲ್ 11 ರಂದು ಬೆಳಿಗ್ಗೆ 8 ಗಂಟೆಗೆ ಧ್ವಜರೋಹಣದ ಸಕಲ ಸಿದ್ಧತೆಯಾಯಿತು. ಆದರೆ ಧ್ವಜರೋಹಣದ ಕಾರ್ಯಕ್ರಮವನ್ನು ನಡೆಸಕೂಡದೆಂದು ಅಲ್ಲಿ ನೆರೆದಿದ್ದ ಎಲ್ಲರಿಗೂ ವೈಯಕ್ತಿಕವಾಗಿ ಆದೇಶವನ್ನು ನೀಡಿತು. ಸಮಾಲೋಚನೆ ನಡೆಸಿದ ಕಾಂಗ್ರೆಸ್ಸಿನ ನಾಯಕರು ಶಾಂತಿಯುತವಾಗಿ ಧ್ವಜರೋಹಣ ಕಾರ್ಯಕ್ರಮವನ್ನು ನೆರವೇರಿಸುವಂತೆ ನೆರೆದಿದ್ದ ಜನರಿಗೆ ಕರೆ ನೀಡಿದರು ಮತ್ತು ಟಿ.ಸಿದ್ಧಲಿಂಗಯ್ಯನವರು ಎಂ.ಎನ್ ಜೋಯಿಸ್‌ರವರ ಸಹಾಯದಿಂದ ಧ್ವಜವನ್ನು ಹಾರಿಸಿಯೇ ಬಿಟ್ಟರು. ಸರ್ಕಾರವು ಈರ್ವರನ್ನು ಬಂಧಿಸಿತು. ಇವರಿಬ್ಬರ ಅನುಪಸ್ಥಿತಿಯಲ್ಲೂ ಮೈಸೂರು ಪ್ರಾಂತ್ಯ ಕಾಂಗ್ರೆಸ್ ತನ್ನ ಅಧಿವೇಶನವನ್ನು ಜರುಗಿಸಿತು. ಜವಾಬ್ದಾರಿ ಸರ್ಕಾರಕ್ಕಾಗಿ ಒತ್ತಾಯ ಮಾಡಿ 1938ರ ಏಫ್ರಿಲ್ 12ರವರೆಗೂ ಅಧಿವೇಶನ ನಡೆಸಿತು. ಅಧಿವೇಶನದಲ್ಲಿ ಪಾಲ್ಗೊಂಡ ಹೆಚ್.ಸಿ ದಾಸಪ್ಪ, ವಿ.ವೆಂಕಟಪ್ಪ, ಚೆಂಗಲರಾಯರೆಡ್ಡಿ, ಕೆಟಿ ಭಾಷ್ಯಂ, ಹೆಚ್.ಸಿದ್ದಯ್ಯ ಮತ್ತು ಬಳ್ಳಾರಿ ಸಿದ್ದಮ್ಮ ಮುಂತಾದವರು ಬಂಧನಕ್ಕೆ ಒಳಗಾದರು.

ಶಿವಪುರದ ಧ್ವಜ ಸತ್ಯಾಗ್ರಹ ಮೈಸೂರು ಕಾಂಗ್ರೆಸ್‌ನ ಇತಿಹಾಸದಲ್ಲಿ ಒಂದು ರೋಮಾಂಚಕ ಮೈಲುಗಲ್ಲು. ಅಖಿಲ ಭಾರತ ಕಾಂಗ್ರೆಸ್‌ನ ನಾಗಪುರ ಧ್ವಜ ಸತ್ಯಾಗ್ರಹದಷ್ಟೆ ಮಹತ್ವ ಪೂರಿತವಾದ ಸತ್ಯಾಗ್ರಹವೆನಿಸಿದೆ.

ಮೈಸೂರಿನ ನಾಯಕರು ಧೀಮಂತ ಹೋರಾಟದಿಂದ ಸಂಸ್ಥಾನದಾದ್ಯಂತ ಪ್ರಸಿದ್ಧಿ ಪಡೆದು ಇತಿಹಾಸದ ಪುಟಗಳಲ್ಲಿ ಶಾಶ್ವತ ಸ್ಥಾನ ಪಡೆದರು. ಇವರಿಂದ ಸ್ಫೂರ್ತಿ ಪಡೆದ ಇತರ ಭಾಗಗಳ ಜನರು ಸಹ ಧ್ವಜರೋಹಣಕ್ಕಾಗಿ ಸನ್ನದ್ಧರಾದರು.[7]

ವಿದುರಾಶ್ವತ್ಥ ಧ್ವಜ ಸತ್ಯಾಗ್ರಹ

ವಿದುರಾಶ್ವತ್ಥ ಅಂದಿನ ಕೋಲಾರ ಜಿಲ್ಲೆಯ ಗೌರಿ ಬಿದನೂರು ತಾಲ್ಲೂಕಿನ ಒಂದು ಗ್ರಾಮವಾಗಿದೆ. ಪ್ರತಿ ವರ್ಷ ಏಪ್ರಿಲ್ ತಿಂಗಳಲ್ಲಿ ಇಲ್ಲಿ ಜಾತ್ರೆ ನಡೆಯುತ್ತಿತ್ತು, ಜನಸಂದಣಿಯ ಸ್ಥಳ ಇದಾಗಿದ್ದರಿಂದ ಜವಾಬ್ದಾರಿ ಸರ್ಕಾರಕ್ಕಾಗಿ ಮೈಸೂರು ಸಂಸ್ಥಾನದ ಜನಸಾಮಾನ್ಯರನ್ನು ಸೆಳೆಯುವ ಮತ್ತು ಸರ್ಕಾರದ ಗಮನ ಸೆಳೆಯುವ ಉದ್ಧೇಶದಿಂದ ಮೈಸೂರು ಪ್ರಾಂತ್ಯ ಕಾಂಗ್ರೆಸ್ ಇಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. 1938ರ ಏಪ್ರಿಲ್ 25 ರಂದು ಇಲ್ಲಿ ಧ್ವಜಾರೋಹಣ ಮಾಡುವುದಾಗಿ ಮೈಸೂರು ಕಾಂಗ್ರೆಸ್ ಪ್ರಕಟಿಸಿತು. ಆದರೆ ಸರ್ಕಾರ ನಿಷೇಧಿಸಿ ಆದೇಶ ಹೊರಡಿಸಿತು. ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಕಾಂಗ್ರೆಸ್ ಕಾರ್ಯಕರ್ತರು ರಾಷ್ಟ್ರಧ್ವಜವನ್ನು ವಿದುರಾಶ್ವತ್ಥದಲ್ಲಿ ಹಾರಿಸಿದರು.

ಸರ್ಕಾರವು ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಧ್ವಜರೋಹಣ ಮಾಡಿದ ನಾಯಕರನ್ನು ಮತ್ತು ಕಾರ್ಯಕರ್ತರನ್ನು ಬಂಧಿಸಿದರೆ ಅದು ಸೂಕ್ತ ಕ್ರಮವೇ ಆಗಿರುತ್ತಿತ್ತು. ಆದರೆ ಜಾತ್ರೆಗೆ ಆಗಮಿಸಿ ಪಕ್ಕದಲ್ಲೆ ಇದ್ದ ತೋಪಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಮುಗ್ಧ ಜನಸಾಮಾನ್ಯರ ಮೇಲೆ ಲಾಠಿ ಪ್ರಹಾರ ಮಾಡಿ ಜನರನ್ನು ಹಿಂಸಿಸಿ ಭಯಭೀತರಾಗುವಂತೆ ಮಾಡಿದರು. ಅಲ್ಲದೆ ಪೋಲೀಸರತ್ತ ಯಾರೋ ಕಲ್ಲೆಸೆದರು ಎಂಬ ನೆಪ ಮಾಡಿ ಯಾವುದೇ ಮುನ್ಸೂಚನೆ ನೀಡದೆ ಏಕಾಏಕಿಯಾಗಿ 92 ಸುತ್ತು ಗುಂಡು ಹಾರಿಸಿ 40 ಜನರನ್ನು ಬಲಿ ತಗೆದುಕೊಂಡರು. 40 ಜನರಲ್ಲಿ ಗೌರಮ್ಮ ಎಂಬ ತುಂಬು ಗರ್ಭಿಣಿಯು ಅಸುನೀಗಿದ್ದು ಮನೆಮಾತಾಯಿತು.

ಸರ್ಕಾರದ ವಿವೇಚನಾರಹಿತ ದುಷ್ಕೃತ್ಯವನ್ನು ಬಿತ್ತರಿಸಿದ ಜನವಾಣಿ, ತಾಯಿನಾಡು ಮತ್ತು ವಿಶ್ವಕರ್ನಾಟಕ ಎಂಬ ಪತ್ರಿಕೆಗಳ ಪ್ರಕಟಣೆಗಳನ್ನು ಸರ್ಕಾರ ಪ್ರತಿಬಂಧಿಸಿತು. ಸರ್ಕಾರದ ಈ ದುಷ್ಟ ಪ್ರವೃತ್ತಿಯನ್ನು ಎಲ್ಲೆಲ್ಲೂ ಖಂಡಿಸಲಾಯಿತು. ಲಂಡನ್ನಿನ ಬಿ.ಬಿ.ಸಿ ಸಹ ಮೈಸೂರು ಸರ್ಕಾರದ ಕ್ರಮವನ್ನು ಪೈಶಾಚಿಕ ಕೃತ್ಯ ಎಂದು ಖಂಡಿಸಿತು. ಈ ಘಟನೆಯಿಂದ ಮನನೊಂದ ಗಾಂಧೀಜಿಯವರು ಪ್ರಜೆಗಳಿಂದ ನಿರ್ಮಿತವಾಗುವ ಜವಾಬ್ದಾರಿ ಸರ್ಕಾರ ಮಾತ್ರ ಇಂತಹ ಘಟನೆಗಳಿಂದ ಸಂಸ್ಥಾನ ಮತ್ತು ಜನರನ್ನು ಪಾರು ಮಾಡಬಲ್ಲದು ಎಂದು ಪ್ರತಿಕ್ರಿಯಿಸಿದರು.

ಗಾಂಧೀಜಿಯವರು, ಸರ್ದಾರ್ ವಲ್ಲಭಬಾಯ್ ಪಟೇಲ್ ಮತ್ತು ಆಚಾರ್ಯ ಕೃಪಲಾನಿ ಅವರನ್ನು ವಿದುರಾಶ್ವತ್ಥ ದುರಂತದ ಅವಲೋಕನ ಮಾಡಿ ವರದಿ ನೀಡಲು ಕಳುಹಿಸಿದರು.

ತತ್ಪರಿಣಾಮವಾಗಿ ಮದ್ರಾಸಿನ ಸರ್ ವೇಪಾರಮೇಶಂ ಅವರ ಅಧ್ಯಕ್ಷತೆಯಲ್ಲಿ ವಿದುರಾಶ್ವತ್ಥ ದುರಂತದ ವಿಚಾರಣಾ ಸಮಿತಿ ರಚನೆಯಾಯಿತು.[8] ಫಲಮಾತ್ರ ಶೂನ್ಯವಾಗಿತ್ತು. ಅದೇನೆ ಇರಲಿ ಈ ಘಟನೆಯು ಜಲಿಯನ್ ವಾಲಾಬಾಗ್ ದುರಂತವನ್ನು ನೆನಪಿಸಿಕೊಳ್ಳುವಂತೆ ಮಾಡಿತು ಮತ್ತು ವಿದುರಾಶ್ವತ್ಥವನ್ನು ಕರ್ನಾಟಕದ ಜಲಿಯನ್ ವಾಲಬಾಗ್ ಎಂದು ಕರೆಯುವಂತೆ ಮಾಡಿತು.

ಹ್ಯಾಮಿಲ್ಟನ್ ಭವನ ಸತ್ಯಾಗ್ರಹ

ಮೈಸೂರಿನ ಸೆಂಟ್ರಲ್ ಪೊಲೀಸ್ ಸ್ಟೇಷನ್ ಇರುವ ಸುತ್ತಮುತ್ತಲಿನ ಪ್ರದೇಶವನ್ನು ಅಂದು ದೊಡ್ಡಪೇಟೆ ಎಂದು ಕರೆಯಲಾಗುತ್ತಿತ್ತು. ದೊಡ್ಡಪೇಟೆಯಲ್ಲಿ 1939ರಲ್ಲಿ ಸೆಂಟ್ರಲ್ ಪೋಲೀಸ್ ಸ್ಟೇಷನ್ ನಿರ್ಮಾಣವಾಯಿತು. ಆಗ ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರಿನ ರಾಜರಾಗಿದ್ದರು. ಅವರ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ನಾಲ್ವಡಿ ಅವರ ಬಾಲ್ಯಸ್ನೇಹಿತರಾಗಿದ್ದರು ಮತ್ತು ಮೈಸೂರಿನ ಅಭಿವೃದ್ಧಿಗಾಗಿ ಶ್ರಮಿಸಿದ್ದರು. ದಬ್ಬಾಳಿಕೆ ಮತ್ತು ದೌರ್ಜನ್ಯಕ್ಕೆ ಹೆಸರಾಗಿದ್ದ ಅಂದಿನ ಮೈಸೂರಿನ ಪೋಲೀಸ್ ಮಹಾ ನಿರ್ದೇಶಕನೇ ಹ್ಯಾಮಿಲ್ಟನ್. ದೊಡ್ಡಪೇಟೆಯಲ್ಲಿ ನಿರ್ಮಿತವಾದ ಸೆಂಟ್ರಲ್ ಪೊಲೀಸ್ ಸ್ಟೇಷನ್ ಕಟ್ಟಡಕ್ಕೆ ಮಿರ್ಜಾರವರು 'ಹ್ಯಾಮಿಲ್ಟನ್ ಭವನ' ಎಂದು ಹೆಸರಿಡಲು ಸೂಚಿಸಿದರು. ಆದರೆ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟಗಾರರು ಸೆಂಟ್ರಲ್ ಪೊಲೀಸ್ ಸ್ಟೇಷನ್ ಕಟ್ಟಡಕ್ಕೆ ದೌರ್ಜನ್ಯದ ಪ್ರತೀಕದಂತಿದ್ದ ಹ್ಯಾಮಿಲ್ಟನ್ ಹೆಸರಿಡುವುದನ್ನು ವಿರೋಧಿಸಿ ಹೋರಾಟವನ್ನಾರಂಭಿಸಿದರು. ಇದನ್ನೇ ಹ್ಯಾಮಿಲ್ಟನ್ ಭವನದ ಸತ್ಯಾಗ್ರಹವೆಂದು ಕರೆಯಲಾಗಿದೆ.

1939ರ ಫೆಬ್ರವರಿ 15 ರಂದು ಎಂ.ಎನ್.ಜೋಯಿಸ್, ಎಂ.ಎನ್. ಸೂರ್ಯನಾರಾಯಣರಾಯರು ಮತ್ತು ಸುಬ್ಬರಾವ್ ಉಪಾಧ್ಯಾಯರ ನೇತೃತ್ವದಲ್ಲಿ ಸತ್ಯಾಗ್ರಹ ಆರಂಭವಾಯಿತು. ಈ ಸತ್ಯಾತ್ರಹವು 1939ರ ಮಾರ್ಚ್ 31ರವರೆಗೂ ನಡೆಯಿತು. ಈ ಸತ್ಯಾಗ್ರಹವು ಪ್ರತಿದಿನ ಎರಡು ತಂಡಗಳಿಂದ ಆರಂಭವಾಗುತ್ತಿತ್ತು. ಸತ್ಯಾಗ್ರಹಿಗಳು ತಮ್ಮ ಕೈಗಳಲ್ಲಿ ಸುಣ್ಣದ ಮಡಕೆ ಮತ್ತು ಉದ್ದದ ಕೋಲಿಗೆ ಕಟ್ಟಿದ ಕುಚ್ಚುಮಟ್ಟೆ ಹಿಡಿದು ಮೈಸೂರಿನ ಶಾಂತಲಾ ಚಿತ್ರಮಂದಿರದ ಬಳಿಯಿರುವ ಅಂದಿನ ಸುಬ್ಬರಾಯನ ಕೆರೆಯಿಂದ ಆರಂಭಿಸಿ ಸೆಂಟ್ರಲ್ ಪೋಲೀಸ್ ಸ್ಟೇಷನ್‌ವರೆಗೂ ಶಾಂತಿಯುತವಾಗಿ ಮೆರವಣಿಗೆಯಲ್ಲಿ ಸಾಗುತ್ತಿದ್ದರು. ಈ ಸತ್ಯಾಗ್ರಹ ಆರಂಭವಾಗುವ

ಮೊದಲೇ ಈ ಹೋರಾಟದ ನಾಯಕರಲ್ಲೊಬ್ಬರಾದ ತಗಡೂರು ರಾಮಚಂದ್ರರಾಯರನ್ನು 1939 ರ ಫೆಬ್ರವರಿ 13 ರಂದೇ ಬಂಧಿಸಿ ಸೆರೆಮನೆಗೆ ದೂಡಲಾಯಿತು. ಇದರಿಂದ ವಿಚಲಿತರಾಗದ ಜನರು ಸಂಸ್ಥಾನದ ವಿವಿಧ ಭಾಗಗಳಿಂದ ಆಗಮಿಸಿ ಚಳುವಳಿಯನ್ನು ಆರಂಭಿಸಿ ಮುಂದುವರಿಸಿದರು. ಎ.ಶ್ಯಾಮರಾವ್, ಎಂ.ಎನ್.ವೆಂಕಟಪ್ಪ, ಹೆಚ್.ಹನುಮಂತಪ್ಪ, ಚಿಕ್ಕರುದ್ರಯ್ಯ, ಬೂದಿಗೆರೆ ನಾರಾಯಣಗೌಡ, ಅರಕೆರೆ ಯು.ಕೆಂಚಯ್ಯ ಮುಂತಾದವರು ಈ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಈ ಸತ್ಯಾಗ್ರಹದಲ್ಲಿ ಪಾಲ್ಗೊಂಡ ಸುಮಾರು 70 ಜನರನ್ನು ಸರ್ಕಾರ ಬಂಧಿಸಿತು.[9]

ಕ್ವಿಟ್ ಇಂಡಿಯಾ ಚಳವಳಿ

1942 ಆಗಸ್ಟ್ 8ರಂದು ಗಾಂಧೀಜಿಯವರು ಬ್ರಿಟೀಷರೆ ಭಾರತವನ್ನು ಬಿಟ್ಟು ತೊಲಗಿ ಎಂದು ಘರ್ಜಿಸಿದರು. ಬ್ರಿಟೀಷರನ್ನು ಭಾರತದಿಂದ ಓಡಿಸಲೇಬೇಕು ಎಂಬ ದೃಢ ನಿರ್ಣಯದಿಂದ ಗಾಂಧೀಜೀಯವರು ಚಳವಳಿಗೆ ಕರೆ ನೀಡಿದರು. ಗಾಂಧೀಜಿ, ಜವಹರ್‌ಲಾಲ್‌ನೆಹರು, ವಲ್ಲಭಬಾಯಿಪಟೇಲ್ ಮುಂತಾದ ನಾಯಕರು ಚಳವಳಿಯನ್ನು ಆರಂಭಿಸುವ ಮೊದಲೇ ಬ್ರಿಟೀಷ್ ಸರ್ಕಾರ ಅವರನ್ನು ದಸ್ತಗಿರಿ ಮಾಡಿತು, ನಾಯಕರನ್ನು ಸರ್ಕಾರವು ಬಂಧಿಸಿದ ಕಾರಣ ಜನರೇ ಹೋರಾಟವನ್ನಾರಂಭಿಸಿದರು.

ಬೆಂಗಳೂರು ನಗರದಲ್ಲಿ ವಿದ್ಯಾರ್ಥಿಗಳು ಮತ್ತು ಕಾರ್ಮಿಕರು ವ್ಯಾಪಕವಾಗಿ ಮುಷ್ಕರ ಕೈಗೊಂಡರು ಕೆಲವೆಡೆ ಗೋಲಿಬಾರಿನ ಸ್ಮಾರಕವನ್ನು ಕಾಣಬಹುದಾಗಿದೆ. ಧಾರವಾಡ, ಬೆಳಗಾವಿ ಮುಂತಾದ ಕಡೆ ರೈಲುಕಂಬಿಗಳನ್ನು ಕೀಳುವುದು, ರೈಲುನಿಲ್ದಾಣಗಳಿಗೆ ಬೆಂಕಿಹಚ್ಚುವುದು, ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸುವುದು, ಸರ್ಕಾರಿ ಅಧಿಕಾರಿಗಳು ಸಂಗ್ರಹಿಸಿದ ಕಂದಾಯದ ಹಣವನ್ನು ಲೂಟಿಮಾಡುವುದು ಅಂಚೆ ಸೇವೆಗೆ ಅಡ್ಡಿಪಡಿಸುವುದು ಮತ್ತು ಪೋಲಿಸರ ಮೇಲೆ ಹಲ್ಲೆ ಮಾಡುವುದು ಮುಂತಾದ ವಿಧ್ವಂಸಕ ಕೃತ್ಯಗಳಲ್ಲಿ ನಿರತರಾದರು.[10]

1943ರ ಏಪ್ರಿಲ್ 1 ರಂದು ಧಾರವಾಡ ಜಿಲ್ಲೆಯ ಹೊಸರಿತ್ತಿ ಗ್ರಾಮದಲ್ಲಿ ವಸೂಲಿ ಮಾಡಿ ತಂದಿರಿಸಿದ್ದ ಕಂದಾಯವನ್ನು ಲೂಟಿ ಮಾಡುವ ಘಟನೆಯಲ್ಲಿ ಪೊಲೀಸರೊಂದಿಗಿನ ಹೊರಾಟದಲ್ಲಿ ಮೈಲಾರ ಮಹದೇವಪ್ಪ ಮತ್ತು ಇನ್ನಿಬ್ಬರು ಹುತಾತ್ಮರಾದರು.

1973ರ ಜನವರಿ 20ರಂದು ಬೆಳಗಾವಿ ಜಿಲ್ಲೆಯ ತೆಲಗಿ ಗ್ರಾಮದಲ್ಲಿ 50 ಜನ ದಾಳಿ ನಡೆಸಿ, ಅಧಿಕಾರಿಗಳು ವಸೂಲಿ ಮಾಡಿದ ಕಂದಾಯದ ಹಣವನ್ನು ಲೂಟಿ ಮಾಡಿದರು. 1942 ರ ಆಗಸ್ಟ್‌ನಲ್ಲಿಯೇ ತಿಪಟೂರು ರೈಲ್ವೆ ನಿಲ್ದಾಣದಲ್ಲಾದ ಚಳವಳಿಯ ಪರಿಣಾಮದಿಂದ ಗೋಲಿಬಾರ್ ಆಯಿತು. ಅಲ್ಲದೆ ಒಂದು ಗೂಡ್ಸ್ ರೈಲು ಬೆಂಕಿಗಾಹುತಿಯಾಯಿತು. ಕರ್ನಾಟಕದಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಈಸೂರು ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ.[11]

ಈಸೂರು ದುರಂತ

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಗ್ರಾಮವೇ ಈಸೂರು. 1942ರ ಸೆಪ್ಟೆಂಬರ್ 28 ರಂದು ಜರುಗಿದ ಈಸೂರು ಘಟನೆ ದುರಂತಮಯವಾಗಿದೆ. ಸುಭಾಷ್‌ಚಂದ್ರಬೋಸ್‌ರವರು ಜರ್ಮನಿಯ ಬಾನುಲಿ ಕೇಂದ್ರಗಳಲ್ಲಿ ಮಾಡಿದ ಭಾಷಣದಿಂದ ಪ್ರೇರಿತರಾದ ಈಸೂರಿನ ಜನ ಸ್ವಾತಂತ್ರ್ಯವನ್ನು ಘೋಷಿಸಿಕೊಂಡರು. ಈಸೂರು ಗ್ರಾಮದ ಜನರು ತಮ್ಮದೇಯಾದ ಪ್ರತಿ ಸರ್ಕಾರವನ್ನು ಸ್ಥಾಪಿಸಿಕೊಂಡು ಜಯ ಎಂಬ 10 ವರ್ಷದ ಬಾಲಕನನ್ನು ಅಮಲ್ದಾರನನ್ನಾಗಿ ನೇಮಿಸಿಕೊಂಡರು. ಗ್ರಾಮದ ಪಟೇಲ ಚನ್ನಬಸವಣ್ಣ ಮತ್ತು ಶಾನುಭೋಗ ರಂಗನಾಥಯ್ಯನವರ ಬಳಿಯಿದ್ದ ಕಡತಗಳನ್ನು ಕಸಿದುಕೊಂಡರು. ಅಲ್ಲದೆ ಅವರನ್ನು ಒಂಟಿಕಾಲ ಮೇಲೆ ನಿಲ್ಲಿಸಿ ಬ್ರಿಟೀಷ್ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಈ ಘಟನೆಯಿಂದ ರೊಚ್ಚಿಗೆದ್ದ ಶಿಕಾರಿಪುರ ತಾಲ್ಲೂಕಿನ ಅಮಲ್ದಾರ್ ಚನ್ನಕೃಷ್ಣಯ್ಯ, ಪೊಲೀಸ್ ಇನ್ಸ್‌ಪೆಕ್ಟರ್ ಜಮೀರ್ ಉದ್ದೀನ್ ಷರೀಫ್ ಮತ್ತು ಸಬ್ ಇನ್ಸ್‌ಪೆಕ್ಟರ್ ಕೆಂಚೇಗೌಡ ಪೊಲೀಸ್ ಪಡೆಯೊಂದಿಗೆ ಆಗಮಿಸಿ ನೆರೆದಿದ್ದ ಜನರ ಮೇಲೆ ಗುಂಡು ಹಾರಿಸಿದರು. ಫಣಿಯಪ್ಪಾಚಾರ್ ಮತ್ತು ಗುರುಶಾಂತಪ್ಪ ಎಂಬುವರು ಗುಂಡೇಟಿನಿಂದ ಗಾಯಗೊಂಡು ನೆಲಕ್ಕುರುಳಿದರು. ಇದರಿಂದ ರೊಚ್ಚಿಗೆದ್ದ ಜನರು ಅಧಿಕಾರಿಗಳ ಮೇಲೆ ಎರಗಿದರು. ಈ ಘರ್ಷಣೆಯಲ್ಲಿ ಅಮಲ್ದಾರ್ ಚನ್ನಕೃಷ್ಣಯ್ಯ ಮತ್ತು ಸಬ್‌ಇನ್ಸ್‌ಪೆಕ್ಟರ್ ಕೆಂಚೇಗೌಡ ಮರಣಹೊಂದಿದರು. ಈ ಘಟನೆ ಎಲ್ಲರನ್ನು ಭಯಭೀತಗೊಳಿಸಿತು. ಗ್ರಾಮದಲ್ಲಿ ಕೈಗೆ ಸಿಕ್ಕಿದವರನ್ನು ಚಿತ್ರಹಿಂಸೆಗೊಳಿಸಿದರು. ಜನರ ಮನೆಗಳನ್ನು ಲೂಟಿ ಮಾಡಲಾಯಿತು. ಪ್ರಾಪ್ತ ವಯಸ್ಸಿನ ಹೆಂಗಸರನ್ನು ಅತ್ಯಾಚಾರ ಮಾಡಿದರು. 41 ಮಂದಿಯ ಮೇಲೆ ಮೊಕದ್ದಮೆ ದಾಖಲಿಸಲಾಯಿತು.[12]

ಆಪಾದಿತರನ್ನು ವಿಚಾರಣೆ ಮಾಡಲು ಸರ್ಕಾರವು ಸುಂದರರಾಜಾರಾಯರನ್ನು ವಿಶೇಷ ನ್ಯಾಯಾಧೀಶರನ್ನಾಗಿ ನೇಮಿಸಿತು. ವಿಶೇಷ ನ್ಯಾಯಾಧೀಶರಾದ ಸುಂದರರಾಜಾರಾಯರು ವಿಚಾರಣೆ ಮಾಡಲು ಬೆಂಗಳೂರಿನಿಂದ ಶಿವಮೊಗ್ಗಕ್ಕೆ ಆಗಮಿಸುತ್ತಿದ್ದ ರೈಲನ್ನು ಉರುಳಿಸುವ ಕೆಲಸ ಈಸೂರು ಗ್ರಾಮದ ಜನರಿಂದ ನಡೆದಿತ್ತು. ರೈಲು ಹಳಿ ತಪ್ಪಿತು. ದೈವವಶಾತ್ ರೈಲು ಹಳಿತಪ್ಪಿತೇ ಹೊರತು ಯಾವುದೇ ಪ್ರಾಣಹಾನಿ ಸಂಭವಿಸಲಿಲ್ಲ. ವಿಶೇಷ ನ್ಯಾಯಾಧೀಶರಾದ ಸುಂದರರಾಜಾರಾಯರು ಗಂಡಾಂತರದಿಂದ ಪಾರಾಗಿ ಸುರಕ್ಷಿತವಾಗಿ ಶಿವಮೊಗ್ಗವನ್ನು ತಲುಪಿ ತನಿಖೆಯಾರಂಭಿಸಿದರು. ಅವರು ನೀಡಿದ ತೀರ್ಪಿನಲ್ಲಿ 11 ಜನಕ್ಕೆ ಮರಣದಂಡನೆ, ಕೆಲವರಿಗೆ ಜೀವಾವಧಿ ಶಿಕ್ಷೆಯಾಯಿತು. ಉಚ್ಚನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ ಗುರಪ್ಪ, ಮಲ್ಲಪ್ಪ, ಸೂರ್ಯ ನಾರಾಯಣಾಚಾರಿ, ಹಾಲಪ್ಪ, ಶಂಕರಪ್ಪ ಅವರಿಗೆ ಮರಣದಂಡನೆ ಶಿಕ್ಷೆಯಾಯಿತು.

ಮರಣದಂಡನೆಗೆ ತುತ್ತಾಗಿದ್ದ 5 ಜನರನ್ನು 3 ದಿನದಲ್ಲಿ ಬೆಂಗಳೂರು ಕೇಂದ್ರಕಾರಾಗೃಹದಲ್ಲಿ ಗಲ್ಲಿಗೇರಿಸಿದರು. ಈ ಐದು ಜನರು ಭಾರತಮಾತೆಗೆ ಜೈಕಾರ ಹಾಕಿ ತಮ್ಮ ಪ್ರಾಣಪುಷ್ಪಗಳನ್ನು ಭಾರತಮಾತೆಯ ಪಾದಾರವಿಂದಗಳಿಗೆ ಸಮರ್ಪಿಸಿದರು.[13]

ಭಾರತ ಬಿಟ್ಟು ತೊಲಗಿ ಚಳವಳಿಯು ಭಾರತೀಯರು ಬ್ರೀಟಿಷರ ವಿರುದ್ಧ ಹೂಡಿದ ಚಳವಳಿಗಳಲ್ಲಿ ಪರಿಣಾಮಕಾರಿಯಾದ ಮತ್ತು ವ್ಯಾಪಕವಾದ ಚಳವಳಿಯಾಯಿತು. ಕರ್ನಾಟಕದಲ್ಲಿ ನಡೆದ ಕ್ವಿಟ್ ಇಂಡಿಯ ಚಳವಳಿಗೆ ಈಸೂರು ಘಟನೆ ಮುಕುಟಪ್ರಾಯವಾಗಿದೆ. ಈ ಚಳವಳಿ ತನ್ನ ಗುರಿ ಸಾಧಿಸಲು ವಿಫಲವಾದರೂ ಕೂಡ ಬ್ರಿಟೀಷ್ ಸಾಮ್ರಾಜ್ಯದ ಅಡಿಪಾಯವನ್ನೇ ಅಲುಗಾಡಿಸಿತು.

ಮೈಸೂರು ಚಲೋ ಚಳವಳಿ ಅಥವಾ ಅರಮನೆ ಸತ್ಯಾಗ್ರಹ

1947ರ ಆಗಸ್ಟ್ 15 ರಂದು ಭಾರತವು ಸ್ವಾತಂತ್ರ್ಯ ಪಡೆಯಿತು. ಸ್ವಾತಂತ್ರ್ಯ ಪಡೆದ ಸಂಭ್ರಮವನ್ನು ಇಡೀ ದೇಶವೇ ಆಚರಿಸಿತು. ಎಲ್ಲಾ ಸರ್ಕಾರಿ ಕಛೇರಿಗಳಲ್ಲೂ ಭಾರತದ ತ್ರಿವರ್ಣಧ್ವಜ ರಾರಾಜಿಸಿತು. ಆದರೆ ಮೈಸೂರು ಸಂಸ್ಥಾನ ಮಾತ್ರ ತ್ರಿವರ್ಣ ಧ್ವಜವನ್ನು ಹಾರಿಸಿ ಸ್ವಾತಂತ್ರ್ಯದ ಸವಿಯನ್ನು ಅನುಭವಿಸಲಾಗಲಿಲ್ಲ. ಏಕೆಂದರೆ ಮಹಾರಾಜರಾದ ಜಯಚಾಮರಾಜ ಒಡೆಯರ್ ಅವರು ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾಗಲು ಒಪ್ಪಿದ್ದರು. ಆದರೆ ದಿವಾನ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರ ಪ್ರಭಾವದಿಂದಾಗಿ ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರ್ಪಡೆ ಮಾಡಲು ಹಿಂಜರಿದರು. ಆದ್ದರಿಂದ ಕೆ.ಸಿ.ರೆಡ್ಡಿಯವರ ನೇತೃತ್ವದಲ್ಲಿ ಕರ್ನಾಟಕದ ಕಾಂಗ್ರೆಸ್ ಕಾರ್ಯಕರ್ತರು ರಾಜ್ಯದ ನಾನಾ ಭಾಗಗಳಿಂದ ಬೆಂಗಳೂರಿಗೆ ಆಗಮಿಸಿ ಚಳವಳಿಗೆ ಮುಂದಾದರು. ಜಯಚಾಮರಾಜ ಒಡೆಯರ್ ಅವರ ಆಪ್ತ ಕಾರ್ಯದರ್ಶಿಯಾಗಿದ್ದ ತಂಬೂಚೆಟ್ಟಿ ಅವರೂ ಸಹ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರ ರಚನೆಗೆ ವಿರೋಧವಾಗಿದ್ದರು.

1947 ರ ಆಗಸ್ಟ್ 20 ರಂದು ಸಭೆ ಸೇರಿದ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಜವಾಬ್ದಾರಿ ಸರ್ಕಾರ ರಚನೆಗಾಗಿ 1947ರ ಸೆಪ್ಟೆಂಬರ್ 1 ರಂದು ಬೆಂಗಳೂರಿನಿಂದ ಮೈಸೂರು ಚಲೋ ಚಳವಳಿಯನ್ನು ಹಮ್ಮಿಕೊಂಡಿತ್ತು. 1947ರ ಸೆಪ್ಟೆಂಬರ್ 1 ರಂದು ಚಳವಳಿಗಾರರು ಬೆಂಗಳೂರಿನ ಬನ್ನಿಮಿಲ್ ಮುಂಭಾಗದಲ್ಲಿ ಸಭೆ ಸೇರಿ ಧ್ವಜಾರೋಹಣ ಮಾಡಿದರು. ಸಂಜೆಯ ವೇಳೆಗೆ ಬನ್ನಪ್ಪ ಪಾರ್ಕಿನಲ್ಲಿ ಸೇರಿದ ಸಭೆಯನ್ನು ಉದ್ದೇಶಿಸಿ ಕೆ.ಸಿ.ರೆಡ್ಡಿಯವರು ಭಾಷಣ ಮಾಡುತ್ತಾ, **'ಹಿಂದೆ ಸುಭಾಷ್ ಚಂದ್ರಬೋಸ್ ಹೇಗೆ ಡೆಲ್ಲಿ ಚಲೋ ಎಂದು ಘೋಷಣೆ ಮಾಡಿದರೋ, ಆದೇ ರೀತಿ**

ನಾವಿಂದು ಮೈಸೂರು ಪ್ರಾಂತ್ಯ ಕಾಂಗ್ರೆಸ್ ನೇತೃತ್ವದಲ್ಲಿ 1947ರ ಸೆಪ್ಟೆಂಬರ್ 4 ರಂದು ಮೈಸೂರು ಚಲೋ ಘೋಷಣೆ ಮಾಡಿದ್ದೇವೆ, ಮೈಸೂರು ಅರಮನೆಯ ಮುಂದೆ ಸತ್ಯಾಗ್ರಹ ಮಾಡಲು ತೀರ್ಮಾನಿಸಿದ್ದೇವೆ' ಎಂದು ಘರ್ಜಿಸಿದರು. ಆದರೆ ಸೆಪ್ಟೆಂಬರ್ 3ರ ಮಧ್ಯರಾತ್ರಿಯೇ ಸರ್ಕಾರ ಕಾಂಗ್ರೆಸ್ ನಾಯಕರುಗಳಾದ ಕೆ.ಸಿ.ರೆಡ್ಡಿ, ಸುಬ್ರಹ್ಮಣ್ಯಂ, ಹೆಚ್.ಕೆ.ವೀರಣ್ಣಗೌಡ, ಎ.ಜಿ.ಬಂದೀಗೌಡ, ಎಸ್.ನಿಜಲಿಂಗಪ್ಪ ಮುಂತಾದವರನ್ನು ಬಂಧಿಸಿತು. ಪತ್ರಿಕೆಗಳ ಮೇಲೆ ನಿರ್ಬಂಧ ಹೇರಿತು. ಮಿಲಿಟರಿ ಮತ್ತು ಪೊಲೀಸಿನ ಸರ್ಪಗಾವಲನ್ನು ಹಾಕಿತು.[14]

ಇಂಡಿಯನ್ ಎಕ್ಸ್‌ಪ್ರೆಸ್ ವರದಿಯ ಪ್ರಕಾರ ಮೈಸೂರು ನಗರದ ಸೆಂಟ್ರಲ್ ಜೈಲಿನಲ್ಲಿ ಕೈದಿಗಳನ್ನು ಇಡಲು ಅವಕಾಶವಿರುವುದಕ್ಕಿಂತ 200 ಜನ ಹೆಚ್ಚು ದಸ್ತಗಿರಿಯಾಗಿದ್ದರು. ರಾಜ್ಯಾದ್ಯಾಂತ ಸುಮಾರು 4000 ಜನರು ದಸ್ತಗಿರಿಯಾಗಿದ್ದರು. ಸತ್ಯಾಗ್ರಹದ ಬಿಸಿ ಏರಿದಂತೆ ರಾಜರು ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದಾಗಿ ತಮ್ಮ ತೀರ್ಮಾನವನ್ನು ಪ್ರಕಟಿಸಿದರು.

ಸಂಸ್ಥಾನದ ವಿವಿಧ ಭಾಗಗಳಿಂದ ಆಗಮಿಸಿದ ಸತ್ಯಾಗ್ರಹಿಗಳು 1947ರ ಸೆಪ್ಟೆಂಬರ್ 5 ರಂದು ಮಹಾರಾಜ ಕಾಲೇಜಿನ ಪೂರ್ವಭಾಗಕ್ಕಿರುವ ವೃತ್ತದ ಬಳಿ ಜಮಾಯಿಸಿದರು. ವಿದ್ಯಾರ್ಥಿಗಳು ಮತ್ತು ಸತ್ಯಾಗ್ರಹಿಗಳು ಪೋಲೀಸರ ಮೇಲೆ ಕಲ್ಲುತೂರಿದರು. ಅಲ್ಲಿಂದ ಅರಮನೆಗೆ ತೆರಳಿ ರಾಜರು ತಮ್ಮ ಪದವಿಯನ್ನು ಬಿಟ್ಟುಕೊಟ್ಟು ಜವಾಬ್ದಾರಿ ಸರ್ಕಾರ ರಚನೆಗೆ ಒಪ್ಪಿಗೆ ಸೂಚಿಸುವಂತೆ ಮಾಡುವ ಗುರಿಹೊಂದಿದ್ದರು. ಅಧಿಕಾರದಾಸೆಯನ್ನು ಹೊಂದಿದ್ದ ದಿವಾನರಾದ ಅರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರನ್ನು ಉದ್ದೇಶಿಸಿ, ಅರ್ಕಾಟ್ ಬಾಯ್ಕಾಟ್ ಮತ್ತು ತಂಬೂಚೆಟ್ಟಿ ಚಟ್ಟಕಟ್ಟಿ ಎಂಬ ಘೋಷಣೆಗಳನ್ನು ಮೊಳಗಿಸಿದರು. ಈ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದ ಅರಸೀಕೆರೆ ಮೂಲದ ಮತ್ತು ಹಾರ್ಡ್ವಿಕ್ ಪ್ರೌಢಶಾಲೆಯ ವಿದ್ಯಾರ್ಥಿಯಾದ ರಾಮಸ್ವಾಮಿ ಪೋಲಿಸರ ಗುಂಡಿಗೆ ಬಲಿಯಾದನು. ಅವನ ಬಲಿದಾನದ ನೆನಪಿಗಾಗಿ ಆ ವೃತ್ತಕ್ಕೆ **'ರಾಮಸ್ವಾಮಿ ಸರ್ಕಲ್'** ಎಂದೇ ಕರೆಯಲಾಯಿತು. ಬಂಧಿತ ನಾಯಕರನ್ನು ಸರ್ಕಾರ ರಾಜರ ಹುಟ್ಟು ಹಬ್ಬದ ದಿನದ ಪ್ರಯುಕ್ತ ಬಿಡುಗಡೆಗೊಳಿಸಿತು. ಕ್ಯಾಸಂಬಳ್ಳಿ ಚಂಗಲರಾಯರೆಡ್ಡಿ ಅವರ ನೇತೃತ್ವದಲ್ಲಿ ಮೈಸೂರಿನಲ್ಲಿ 1947ರ ಅಕ್ಟೋಬರ್ 24 ರ ವಿಜಯದಶಮಿಯಂದು ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಕೆ.ಸಿ.ರೆಡ್ಡಿ ರಾಜ್ಯದ ಪ್ರಥಮ ಮುಖ್ಯಮಂತ್ರಿಯಾದರು. ಮಹಾರಾಜರ ಅನುಮತಿ ಪಡೆದು 1947ರ ಅಕ್ಟೋಬರ್ 29 ರಂದು ಮೈಸೂರು ಅರಮನೆಯಲ್ಲಿ ಪ್ರಥಮ ಮಂತ್ರಿಮಂಡಲ ಸಮಾವೇಶಗೊಂಡಿತು.

ಮೈಸೂರು ಚಲೋ ಚಳವಳಿ ಸುಮಾರು 42 ದಿನಗಳ ಕಾಲ ನಡೆದು ಒಡೆಯರ್ ಮನೆತನದ ಆಳ್ವಿಕೆಗೆ ಅಂತ್ಯ ಹಾಡಿತು. ಪ್ರಜಾಪ್ರಭುತ್ವಕ್ಕೆ ಸ್ವಾಗತ ನೀಡಿತು. ಜನರ ಕನಸು ನನಸಾಯಿತು.

ಚಲೋ ಮೈಸೂರು ಚಳುವಳಿಯಲ್ಲಿ ಲಕ್ಷಮ್ಮನವರ ಪಾತ್ರ

ಸಮಾಜಸೇವೆ, ಸಾಹಿತ್ಯ ಸೇವೆ ಮಾಡಿಕೊಂಡಿದ್ದ ಎಂ.ಆರ್.ಲಕ್ಷಮ್ಮನವರು ಆಕಸ್ಮಿಕವಾಗಿ ರಾಜಕೀಯ ಕ್ಷೇತ್ರಕ್ಕೆ ಅಡಿ ಇಟ್ಟರು. 1945 ರಲ್ಲಿ ಕಾಂಗ್ರೆಸ್ ಸದಸ್ಯರಾದ ಎಂ.ಆರ್.ಲಕ್ಷಮ್ಮ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿದ್ದರು. 1946 ರಲ್ಲಿ ಮೈಸೂರು ಪುರಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದರು. ರಾಜಕೀಯ ರಂಗದ ಪ್ರವೇಶದ ನಂತರ ದೇಶಸೇವೆಗೆ ತಮ್ಮನ್ನು ಮುಡಿಪಾಗಿಟ್ಟ ಎಂ.ಆರ್.ಲಕ್ಷಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ಮೈಸೂರು ಸಂಸ್ಥಾನದಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಮೈಸೂರು ಕಾಂಗ್ರೆಸ್ 1–5–47 ರಿಂದ ಸತ್ಯಾಗ್ರಹ ಮಾಡಲು ನಿರ್ಧಾರಿಸಿತು. ಈ ಸತ್ಯಾಗ್ರಹದಲ್ಲಿ ಭಾಗವಹಿಸಲು ಅಪೇಕ್ಷಿಸುವ ಮಹಿಳೆಯರ ನೇತೃತ್ವವನ್ನು ವಹಿಸಿಕೊಂಡ ಎಂ.ಆರ್.ಲಕ್ಷಮ್ಮನವರು ಮಹಿಳಾ ಸಂಘಟನೆಯನ್ನು ಮಾಡತೊಡಗಿದರು.[15]

ಮೈಸೂರು ಕಾಂಗ್ರೆಸ್ ಸಮಿತಿಯು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುವ ಸಲುವಾಗಿ ಬಹಿರಂಗ ಸಭೆಯನ್ನು ಕರೆಯಿತು. ಸಭೆಯಲ್ಲಿ ಭಾಗವಹಿಸಿದ ಎಂ.ಆರ್.ಲಕ್ಷಮ್ಮನವರು ಮಾತನಾಡಿ ಭಾರತಕ್ಕೆ ಸ್ವಾತಂತ್ರ್ಯ ಬಂದಿದ್ದರೂ ಮೈಸೂರಿಗೆ ಬಾರದಿರುವುದನ್ನು ಖಂಡಿಸಿ ಇಲ್ಲಿನ ಅಳರಸರು ಕೂಡಲೇ ಎಚ್ಚೆತ್ತು ಪ್ರಜೆಗಳಿಗೆ ಅಧಿಕಾರವನ್ನು ವರ್ಗಾಯಿಸಬೇಕೆಂದು ಕೋರಿದರು. 1947 ಸೆಪ್ಟೆಂಬರ್ ತಿಂಗಳು 4 ರಂದು ಪುರಸಭೆಯಲ್ಲಿ ಬಹಿರಂಗ ಸಭೆಯನ್ನು ನಡೆಸಲು ಕಾಂಗ್ರೆಸ್ ಪಕ್ಷದ ಕಛೇರಿಯಲ್ಲಿ ತೀರ್ಮಾನಿಸಲಾಯಿತು. ಅದರಂತೆ ಸಂಜೆ ಹೆಚ್.ಸಿ.ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.[16] ಹೆಚ್ಚಿನ ಸಂಖ್ಯೆಯಲ್ಲಿ ಜನರು ಸಭೆ ಸೇರಿದ್ದರು. ಸಭೆಯಲ್ಲಿ ಎಂ.ಆರ್.ಲಕ್ಷಮ್ಮನವರು ಟಿ.ಸುನಂದಮ್ಮನವರು ಸರ್ಕಾರದ ತಪ್ಪುಗಳನ್ನು ಬಯಲಿಗೆಳೆದು ಜವಾಬ್ದಾರಿ ಸರ್ಕಾರಕ್ಕೆ ಒತ್ತಾಯಿಸಿದರು.

ಸಭೆ ಮುಗಿಸಿ ಮನೆಗೆ ಬಂದ ಎಂ.ಆರ್.ಲಕ್ಷಮ್ಮನವರು ಊಟ ಮುಗಿಸಿ ಪತಿಯೊಡನೆ ವಿಚಾರ ವಿನಿಮಯ ಮಾಡುತ್ತಿದ್ದಾಗ ರಾತ್ರಿ ಸಮಯ 10.30 ಆಗಿತ್ತು. ಬಾಗಿಲು ತೆರೆದಾಗ ಪೊಲೀಸ್ ಅಧಿಕಾರಿಯವರು ನೀವು ಅರೆಸ್ಟ್ ಆಗಿದ್ದೀರಿ, ನಾನು ಕರ್ತವ್ಯ ನಿರ್ವಹಿಸಲು ಬಂದಿದ್ದೇನೆ ಎಂದು ಎಂ.ಆರ್.ಲಕ್ಷಮ್ಮನವರನ್ನು ಬಂಧಿಸಿದರು. ಜೊತೆಗೆ ಸುನಂದಮ್ಮನವರನ್ನು ಮತ್ತು ಹೆಚ್.ಸಿ.ದಾಸಪ್ಪನವರನ್ನು ಬಂಧಿಸಿ ಒಂದೇ ವಾಹನದಲ್ಲಿ ಕರೆದೊಯ್ದರು.[17]

ದಿನಾಂಕ 4-9-47 ರಿಂದ 5-10-47 ರವರೆಗೆ ಸೆರೆಮನೆ ವಾಸವನ್ನು ಅನುಭವಿಸಿದ ಎಂ.ಆರ್.ಲಕ್ಷಮ್ಮನವರು ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ನಡೆಯುವ ಅರಮನೆ ಸತ್ಯಾಗ್ರಹದಲ್ಲಿ ಹೆಚ್ಚಿನ ಸಂಖ್ಯೆಯ ಮಹಿಳೆಯರು ಪುರುಷರು ಭಾಗವಹಿಸುವಂತೆ ಸಂಘಟನೆ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ದಿನಾಂಕ 7-10-47 ರಂದು ಎಂ.ಆರ್.ಲಕ್ಷಮ್ಮನವರ ಅಧ್ಯಕ್ಷತೆಯಲ್ಲಿ ನಗರ ಕಾಂಗ್ರೆಸ್ ಕೆಲಸಗಾರರ ಸಭೆ ನಡೆಯಿತು.[18] ಮಹಾರಾಜರು ಮಾಡಿರುವ ಘೋಷಣೆಗಳು ಅತೃಪ್ತಿದಾಯಕವಾಗಿದ್ದು, ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿ ಬಂಧಿಯಾದ ನಾಯಕರ ಬಿಡುಗಡೆಗಾಗಿ ಅರಮನೆ ಸತ್ಯಾಗ್ರಹವನ್ನು ನಡೆಸಿಕೊಂಡು ಬರಲು ತೀರ್ಮಾನಿಸಲಾಯಿತು. ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಪುರಸಭಾ ಮೈದಾನದಲ್ಲಿ 16-10-47 ರಂದು ನಡೆದ ಸಭೆಯಲ್ಲಿ ಲಕ್ಷಮ್ಮನವರು ಭಾಗವಹಿಸಿದರು. ಸತ್ಯಾಗ್ರಹದಲ್ಲಿ ಭಾಗವಹಿಸಿ ನೊಂದ ಮಹಿಳೆಯರಿಗೆ ವಂದನೆಯನ್ನು ಅರ್ಪಿಸಿ, ಮಹಿಳಾ ಮಂಡಳಿಯು ಜವಾಬ್ದಾರಿ ಸರ್ಕಾರಕ್ಕೆ ಸತತವಾಗಿ ಶ್ರಮಿಸಲು ತೀರ್ಮಾನಿಸಿರುವುದಾಗಿ ಹೇಳಿದರು.[19]

ಎಂ.ಆರ್.ಲಕ್ಷಮ್ಮನವರು ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ನಡೆದ ಹೋರಾಟದಲ್ಲಿ ಸತತವಾಗಿ ಭಾಗವಹಿಸಿ ಐವರು ಮಕ್ಕಳ ತಾಯಿಯಾಗಿದ್ದ ಅವರು ಮನೆ ಮಕ್ಕಳು ಎಲ್ಲವನ್ನು ಬಿಟ್ಟು ಸೆರೆಮನೆ ವಾಸವನ್ನು ಅನುಭವಿಸಿದರು. ನಲವತ್ತೆರಡು ದಿನಗಳ ಕಾಲ ನಡೆದ ಚಳುವಳಿಯನ್ನು ಹತ್ತಿಕ್ಕಲು ಅಸಮರ್ಥವಾದ ಸರ್ಕಾರ ಅಕ್ಟೋಬರ್ 24, 1947 ರ ವಿಜಯದಶಮಿಯಂದು ಕೆ.ಸಿ.ರೆಡ್ಡಿಯವರ ನಾಯಕತ್ವದಲ್ಲಿ ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬಂತು.

ಎಂ.ಆರ್.ಲಕ್ಷಮ್ಮನವರ ಸೆರೆಮನೆ ದಿನಚರಿ

ಜವಾಬ್ದಾರಿ ಸರ್ಕಾರದ ಹೋರಾಟದಲ್ಲಿ ಭಾಗವಹಿಸಿದ ಎಂ.ಆರ್.ಲಕ್ಷಮ್ಮನವರನ್ನು ದಿನಾಂಕ 4-9-1947 ರಿಂದ ದಿನಾಂಕ.16-9-47 ರವರೆಗೆ ಮೈಸೂರಿನ ಸೆರೆಮನೆಯಲ್ಲಿ ಇಡಲಾಯಿತು. ನಂತರ ಬೆಂಗಳೂರಿನ ಕಾರಾಗೃಹಕ್ಕೆ ದಿನಾಂಕ.16-9-47 ರ ಸಂಜೆ ವರ್ಗಾಯಿಸಿ ದಾಖಲಿಸಿದಾಗ ಎಂ.ಆರ್.ಲಕ್ಷಮ್ಮನವರು ಬೆಂಗಳೂರಿನ ಕಾರಾಗೃಹದಲ್ಲಿ ಕಳೆದ ದಿನಗಳನ್ನು ನಿರೂಪಿದ್ದಾರೆ. ದಿ.4-9-47 ರಂದು ಸಂಜೆ ಪುರಭವನದಲ್ಲಿ ಸರ್ಕಾರದ ವಿರುದ್ದ ಮಾಡಿದ್ದ ಭಾಷಣದಿಂದಾಗಿ ಅಂದೇ ರಾತ್ರಿ 10.30ರ ವೇಳೆಗೆ ಪೋಲೀಸರು ಬಂದು ಇವರನ್ನು ಸೆರೆಮನೆಗೆ ಕರೆದೊಯ್ದು ಸಂಗತಿಯನ್ನು ಹಾಗೂ ವಯಸ್ಸಾದ ಅತ್ತೆ, ನಾಲ್ಕು ಸಣ್ಣ ಮಕ್ಕಳು ಮತ್ತು ಪತಿಯ ಮೇಲೆ ಸಂಸಾರದ ಜವಾಬ್ದಾರಿಯನ್ನು ಹೊರೆಸಿ ಜೈಲಿಗೆ ಹೋಗುವ ಅನಿವಾರ್ಯತೆಗಳನ್ನೆಲ್ಲಾ ಮನಮುಟ್ಟುವಂತೆ ದಾಖಲಿಸಿದ್ದಾರೆ.

ಜೈಲಿನಲ್ಲಿನ ಪರಿಸ್ಥಿತಿ, ಅಲ್ಲಿನ ಸಹೃದಯಿ ಅಧಿಕಾರಿ ಅಮೀರಾಲಿ, ಮಹಿಳಾ ಖೈದಿಗಳ ಸ್ಥಿತಿಗತಿ ಬಗ್ಗೆ ವಿವರಗಳನ್ನು ದಾಖಲಿಸಿದ್ದಾರೆ. ಅವರು ಸೆರೆಮನೆಯಲ್ಲಿದ್ದಾಗಲು ತಮ್ಮ ಸಮಾಜಸೇವೆಯ ಕಾರ್ಯವನ್ನು ಬಿಡಲಿಲ್ಲ.

ಜೈಲಿನಲ್ಲಿದ್ದ ಅನಕ್ಷರಸ್ಥ ಮಹಿಳೆಯರಿಗೆ ಅಕ್ಷರಗಳನ್ನು ಮತ್ತು ಸರಳ ವಿಧಾನದಲ್ಲಿ ಲೆಕ್ಕಾಚಾರಗಳನ್ನು ಕಲಿಸಿದರು. ಸೆರೆಮನೆಯಲ್ಲಿದ್ದಾಗ ದಿನಪತ್ರಿಕೆಗಳಲ್ಲಿ ವರದಿಯಾಗಿದ್ದಂತಹ ಅನೇಕ ಸಂಗತಿಗಳನ್ನು ತಮ್ಮ ದಿನಚರಿಯಲ್ಲಿ ದಾಖಲಿಸಿದ್ದು, ಅದೊಂದು ಪ್ರಮುಖ ದಾಖಲೆಯಾಗಿದೆ. ಹೆಚ್.ಸಿ.ದಾಸಪ್ಪ, ಟಿ.ಸುನಂದಮ್ಮ ಮತ್ತು ಇವರನ್ನು ಒಂದೇ ದಿನ ಬಂಧಿಸಲಾಗಿದ್ದು, ಇನ್ನೂ ಹಲವು ನಾಯಕರ ಬಗ್ಗೆ ತಮ್ಮ ದಿನಚರಿಯಲ್ಲಿ ದಾಖಲಿಸಿದ್ದಾರೆ. ಸಮಕಾಲೀನ ವಿದ್ಯಮಾನಗಳನ್ನು ದಾಖಲಿಸಿದ ಎಂ.ಆರ್.ಲಕ್ಷಮ್ಮನವರ ದಿನಚರಿ ಒಂದು ಉತ್ತಮ ದಾಖಲೆಯಾಗಿದೆ. ಸೆರೆಮನೆಗೆ ಕರೆದೊಯ್ಯುವ ಸಂಧರ್ಭದಲ್ಲಿ ಚಳುವಳಿಯ ಪ್ರಮುಖ ಮುಂದಾಳುಗಳನ್ನು ಸೆರೆಮನೆಗೆ ಹಾಕಿದರೆ ನಿಮ್ಮ ಚಳುವಳಿ ತಣ್ಣಗಾಗುತ್ತದೆ ಎಂದ ಪೋಲೀಸ್ ಅಧಿಕಾರಿಗೆ ಎಂ.ಆರ್.ಲಕ್ಷಮ್ಮನವರು 'ಹೆಣ್ಣು ಮಕ್ಕಳು ಹೇಡಿಗಳೇನಲ್ಲ ದೇಶಾಭಿಮಾನಿಗಳು ಸಾವಿರಾರು ಜನ ಇದ್ದಾರೆ ಚಳುವಳಿ ನಡೆಯುತ್ತದೆ' ಎಂದು ಉತ್ತರಿಸಿದ್ದರು.

ದಿನಾಂಕ.6–9–47 ರಂದು ಜೈಲಿನ ಅಧಿಕಾರಿಯೊಬ್ಬರು ಬಂದು ಸಯ್ಯಾಜಿರಾವ್ ರಸ್ತೆಯಲ್ಲಿ ಗುಂಡು ಹೊಡೆತವಾದ ಬಗ್ಗೆ 1939 ಮತ್ತು 1942ರ ಕ್ವಿಟ್ ಇಂಡಿಯಾ ಚಳುವಳಿಗಿಂತ ಚಲೋ ಮೈಸೂರು ಚಳುವಳಿಯ ತೀವ್ರತೆ ಬಗ್ಗೆ ಅನೇಕ ವಿವರಗಳನ್ನು ಎಂ.ಆರ್.ಲಕ್ಷಮ್ಮನವರಿಗೆ ತಿಳಿಸಿದರು. ಜೈಲಿನ ಮುಖ್ಯಸ್ಥ ಅಮೀರಾಲಿಯವರು ತಮ್ಮ ಮಗ ಚಳುವಳಿಯಲ್ಲಿ ಭಾಗವಹಿಸುತ್ತಿರುವ ವಿವರಗಳನ್ನು, ಕೆ.ಆರ್.ಮಿಲ್ಲಿನ ನೌಕರರ ಪ್ರತಿಭಟನೆಯನ್ನು ರೈಲ್ವೆ ಕಾರ್ಮಿಕರ ಮುಷ್ಕರದ ಬಗ್ಗೆ ಬೆಂಗಳೂರಿನಲ್ಲಿ ವಿದ್ಯಾರ್ಥಿನಿಯರು ಕರ್ಫ್ಯೂ ಇದ್ದರೂ ಪ್ರಭಾತ್ ಫೇರಿ ನಡೆಸಿದ ಬಗೆಗಿನ ವಿವರಗಳನ್ನು ನೀಡಿದರು. ಸೆಪ್ಟೆಂಬರ್ 4 ರಂದು ಪುರಸಭೆಯಲ್ಲಿ ಮಾಡಿದ ಭಾಷಣದಲ್ಲಿ ದಾಸಪ್ಪನವರು ಮತ್ತು ಎಂ.ಆರ್.ಲಕ್ಷಮ್ಮನವರು ಸರ್ಕಾರವನ್ನು ವಿರೋದಿಸಿದ್ದನ್ನು ತಿರುಚಿ, ಅವರು ಸರ್ಕಾರವನ್ನು ಪ್ರಶಂಸಿದ್ದಾರೆಂಬ ಸುದ್ದಿಯನ್ನು ಆಕಾಶವಾಣಿಯಲ್ಲಿ ಪ್ರಸಾರ ಮಾಡಿದ ಬಗ್ಗೆ ಕೂಡ ತಿಳಿಸಿದರು. ಹೆಚ್.ಎಂ.ಚೆನ್ನಬಸಪ್ಪರವರ ನೇತೃತ್ವದಲ್ಲಿ ಚಳುವಳಿ ತೀವ್ರವಾಗಿ ನಡೆಯುತ್ತಿರುವ ಬಗ್ಗೆ ಆತನಿಂದ ಮಾಹಿತಿಯನ್ನು ಪಡೆದುಕೊಂಡರು.[20]

ದಿನಾಂಕ.7–9–47 ರಂದು 48 ಗಂಟೆಗಳ ಕರ್ಫ್ಯೂ ಇದ್ದು ದಿನಪತ್ರಿಕೆಗಳು ಪ್ರಕಟವಾಗುವ ಬಗ್ಗೆ ತಮ್ಮ ದಿನಚರಿಯಲ್ಲಿ ದಾಖಲಿಸಿದ್ದಾರೆ. ಟಿ.ಸುನಂದಮ್ಮನವರು 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರ ಬಗ್ಗೆ ಎಂ.ಆರ್.ಲಕ್ಷಮ್ಮನವರ ಜೊತೆ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಯಶೋಧರದಾಸಪ್ಪ ಮತ್ತು ಟಿ.ಸುನಂದಮ್ಮನವರು ಡೈನಮೇಟು ಇಡುವ ವೈರು ಕತ್ತರಿಸುವ ಕ್ರಾಂತಿಕಾರಿ ಕಾರ್ಯಗಳನ್ನು ಮಾಡುತ್ತಿದ್ದ ಬಗ್ಗೆ, ಹುಡುಗಿರ ಹೋರಾಟ ಹುಡುಗರದ್ದು ನಮ್ಮ ಹೋರಾಟದಲ್ಲಿ ಅದನ್ನು ಬೆರೆಸಬೇಕಾಗಿಲ್ಲ ಎಂದು ದಾಸಪ್ಪನವರ ಅಭಿಪ್ರಾಯವಾಗಿದ್ದು, ಅವರ ನಿಲುವನ್ನು ಟಿ.ಸುನಂದಮ್ಮನವರು ಖಂಡಿಸುತ್ತಿದ್ದ ಬಗ್ಗೆ ಎಲ್ಲ ಮಾಹಿತಿಗಳನ್ನು ಟಿ.ಸುನಂದಮ್ಮನವರು ಎಂ.ಆರ್.ಲಕ್ಷಮ್ಮನವರ ಜೊತೆಯಲ್ಲಿ ಹಂಚಿಕೊಂಡರು.

ದಿನಾಂಕ.8–9–1947ರಂದು ಸೆರೆಮನೆಯ ಮಹಿಳಾ ಬ್ಯಾರಕ್‌ಗೆ ಟಿ.ಮರಿಯಪ್ಪನವರು ಮತ್ತು ದಾಸಪ್ಪನವರು ಬಂದು ಎಂ.ಆರ್.ಲಕ್ಷಮ್ಮ ಮತ್ತು ಟಿ.ಸುನಂದಮ್ಮನವರನ್ನು ಭೇಟಿ ಮಾಡಿದರು. ಮಂಡ್ಯದಲ್ಲಿ ನಡೆಯುತ್ತಿರುವ ಗಲಭೆ, ಮಳವಳ್ಳಿಯಲ್ಲಿ ನಡೆಯುತ್ತಿರುವ ಚಳುವಳಿಗಳ ಬಗ್ಗೆ ಅಸ್ಪಷ್ಟ ಸುದ್ದಿಗಳು ವದಂತಿಗಳು ಜೈಲಿಗೆ ತಲುಪುತ್ತಿದ್ದವು. ವಯಸ್ಕರ ಶಿಕ್ಷಣ ಸಮಿತಿಯಲ್ಲಿದ್ದ 'ಬೆಳಕು' ವಾರಪತ್ರಿಕೆಯ ಸಂಪಾದಕರಾದ ಎಂ.ಆರ್.ಲಕ್ಷಮ್ಮನವರು ಅನಕ್ಷರಸ್ಥ ಮಹಿಳೆಯರಿಗೆ ಅಕ್ಷರ ಕಲಿಸುವ ಬಗ್ಗೆ ಆಲೋಚಿಸಿ ಮೊದಲು ವಯಸ್ಕರಿಗೆ ಅರಿವು ಮೂಡಿಸುವ ಕಾರ್ಯವನ್ನು ಮಾಡಿದರು. ಶ್ರೀರಾಮಚಂದ್ರನ ಕಥೆಯ ಮೂಲಕ ಲೆಕ್ಕವನ್ನು ಕಥೆಯ ರೂಪದಲ್ಲಿ ಹೇಳಿಕೊಟ್ಟರು. ಜೈಲಿನಲ್ಲಿ ಕಾವಲುಗಾರ್ತಿಯಾಗಿದ್ದ ದೇವಮ್ಮನಿಗೆ ಹೆಸರನ್ನು ಬರೆಯಲು ಕಲಿಸಿದರು.[21]

ಎಂ.ಆರ್.ಲಕ್ಷಮ್ಮನವರೊಂದಿಗೆ ಕಮಲಾದೇವಿ ಭೀಮರಾವ್ ಕೂಡ ಸೆರೆಮನೆಯಲ್ಲಿರುವ ಜೈಲಿನ ಅಧಿಕಾರಿ ಅಮೀರಾಲಿಯವರು ಎಂ.ಆರ್.ಲಕ್ಷಮ್ಮ ಮತ್ತು ಸುನಂದಮ್ಮನವರೊಡನೆ ಮಾತನಾಡುತ್ತಾ ತಮ್ಮ ಪತ್ನಿ ಶಿಕ್ಷಕಿಯಾಗಿದ್ದಳು. ಮದುವೆಯ ನಂತರ ಕೆಲಸ ಬಿಡಿಸಿದೆ, ತಮ್ಮ ಪತ್ನಿ ಮಕ್ಕಳನ್ನು ಪುಸ್ತಕ ಪ್ರೇಮಿಗಳಾಗಿ ಮಾಡಿದ್ದಾಳೆ, ಮಕ್ಕಳು ಚೆನ್ನಾಗಿ ಓದುತ್ತಿದ್ದಾರೆ. ಹೆಂಗಸಿಗೂ ಗಂಡಸಿಗೂ ಒಂದೇ ಶಿಕ್ಷಣ ಕೊಟ್ಟರೆ ಅವಳು ತನ್ನ ವೈಶಿಷ್ಟ್ಯಗಳನ್ನು ಕಳೆದುಕೊಳ್ಳುವರು. ಅವಳು ದೇವತೆಯಾಗಬಲ್ಲಳು ಎಂದು ಹೇಳಿ ಲಿನ್‌ಯಾಟಾಂಗ್‌ನ ಬರಹಗಳನ್ನು ಉಲ್ಲೇಖಿಸಿ ಮಾತನಾಡುತ್ತಿದ್ದ ಬಗ್ಗೆ ಎಂ.ಆರ್.ಲಕ್ಷಮ್ಮನವರು ತಮ್ಮ ದಿನಚರಿಯಲ್ಲಿ ಉಲ್ಲೇಖಿಸಿದ್ದಾರೆ. ಸುನಂದಮ್ಮನವರು ಬರೇ ಓದಿನಿಂದ ಏನು ಬಂತು ಓದಿದ್ದನ್ನು ಮನನ ಮಾಡಿಕೊಂಡು ಅದರಿಂದ ಉತ್ಪನ್ನವಾಗುವ ಉದಾತ್ತಭಾವನೆಯನ್ನು ಅಳವಡಿಸಿಕೊಳ್ಳಬೇಕು. ಬರೀ ಓದುವುದರಿಂದ ಏನು ಪ್ರಯೋಜನವಿಲ್ಲ ಎಂಬುದಾಗಿ ಶಿಕ್ಷಣದ ಬಗೆಗಿನ ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದರೆಂದು ಎಂ.ಆರ್.ಲಕ್ಷಮ್ಮನವರು ಉಲ್ಲೇಖಿಸಿದ್ದಾರೆ.

ಮಹಾರಾಜರು ಜವಾಬ್ದಾರಿ ಸರ್ಕಾರ ತಮ್ಮ ಗುರಿಯಾಗಿದೆ. ನಿಪುಣರಾದ ದಿವಾನರ ಸಲಹೆ ದೊರೆತಿದೆ. ಕಾಲವಿಳಂಬ ಅನಿವಾರ್ಯವಾಗಿದ್ದು, ಈಗಿನ ಸಲಹಾ ಸಮಿತಿಯು ಅವಶ್ಯಕವೆಂದು ಕಂಡುಬರುವ ಪಂಗಡಗಳ ಸಮಿತಿಯೊಂದಿಗೆ ಸಮಾಲೋಚನೆ ನಡೆಸುತ್ತೇವೆ ಎಂದು ಘೋಷಿಸಿದ ಸುದ್ದಿ ತಿಳಿದು ಜೈಲಿನಲ್ಲಿದ್ದ ಎಂ.ಆರ್.ಲಕ್ಷಮ್ಮನವರ ಮತ್ತು ಸುನಂದಮ್ಮನವರ ಉತ್ಸಾಹ ಹೆಚ್ಚಿ ಸಂತೋಷಪಟ್ಟರು.

ಎಂ.ಆರ್.ಲಕ್ಷಮ್ಮನವರ ಪತಿಯವರ ಮೇಲಾಧಿಕಾರಿಯೊಬ್ಬರು ಅವರ ಮಕ್ಕಳನ್ನು ಕರೆತಂದು ಭೇಟಿ ಮಾಡಿಸಿದ್ದರಿಂದ ಸಂತೋಷಪಟ್ಟರು. ಎಂ.ಆರ್.ಲಕ್ಷಮ್ಮನವರು ತಮ್ಮ ಮಗಳು ಶಾಂತಿ ಜೈಲಿನ ಅಧಿಕಾರಿಯೊಂದಿಗೆ ಯಾವುದೇ ಭಯವಿಲ್ಲದೆ **'ನನ್ನನ್ನು ಈ ಜೈಲಿನಲ್ಲಿ ಕೂಡಿಹಾಕ್ತೀರಾ? ಹಾಕಿ ನನಗೇನು ಭಯವಿಲ್ಲ'** ಎಂಬ ದಿಟ್ಟ ಉತ್ತರ ನೀಡಿದ ಮಗಳ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ್ದಾರೆ.

ಜೈಲರ್‌ರವರ ಹತ್ತು ವರ್ಷದ ಮಗನ ಬಾಯಲ್ಲಿ **'ಭಾರತ ಮಾತಾಕೀ ಜೈ'** ಎನ್ನಿಸುವ ಪ್ರಯತ್ನವನ್ನು ಮಾಡಿದರು. ಗಂಟಲಿನಿಂದ ದನಿ ಹೊರಡಲಿಲ್ಲ ಎಂಬ ಮಾಹಿತಿಯನ್ನು ಉಲ್ಲೇಖಿಸಿದ್ದಾರೆ.

ದಿನಾಂಕ.10-9-1947 ರಂದು ಸುನಂದಮ್ಮನವರ ಮನೆಯಿಂದ ಗೋಕುಲಾಷ್ಟಮಿ ಪ್ರಯುಕ್ತ ತಿಂಡಿ ಬುಟ್ಟಿ ಮತ್ತು ಕಾಗದ ಬಂದಿತು. ಎಂ.ಆರ್.ಲಕ್ಷಮ್ಮನವರಿಗೆ ಮನೆ ಮತ್ತು ಮಕ್ಕಳ ನೆನಪಾಗುತ್ತದೆ. ಸುನಂದಮ್ಮನವರು ನನ್ನ ಮಕ್ಕಳನ್ನು ನೋಡಬೇಕು ಎಂದಾಗ ಯಾವ ಮಕ್ಕಳು ಎಂದು ಎಂ.ಆರ್.ಲಕ್ಷಮ್ಮನವರು ಕೇಳುತ್ತಾರೆ. ನೆರೆಮನೆಯ ಮಕ್ಕಳು ಇಬ್ಬರು ಹುಡುಗರು ಬೇರೆ ಜನಾಂಗಕ್ಕೆ ಸೇರಿದವರಾದರು ಧೈರ್ಯವಂತ ಮತ್ತು ತುಂಟ ಹುಡುಗರು ಅವರೇ ನನ್ನ ಮಕ್ಕಳು ಎಂದು ಸುನಂದಮ್ಮನವರು ಹೇಳುತ್ತಾರೆ.

ದಿನಾಂಕ.11-9-1947 ರಂದು ಚಂಗಲರಾಯರೆಡ್ಡಿಯವರನ್ನು ಚಿಕ್ಕಮಗಳೂರು ಸೆರೆಮನೆಗೆ ಭಾಷ್ಯಂರನ್ನು ಹಾಸನ ಸೆರೆಮನೆಗೆ ವರ್ಗಾಯಿಸಿದರಂತೆ ಎಂಬ ಸುದ್ದಿ ತಲುಪಿತು. ರಾಜ್ಯಾಂಗ ಸಲಹಾ ಸಮಿತಿಯ ಶಿಫಾರಸ್ಸುಗಳನ್ನು ಪಕ್ಕದ ಬ್ಯಾರಕ್‌ನಲ್ಲಿದ್ದ ಯುವಕರು ಚರ್ಚಿಸುತ್ತಿದ್ದು ತಾತ್ಕಾಲಿಕ ಮಂತ್ರಿಮಂಡಲ ಏರ್ಪಾಡಾಗಬೇಕು ಎಂದು ತೀರ್ಮಾನಿಸುತ್ತಿದ್ದಾಗ ಕೆಲವು ಯುವಕರು **'ಇಂದು ಜವಾಬ್ದಾರಿ ಸರ್ಕಾರದ ಹೋರಾಟ ನಡೆಯುತ್ತಿದೆ. ನಾಳೆ ಕಾಂಗ್ರೆಸ್ ಮಂತ್ರಿಮಂಡಲ ಬಂದರೂ ಒಂದಲ್ಲ ಒಂದು ಕಾರಣಕ್ಕೆ ಸಮರ ಪ್ರಾರಂಭವಾಗುತ್ತದೆ. ಹೊಟ್ಟೆಬಟ್ಟೆಗಿಲ್ಲದವರೂ ದಂಗೆ ಹೂಡುತ್ತಾರೆ. ಮಾನವನ ಕತೆಯೇ ಹೀಗೆ'** ಎಂದು ಚರ್ಚಿಸುತ್ತಾರೆ. ಎಂ.ಆರ್.ಲಕ್ಷಮ್ಮನವರು ಇಂದು ಸ್ವಾತಂತ್ರ್ಯಕ್ಕೆ ಹೋರಾಡುವವರು ನಾಳೆ ಮೂಲಭೂತ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಾರೆ ಎಂಬುದನ್ನು ಉಲ್ಲೇಖಿಸುತ್ತಾರೆ. ಕರ್ಫ್ಯೂ ಆದೇಶ ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ಇದ್ದು ಒಂದು ವಾರದಿಂದ ಊರು ಸ್ಮಶಾನದಂತೆ ಮೌನವಾಗಿದೆ ಎಂಬ ಮಾತನ್ನು ಜೈಲಿನ ಅಧಿಕಾರಿಯವರು ಎಂ.ಆರ್.ಲಕ್ಷಮ್ಮನವರೊಡನೆ ಹಂಚಿಕೊಳ್ಳುತ್ತಾರೆ.

ದಿನಾಂಕ.12–9–1947 ರಂದು ತಮ್ಮ ದಿನಚರಿಯಲ್ಲಿ ಸಮಾಜದಲ್ಲಿ ಹೆಣ್ಣುಮಕ್ಕಳ ಬಗ್ಗೆ ಇರುವ ಭಾವನೆಯನ್ನು ದಾಖಲಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಪಕ್ಷದ ನಾಯಕತ್ವವನ್ನು ಯಾರು ವಹಿಸಬೇಕೆಂಬ ಪ್ರಶ್ನೆ ಬಂದಾಗ ರೆಡ್ಡಿಯವರ ಹೆಸರನ್ನು ಎಂ.ಆರ್.ಲಕ್ಷಮ್ಮನವರು ಅನುಮೋದಿಸಿದರು.

ಇದರಿಂದ ಹಿರಿಯ ಕಾಂಗ್ರೆಸ್ಸಿಗರಿಗೆ ಅಸಮಾಧಾನವಾಗಿ ಈ ದಿನ ಬಂದ ಈ ಹೆಂಗಸಿಗೆಷ್ಟು ಪ್ರತಾಪ ಎಂದು ಅವರು ಹೇಳುತ್ತಿದ್ದರು ಎಂಬ ಮಾತನ್ನು ಸುನಂದಮ್ಮನವರು ಹೇಳಿದಾಗ ಎಂ.ಆರ್.ಲಕ್ಷಮ್ಮನವರು ನಾನೆಷ್ಟೋ ಕಲಿಯಬೇಕಿದೆ ಎಂದು ಯೋಚಿಸುತ್ತಾರೆ. ಅಂದು ಇಬ್ಬರು ಮಹಿಳೆಯರು ಜೈಲಿಗೆ ಬಂದರು. ಅವರಲ್ಲೊಬ್ಬರು ಮುಸ್ಲಿಂ ಮಹಿಳೆ ಮಾತನಾಡುತ್ತಾ ನಮ್ಮ ಗಂಡಂದಿರು ಕೂಡ ಚಳುವಳಿಯಲ್ಲಿ ಭಾಗವಹಿಸಿದ್ದಾರೆ ನಮ್ಮದೇನು? ನಾವು ಬಂದೆವು. ಹನ್ನೆರಡು ವರ್ಷ ವಯಸ್ಸಿನ ಹುಡುಗರೆಲ್ಲ ಚಳುವಳಿಯಲ್ಲಿ ಭಾಗವಹಿಸಿದ್ದಾರೆ. ಅವರ ಧೈರ್ಯ ನೋಡಿ ನಾನು ಹೋಗ್ತಿನಿ ಎಂದಾಗ ನಮ್ಮ ತಾಯಿಯವರು ಗಂಡ ಮನೆ ಮಕ್ಕಳೊಂದಿಗೆ ಯಾವಾಗಲೂ ಇರುವುದು ಇದ್ದೇ ಇರುತ್ತದೆ. ಹೋಗಿ ಚಳುವಳಿಯಲ್ಲಿ ಭಾಗವಹಿಸು ಎಂದು ಆಶೀರ್ವಾದ ಮಾಡಿ ಕಳುಹಿಸಿದರು. ಅದಕ್ಕೆ ಬಂದೆ ಎಂಬ ಮಾತನ್ನು ಹೇಳಿದರು.

ಇದು ನನ್ನ ಜೀವನದಲ್ಲಿ ಏನಾದರು ವಿಶೇಷವಾಗಿ ಸಾಧನೆ ಮಾಡಬೇಕೆಂಬ ಚಿಂತನೆಯಾಗಿದ್ದು ಎಂ.ಆರ್.ಲಕ್ಷಮ್ಮನವರು ಆಕೆಯ ಮಾತನ್ನು ಉಲ್ಲೇಖಿಸಿದ್ದಾರೆ. ಜೈಲಿನಲ್ಲಿ ಮತ್ತು ಚಳುವಳಿಯಲ್ಲಿ ಜಾತ್ಯಾತೀತ ಮನೋಭಾವವಿದ್ದು, ಎಲ್ಲರೂ ಒಟ್ಟಿಗೆ ಭಾಗವಹಿಸುತ್ತಿದ್ದಾರೆ ಎಂಬ ನಿಲುವನ್ನು ಲಕ್ಷಮ್ಮನವರು ದಾಖಲಿಸಿದ್ದಾರೆ. ಎಂ.ಆರ್.ಲಕ್ಷಮ್ಮನವರು ಸೆರೆಮನೆಗೆ ಬಂದ ಮಹಿಳೆಯರಿಗೆ **'ನಾಳೆ ಮಹಿಳೆಯರು ತಮ್ಮ ಹಕ್ಕುಗಳಿಗೋಸ್ಕರ ಜಾಥಾ ಹೋರಾಟ ಮಾಡಬೇಕಾಗಬಹುದು. ಆಗ ನಿಮ್ಮ ಗಂಡಂದಿರೇ ನಿಮ್ಮನ್ನು ತಡೆಯಬಹುದು, ಬರ್ತೀರಾ?'** ಎಂಬ ಪ್ರಶ್ನೆಯನ್ನು ಕೇಳಿದಾಗ ಅವರು ಬರ್ತೀವಿ ಎಂದು ಉತ್ತರ ನೀಡುತ್ತಾರೆ. ಸೆರೆಮನೆಯಲ್ಲಿಯೂ ಎಂ.ಆರ್.ಲಕ್ಷಮ್ಮನವರು ಮಹಿಳೆಯರ ಬಗ್ಗೆ ಆಲೋಚಿಸುತ್ತಾರೆ ಎಂದು ಈ ಹೇಳಿಕೆಗಳಿಂದ ನಮಗೆ ತಿಳಿಯುತ್ತದೆ.[22]

ದಿನಾಂಕ.13–9–47 ರಂದು ಸೆರೆಮನೆಯ ಅಧಿಕಾರಿ ಅಮೀರಾಲಿಯವರು ತಮ್ಮ ಸೇವಾ ಅವಧಿಯಲ್ಲಿ ನಡೆದ ಹಿಂದಿನ ಅನುಭವಗಳನ್ನು ಹಂಚಿಕೊಳ್ಳುತ್ತಾ, ಸೆರೆಮನೆಯ ಹೊರಗೆ ಕರ್ಫ್ಯೂ ಇರುವುದರಿಂದ ಯಾವುದೇ ವಸ್ತುಗಳು ದೊರಕುತ್ತಿಲ್ಲ. ಸ್ಮಶಾನದ ರೀತಿ ಇದೆ. ಹೊರಗೆ ಒಂದು ಜೈಲಾಗಿದೆ ಎನ್ನುತ್ತಾರೆ. ಎಂ.ಆರ್.ಲಕ್ಷಮ್ಮನವರ ಪತಿಯವರು ತಮ್ಮ ಪತ್ನಿಯನ್ನು ಭೇಟಿ ಮಾಡಲು ಸೆರೆಮನೆಗೆ ಬಂದಂತಹ ಭಾವುಕ ಕ್ಷಣಗಳ ಬಗ್ಗೆ ದಾಖಲಿಸುತ್ತಾರೆ.

ಎಲ್ಲಾ ಭಾವನೆಗಳನ್ನು ಅಡಗಿಸಿಟ್ಟುಕೊಂಡ ಪತಿಯವರು ಮೈಸೂರಿನಲ್ಲಿರುವ ನಾಲ್ಕು ಮಕ್ಕಳ ಬಗ್ಗೆ ಹೇಳಿ ಧಾರಾವಾಡದಲ್ಲಿ ಓದುತ್ತಿರುವ ಹಿರಿಯ ಮಗನಿಂದ ಯಾವುದೇ ಪತ್ರ ಬಂದಿಲ್ಲವೆಂದು ತಿಳಿಸಿದಾಗ ಮಗನನ್ನು ನೆನಸಿಕೊಂಡ ಲಕ್ಷಮ್ಮನವರು ಮನಸ್ಸಿನಲ್ಲಿ ಉಂಟಾದ ಭಾವನೆಗಳನ್ನು ಮುಚ್ಚಿಟ್ಟು ಕರ್ತವ್ಯದ ಕರೆಗೆ ಓಗೊಟ್ಟರೆಂದು ಅನಿಸುತ್ತದೆ.

ದಿನಾಂಕ.14–09–1947 ರಂದು ಚಳುವಳಿಯ ತೀವ್ರತೆ ಹೆಚ್ಚಿತು. ಕರ್ಫ್ಯೂ ಜಾರಿಯಲ್ಲಿದ್ದು ಚಳಿವಳಿಯಲ್ಲಿ ಭಾಗವಹಿಸಿದವರ ದಸ್ತಗಿರಿ ನಡೆಯುತ್ತಿದ್ದು, ಅವರಲ್ಲಿ ಕಾವೇರಿಬಾಯಿ, ಸರಸ್ವತಿ, ಭಾಗೀರತಿಬಾಯಿ, ಧರ್ಮಾಂಬಾ ಎಂಬುವರು ಸೆರೆಮನೆಗೆ ಬಂದರು. ಎಲ್ಲರೂ ಸೇರಿ ಭಜನೆ ಸ್ತೋತ್ರ ಹಾಡುತ್ತಾ, ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದರು. ಹೊರಗಿನಿಂದ ಹುಡುಗರ ಜೈಕಾರ ಕೇಳಿಸಿದ್ದು, ಮಹಿಳಾ ಬ್ಯಾರಕಿನಲ್ಲಿದ್ದ ಮಹಿಳೆಯರು ಜೈಕಾರ ಹಾಕಿದರು. ಮಹಿಳೆಯರು ತಮ್ಮ ಕಷ್ಟ ಕಾರ್ಪಣ್ಯಗಳ ಬಗ್ಗೆ ಮಾತನಾಡಿಕೊಳ್ಳುವುದರ ಜೊತೆಗೆ ಚಳುವಳಿಯ ಬಗ್ಗೆ ಒಬ್ಬ ಪ್ರಸಿದ್ಧ ಸಾಹಿತಿ ತೋರಿದ ಅನಾದರ ಬಗ್ಗೆ ಲಕ್ಷಮ್ಮನವರು ದಾಖಲಿಸಿದ್ದಾರೆ. ಮರಿಯಪ್ಪನವರು ಬಂದು ಮಹಿಳಾ ಸತ್ಯಾಗ್ರಹಿಗಳಿಗೆ ಧೈರ್ಯ ಹೇಳಿ ಹೋದರು. ಕಾವೇರಿಬಾಯಿಯವರು ಜೈಲಿನಲ್ಲಿ ಕೂಡ ಶಿಸ್ತಾಗಿ ಇರುವ ಬಗ್ಗೆ, ಮತ್ತೊಬ್ಬ ಸತ್ಯಾಗ್ರಹಿ ಸುಬ್ಬಮ್ಮ ಜೋಯಿಸರ ಆಗಮನದ ಬಗ್ಗೆ ಮಾಹಿತಿಗಳನ್ನು ದಾಖಲಿಸಿದ್ದಾರೆ.

ದಿನಾಂಕ.15–09–1947ರಂದು ನಿಜಲಿಂಗಪ್ಪರವರನ್ನು ಬಂಧಿಸಿ, ಬೆಂಗಳೂರಿಗೆ ಒಯ್ದರೆಂದು ಹೈದರಾಬಾದಿನಲ್ಲಿ ನಡೆಯುತ್ತಿರುವ ಹಿಂಸಾಚಾರಕ್ಕಿಂತ ಹೆಚ್ಚಿನ ಹಿಂಸಾಚಾರ ಮೈಸೂರಿನಲ್ಲಿ ನಡೆಯುತ್ತಿದೆ ಎಂದು ಮರಿಯಪ್ಪನವರು ಮತ್ತು ನ.ಭದ್ರಯ್ಯನವರು ಭೇಟಿ ಮಾಡಿದಾಗ ನೊಂದುಕೊಂಡರು. ಅಗ್ಗದ ಪ್ರಚಾರಕ್ಕಾಗಿ ಸತ್ಯಾಗ್ರಹ ಮಾಡುವ ಬಗ್ಗೆ, ಹೆಣ್ಣು ಮಕ್ಕಳು ಮರ್ಯಾದೆಗೆ ಅಂಜಿಕೊಳ್ಳುವುದರ ಬಗ್ಗೆ, ಸತ್ಯಾಗ್ರಹದಲ್ಲಿ ಹೆಣ್ಣು ಮಕ್ಕಳಿಗೆ ಮಾನಭಂಗವಾಗುವಂತಹ ಪರಿಸ್ಥಿತಿ ಬಂದರೆ ಏನು ಮಾಡಬೇಕು? ಸ್ತ್ರೀ ಜನ್ಮ ಕೆಟ್ಟದ್ದು ಎಂದರೆ, ಕೆಲವರು ಸ್ತ್ರೀಜನ್ಮ ಪವಿತ್ರವಾದದ್ದು. ದೇಶಕೋಸ್ಕರ ಮಾನ ಹೋದರು ಚಿಂತೆ ಇಲ್ಲ ಎನ್ನುವವರು ಕೆಲವರು, ಮುಂತಾದ ವಿಷಯಗಳ ಬಗ್ಗೆ ಸೆರಮನೆಯಲ್ಲಿ ಚರ್ಚಿತವಾದ ಮಾತುಕತೆಗಳನ್ನು ಲಕ್ಷಮ್ಮನವರು ದಾಖಲಿಸಿದ್ದಾರೆ.

ದಿನಾಂಕ.16–9–1947 ರಂದು ಹಿರಿಮಗನ ಬಗ್ಗೆ ಯೋಚಿಸಿದ ಎಂ.ಆರ್.ಲಕ್ಷಮ್ಮನವರು ಮೈಸೂರಿನಲ್ಲಿ ಮಳೆಯ ನಡುವೆಯೇ ಸತ್ಯಾಗ್ರಹಿಗಳು ಮಾಡುತ್ತಿರುವ ಹೋರಾಟದ ಬಗ್ಗೆ, ತುಮಕೂರಿನಲ್ಲಿ ನಡೆಯುತ್ತಿರುವ ಚಳುವಳಿ, ಹೈದರಾಬಾದ್‌ನಲ್ಲಿನ ಘೋರ ಪರಿಸ್ಥಿತಿ ಮತ್ತು ಭಾರತದ ತ್ರಿವರ್ಣ ಧ್ವಜ ಹೊಲಿದ ದರ್ಜಿಗೆ ಚಿತ್ರಹಿಂಸೆ ನೀಡುತ್ತಿರುವ ಬಗ್ಗೆ ಮಾಹಿತಿಯನ್ನು ದಾಖಲಿಸಿದ್ದಾರೆ. ಕಲ್ಕತ್ತಾದ ಬ್ಲಾಕ್ ಹೋಲ್‌ನ ಘಟನೆ ಪುನರಾವರ್ತನೆಯಾದಂತೆ ಇಲ್ಲಿ ನಡೆಯುತ್ತಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ದಿನಾಂಕ.16-9-47 ರಂದು ಜೈಲಿನ ಅಧಿಕಾರಿ ಅಮೀರಾಲಿಯವರು ಬಂದು ಎಂ.ಆರ್.ಲಕ್ಷಮ್ಮನವರನ್ನು ಮತ್ತು ಸುನಂದಮ್ಮನವರನ್ನು ಬೆಂಗಳೂರಿನ ಕಾರಾಗೃಹಕ್ಕೆ ವರ್ಗಾಯಿಸಲಾಗಿದೆ ಎಂದು ತಿಳಿಸಿದಾಗ ತಮ್ಮ ವಸ್ತುಗಳನ್ನೆಲ್ಲಾ ಸಿದ್ದಪಡಿಸಿಕೊಂಡು ಹೊರಡಲು ಸಿದ್ದರಾದರು. ಮೈಸೂರಿನ ಮನೆಯಿಂದ, ಮಕ್ಕಳಿಂದ ಮತ್ತಷ್ಟು ದೂರ ಹೋಗುವುದರ ಬಗ್ಗೆ ಬೇಸರವಾದರೂ ಅಖಾಡಕ್ಕೆ ಇಳಿದ ನಂತರ ಎಲ್ಲವನ್ನು ಅನುಭವಿಸಲೇಬೇಕೆಂಬ ಗಟ್ಟಿ ನಿರ್ಧಾರವನ್ನು ಮಾಡಿಕೊಂಡ ಎಂ.ಆರ್.ಲಕ್ಷಮ್ಮನವರು ಬೆಂಗಳೂರಿನ ಕೇಂದ್ರ ಕಾರಾಗೃಹಕ್ಕೆ ಬಂದಿಳಿದರು.

ಎಂ.ಆರ್.ಲಕ್ಷಮ್ಮನವರು ಬೆಂಗಳೂರಿನ ಕಾರಾಗೃಹದ ಬಗ್ಗೆ ತಮ್ಮ ದಿನಚರಿಯಲ್ಲಿ ಹೇಳಿಕೊಂಡಿದ್ದಾರೆ. ಮೈಸೂರು ಜೈಲು ಚಿಕ್ಕ ಸ್ಥಳವಾಗಿದ್ದು, ಅಕ್ಕ ಪಕ್ಕದಲ್ಲೇ ಪುರುಷರ ಬ್ಯಾರಕ್ ಇದ್ದು, ಅವರ ಮಾತುಕಥೆಗಳು ಭಜನೆಗಳು ಕೇಳಿ ಬರುತ್ತಿತ್ತು. ಇಲ್ಲಿ ತೊಂದರೆಗಳಾದಲ್ಲಿ ಮರಿಯಪ್ಪನವರು ಮತ್ತಿತರ ಕಾಂಗ್ರೆಸ್ ಮುಖಂಡರು ಬಂದು ಬಗೆಹರಿಸುತ್ತಿದ್ದರು. ಆದರೆ ಬೆಂಗಳೂರು ಸೆರೆಮನೆ ವಿಸ್ತಾರವಾಗಿದ್ದು, ಅಪರಾಧಿಗಳಿಂದ ತುಂಬಿದ್ದು, ಅಸಹನೀಯವಾದ ಊಟದ ವ್ಯವಸ್ಥೆ ಇತ್ತು. ಮೈಸೂರಿನಲ್ಲಿದ್ದ ಸಹೃದಯಿ ಅಧಿಕಾರಿಗಳು ಇರಲಿಲ್ಲ. ಎಂ.ಆರ್.ಲಕ್ಷಮ್ಮನವರು ಇಲ್ಲಿಯೂ ಕೂಡ ಪಠಣ, ಮನನ, ಭಜನೆ ಪ್ರಾರ್ಥನೆಗಳಲ್ಲಿ ಕಾಲಕಳೆದರು. ಮಲೆನಾಡಿನಲ್ಲಿ ಚಳುವಳಿ ಮಾಡಿದ ಅನೇಕ ಮುಖಂಡರನ್ನು ಬೆಂಗಳೂರಿಗೆ ಕರೆತಂದರು. ಅವರಲ್ಲಿ ಅನೇಕ ಮಹಿಳೆಯರು ಇದ್ದರು. ರತ್ನಮ್ಮ ಮಾಧವರಾವ್ ಎನ್ನುವ ಕಾಂಗ್ರೆಸ್ ಮುಖಂಡೆ ಸಣ್ಣ ಮಗುವನ್ನೆತ್ತಿಕೊಂಡು ಬಂದಿದ್ದು, ಮಹಿಳೆಯರ ಬ್ಯಾರಕಿನಲ್ಲಿ ಹೊಸ ಜೀವ ಬಂದಿದ್ದನ್ನು ಕಂಡು ಎಲ್ಲರೂ ಸಂಭ್ರಮಿಸಿ ಅಲ್ಲಿಯೇ ಹಗ್ಗದಲ್ಲಿ ಒಂದು ತೊಟ್ಟಿಲನ್ನು ಕಟ್ಟಿ ಪೂಜೆ ಮಾಡಿ ಹಾಡನ್ನು ಹಾಡಿ ಸಂಭ್ರಮಪಟ್ಟರು.

ಮಲೆನಾಡಿನಿಂದ ಬಂದ ಮಹಿಳೆಯರು ರಾಜಕೀಯ ಖೈದಿಗಳಾಗಿರದೆ ಕೋರ್ಟಿನಲ್ಲಿ ಶಿಕ್ಷಿತರಾಗಿ ಬಂದ ಅಪರಾಧಿಗಳಾಗಿದ್ದರು. ಗಣೇಶ ಚತುರ್ಥಿಯ ಹಬ್ಬದ ಪ್ರಯುಕ್ತ ಸೆರೆಮನೆ ಅಧಿಕಾರಿಗಳು ಪೂಜಾ ಸಾಮಾಗ್ರಿಗಳನ್ನು ಹಾಗೂ ಸಣ್ಣ ಗೌರಿ ಗಣೇಶನನ್ನು ತಂದು ಕೊಟ್ಟರು. ಇರುವಂತಹ ಸಾಮಾಗ್ರಿಗಳಲ್ಲಿಯೇ ಎಲ್ಲ ಮಹಿಳೆಯರು ಸೇರಿಕೊಂಡು ಪೂಜಾ ಕಾರ್ಯವನ್ನು ನೆರವೇರಿಸಿದರು. ರಾತ್ರಿ ಹಬ್ಬದೂಟ ಮಾಡುವಾಗ ಹೊರಗಡೆ ನಮ್ಮ ಮಕ್ಕಳು ಎಷ್ಟು ಕಷ್ಟ ಪಡುತ್ತಿರುವರೊ, ಚಳುವಳಿಗಾರರೆಷ್ಟು ಕಷ್ಟಪಡುತ್ತಿರುವರೊ, ನಾವು ಮಾತ್ರ ಹಬ್ಬದೂಟ ಮಾಡುತ್ತಿದ್ದೆವೆಂಬ ಚಿಂತೆಯಲ್ಲಿ ಕಾಲಕಳೆದರು.

ಮಹಾರಾಜರು ರಾಜ್ಯದಲ್ಲಿ ನಡೆಯುತ್ತಿರುವ ಹಿಂಸಾಚಾರಗಳಿಂದಾಗಿ ಊಟಿಗೆ ಹೋಗಿದ್ದಾರೆ. ಉತ್ತಮ ಭಾಷಣಗಾರ್ತಿ ಮತ್ತು ಸಂಘಟನಾಗಾರ್ತಿಯಾಗಿದ್ದ

ರತ್ನಮ್ಮ ಮಾಧವರಾವ್ ಬಗ್ಗೆ ತಿಳಿದ ಎಂ.ಆರ್.ಲಕ್ಷಮ್ಮನವರು ಜೈಲಿನಿಂದ ಹೊರಬಂದ ಮೇಲೆ ಮಹಿಳೆಯರ ಉದ್ದಾರಕ್ಕಾಗಿ ನಿಮ್ಮ ಶ್ರಮವನ್ನು ಮೀಸಲಿಡಿ. ಹೆಣ್ಣುಮಕ್ಕಳ ಸಲುವಾಗಿ ಪ್ರತ್ಯೇಕ ನಿಧಿ ಕೂಡಿಸಿ ಹೆಣ್ಣುಮಕ್ಕಳು ಪುರಸಭೆಗೆ ಶಾಸನಸಭೆಗೆ ಪ್ರತಿನಿಧಿಗಳನ್ನು ನಿಲ್ಲಿಸುವ ಕಾಲ ಬರಬೇಕು ಎಂದು ಹೇಳುತ್ತಾ ಮಹಿಳೆಯರ ಉದ್ಧಾರದ ಬಗ್ಗೆ, ಮಹಿಳೆಯರು ಸಮಾಜದ ಎಲ್ಲಾ ರಂಗಗಳಲ್ಲೂ ಮುಂದೆ ಬರಬೇಕೆಂಬ ಹಂಬಲವನ್ನು ವ್ಯಕ್ತಪಡಿಸಿದ್ದಾರೆ.

ಎಂ.ಆರ್.ಲಕ್ಷಮ್ಮನವರು ತಮ್ಮ ಜೊತೆಯಲ್ಲಿರುವ ಜಾನಕಮ್ಮನವರು 1942ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿಯ ಬಗ್ಗೆ ತಮ್ಮ ಅನುಭವಗಳನ್ನು ಹಂಚಿಕೊಂಡ ಬಗ್ಗೆ ದಿನಚರಿಯಲ್ಲಿ ದಾಖಲಿಸಿದ್ದು, ಪುಣ್ಯ ಬರಲಿ ಎಂದು ದೇವಾಲಯ ಕಟ್ಟಿಸಿದ ವರ್ತಕರೊಬ್ಬರು ಸತ್ಯಾಗ್ರಹಿಗಳಿಗೆ ಹಿಂಸೆ ಮಾಡಿದ್ದನ್ನು ಕಂಡು ಜೀವಂತ ಮನುಷ್ಯರಿಗೆ ಹಿಂಸೆ ಮಾಡುವ ವ್ಯಕ್ತಿ ಕಲ್ಲಿಗೆ ಪೂಜೆ ಮಾಡಿದರೇನು ಫಲ ಎಂಬ ತಾತ್ವಿಕ ದರ್ಶನವನ್ನು ವ್ಯಕ್ತಪಡಿಸಿದ್ದಾರೆ. ಮಹಿಳಾ ಬ್ಯಾರಕನ್ನು ಕಾಯುವ ಮೇಟ್ರನ್ ಬಗ್ಗೆ ಅವರ ಕ್ರೂರ ವ್ಯಕ್ತಿತ್ವದ ಬಗ್ಗೆ ತಮ್ಮ ದಿನಚರಿಯಲ್ಲಿ ದಾಖಲಿಸಿದ್ದಾರೆ. ಸತ್ಯಾಗ್ರಹಿಗಳು ತಮ್ಮ ಬಳಿ ಇಟ್ಟುಕೊಂಡು ನೂಲುತ್ತಿದ್ದ ಚರಕವನ್ನು ತೆಗೆದು ಬಚ್ಚಿಟ್ಟ ಮೇಟ್ರನ್ ಆ ವಿಷಯವನ್ನು ಸೆರೆಮನೆಯ ಮೇಲಾಧಿಕಾರಿಗೆ ತಿಳಿಸಿ, ಚರಕವನ್ನು ಮರಳಿ ಪಡೆದ ಬಗ್ಗೆ, ಅನೇಕ ಯುವತಿಯರು 1942ರ ಚಳುವಳಿಯ ಅನುಭವವನ್ನು ಹಂಚಿಕೊಂಡ ಬಗ್ಗೆ ತಮ್ಮ ದಿನಚರಿಯಲ್ಲಿ ನಿರೂಪಿಸಿದ್ದಾರೆ.

ದಿನಾಂಕ 20-9-1947 ರಂದು ಮಹಿಳಾ ಖೈದಿಗಳ ಬ್ಯಾರಕಿನಲ್ಲಿ ಎಂದಿನಂತೆ ಭಜನೆ ಆದ ನಂತರ ಸುನಂದಮ್ಮನವರು ಕಾಂಗ್ರೆಸ್ ಪಕ್ಷ ಶಾಸನಸಭೆಯ ಚುನಾವಣೆಯಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡುತ್ತಿಲ್ಲ ಇದರ ಬಗ್ಗೆ ಒತ್ತಾಯಿಸುವಂತೆ ಕಾಂಗ್ರೆಸ್ ಮುಖಂಡರ ಪತ್ನಿಯಾದ ರತ್ನಮ್ಮನವರಿಗೆ ಹೇಳಿದರು. 1942ರಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ, ರತ್ನಮ್ಮ ಎಲ್ಲರೂ ಒಟ್ಟಾಗಿ ಸೆರೆಮನೆಯಲ್ಲಿದ್ದ ಬಗ್ಗೆ ತಮ್ಮ ದಿನಚರಿಯಲ್ಲಿ ಎಂ.ಆರ್.ಲಕ್ಷಮ್ಮನವರು ಹೇಳಿದ್ದಾರೆ.[23]

ದಿನಾಂಕ 22-9-47 ರಂದು ಸುನಂದಮ್ಮನವರಿಗೆ ಅನಾರೋಗ್ಯ ನಿಮಿತ್ತ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯುವ ಬಗ್ಗೆ, ಜಾನಕಮ್ಮನವರು ಖೈದಿಗಳಿಗೆ ಹಿಂದಿ ಭಾಷೆ ಕಲಿಸುವ ಬಗ್ಗೆ, ಜೈಲನ್ನು ಸ್ವಚ್ಛಗೊಳಿಸುವ ಚೆನ್ನಿಯ ಪರಿಸ್ಥಿತಿಯ ಬಗ್ಗೆ ತಮ್ಮ ದಿನಚರಿಯಲ್ಲಿ ಉಲ್ಲೇಖಿಸಿದ್ದಾರೆ.

ದಿನಾಂಕ23-9-47 ರಂದು ಬಿ.ಜಿ.ಅಪ್ಪುದೊರೆ ಮೊದಲಿಯಾರ್ ಅವರು ಜೈಲಿಗೆ ಬಂದು ಭೇಟಿ ಮಾಡಿದರು. ಜೈಲಿನ ಅಧಿಕಾರಿಯೊಬ್ಬರು ಅವರೊಡನೆ ನಿಮ್ಮ ನಾಯಕರು ಸಣ್ಣ ವಯಸ್ಸಿನ ಬಾಲಕರನ್ನು ಮುಂದೆ ಬಿಟ್ಟು ಚಳುವಳಿ ನಡೆಸುತ್ತಿದ್ದಾರೆ.

ಅವರು ವಿಧ್ವಂಸಕ ಕೃತ್ಯಗಳನ್ನು ನಡೆಸುತ್ತಿದ್ದಾರೆ. ಅವರು ಚಳುವಳಿ ನಡೆಸದೆ ದಿವಾನರಾದ ಆರ್ಕಾಟ್‌ರ ವಿರುದ್ಧ ಚಳುವಳಿ ಮಾಡುತ್ತಿದ್ದಾರೆ. ಚಳುವಳಿ ಸತ್ತಿದೆ ಎಂಬುದಾಗಿ ಹೇಳುತ್ತಾರೆ.

ದಿನಾಂಕ.24–9–47 ರಂದು ತಮ್ಮ ದಿನಚರಿಯಲ್ಲಿ ಕೆಲವು ಸತ್ಯಾಗ್ರಹಿಗಳು ಅಗ್ಗದ ಪ್ರಚಾರಕ್ಕಾಗಿ ಚಳುವಳಿ ಮಾಡುತ್ತಾರೆಂಬುದರ ಬಗ್ಗೆ ಉಲ್ಲೇಖಿಸಿದ್ದಾರೆ. ಚಂಗಲರಾಯರೆಡ್ಡಿಯವರ ಧರ್ಮಪತ್ನಿ ಸರೋಜಮ್ಮ ಮತ್ತು ಸುಬ್ಬಮ್ಮ ಜೋಯಿಸರನ್ನು ಹಿಂಸಿಸಿದ್ದಾರೆ ಮತ್ತು ಅನೇಕ ಸತ್ಯಾಗ್ರಹಿಗಳನ್ನು ಬೇರೆ ಕಡೆಗೆ ಸ್ಥಳಾಂತರ ಮಾಡಿದ್ದಾರೆಂಬ ಸುದ್ಧಿ ಹರಡುತ್ತಿರುವುದರ ಬಗ್ಗೆ ದಾಖಲಿಸಿದ್ದಾರೆ. 26–9–1947ರ ದಿನಚರಿಯಲ್ಲಿ ಸುನಂದಮ್ಮನವರ ಹೃದಯ ವೈಶಾಲ್ಯತೆ ಮತ್ತು ಒಳ್ಳೆಯತನದ ಬಗ್ಗೆ ದಾಖಲಿಸಿದ್ದಾರೆ. ಸುನಂದಮ್ಮನವರು ನೇರ ದಿಟ್ಟ ನುಡಿಯನ್ನು ನುಡಿಯವವರು, ಹಾಗೆಯೇ ತಪ್ಪು ಮಾಡಿದಾಗ ತಪ್ಪೋಪ್ಪಿಗೆಯನ್ನು ಕೇಳುವ ಗುಣದ ಬಗ್ಗೆ ಲಕ್ಷ್ಮಮ್ಮನವರು ಪ್ರಶಂಸಿದ್ದಾರೆ. ಸಂಜೆ ಬನಪ್ಪ ಪಾರ್ಕಿನಲ್ಲಿ ಸಭೆ ಸೇರಿದ್ದು, ಸರ್ಕಾರದ ಪರ ಮಾತನಾಡಿದ ಇಬ್ಬರನ್ನು ನೆರೆದಿದ್ದ ಜನಗಳೇ ಘಾಸಿಗೊಳಿಸಿದ ಬಗ್ಗೆ ದಾಖಲಿಸಿದ್ದಾರೆ.

ದಿನಾಂಕ.27–9–1947ರಂದು ನಾಲ್ವರು ವಿದ್ಯಾರ್ಥಿನಿಯರು ಚಳುವಳಿಯಲ್ಲಿ ಭಾಗವಹಿಸಿ ದಸ್ತಗಿರಿಯಾಗಿ ಜೈಲಿಗೆ ಬಂದ ಘಟನೆಯನ್ನು ನಿರೂಪಿಸಿದ್ದಾರೆ. ಹೈಸ್ಕೂಲ್ ಇಂಟರ್ ಮೀಡಿಯೇಟ್ ಓದುವ ಹೆಣ್ಣು ಮಕ್ಕಳು ಕೂಡ ಚಳುವಳಿಯಲ್ಲಿ ಭಾಗವಹಿಸಿದ್ದರ ಬಗ್ಗೆ ಮಾಹಿತಿ ನೀಡುತ್ತಾರೆ. ಸುನಂದಮ್ಮನವರಿಗೆ ಬಿಡುಗಡೆಯಾಯಿತು. ಲಕ್ಷ್ಮಮ್ಮನವರು ತಮ್ಮ ಆತ್ಮೀಯ ಗೆಳತಿಯ ಅಗಲಿಕೆಯಿಂದ ಬೇಸರಗೊಂಡರು. ದಿನಾಂಕ 30–9–1947ರಂದು ಪ್ರಕೃತಿಯ ವರ್ಣನೆ ಮಾಡಿದ ಲಕ್ಷಮ್ಮನವರು ಶುಭ್ರ ಆಕಾಶದಂತೆ ಮನಸ್ಸು ಕೂಡ ಉಲ್ಲಾಸಕರವಾಗಿದೆ ಎಂದು ದಾಖಲಿಸುತ್ತಾರೆ.

ದಿನಾಂಕ.1–10–1947 ರಂದು ಲಕ್ಷಮ್ಮನವರು ಬಿಡುಗಡೆಯಾಗುವ ಬಗ್ಗೆ ಆಶಾಭಾವನೆ ಇಟ್ಟುಕೊಂಡಿದ್ದು, ರಾಜಕೀಯ ಖೈದಿಗಳನ್ನು ಪೋಷಿಸುವುದು ಸರ್ಕಾರಕ್ಕೆ ಹೊರೆಯಾಗುವುದರ ಬಗ್ಗೆ ಹೇಳಿರುವ ಲಕ್ಷ್ಮಮ್ಮನವರು, ದಸರಾ ಹಬ್ಬ ಬರುತ್ತಿದ್ದು ರಾಜ್ಯದಲ್ಲಿ ಇಂತಹ ಪ್ರಕ್ಷುಬ್ಧ ವಾತಾವರಣದಲ್ಲಿ ಹಬ್ಬ ಆಚರಿಸುವ ಧೈರ್ಯ ಮಹಾರಾಜರಿಗೆ ಇರುವುದಿಲ್ಲ. ದಸರಾ ನಮ್ಮ ನಾಡಹಬ್ಬ ಆಚರಿಸಲೇಬೇಕು. ದಸರಾ ಹಬ್ಬ ದಿನಾಂಕ 6–10–1947ರಂದು ಇದ್ದು, ಅಷ್ಟರೊಳಗೆ ಬಿಡುಗಡೆಯಾಗುತ್ತೇನೆಂಬ ಆಶಾಭಾವನೆಯನ್ನು ವ್ಯಕ್ತಪಡಿಸುತ್ತಾರೆ.

ದಿನಾಂಕ.2–10–1947ರಂದು ಗಾಂಧೀಜೀಯವರ ಜನ್ಮದಿನ, ಅಂದು ರಾತ್ರಿ ತೀರ್ಥಹಳ್ಳಿಯಿಂದ ಅನೇಕ ಹೆಣ್ಣುಮಕ್ಕಳು ಸೆರೆಮನೆ ಬಂದರು. ಜೈಲಿನ ಮೇಲ್ವಿಚಾರಕರು ಇಂದು ನಿಮಗೆಲ್ಲಾ ಬಿಡುಗಡೆ ಎಂಬ ಮಾತನ್ನು ಹೇಳಿದ ಬಗ್ಗೆ ಲಕ್ಷಮ್ಮನವರು ಉಲ್ಲೇಖಿಸಿರುತ್ತಾರೆ.

ದಿನಾಂಕ 3-10-1947ರಂದು ರತ್ನಮ್ಮ ಮಾಧವರಾವ್ ಅವರು ತಮ್ಮ ದಾಂಪತ್ಯ ಜೀವನದ ಬಗ್ಗೆ ಲಕ್ಷಮ್ಮನವರಲ್ಲಿ ಹಂಚಿಕೊಳ್ಳುತ್ತಾರೆ. ಲಕ್ಷಮ್ಮನವರು ದಾವಣಗೆರೆಯಲ್ಲಿ ಏಕೀಕರಣ ಪರಿಷತ್ತಿನಲ್ಲಿ ಮಾಡಿದ ಭಾಷಣ ಅವರ ವಿದ್ಯಾರ್ಹತೆಗಿಂತ ಕಡಿಮೆಯಾಗಿತ್ತು ಎಂದು ಹನುಮಂತಯ್ಯನವರ ಅಭಿಪ್ರಾಯವಾಗಿತ್ತು ಎಂದು ರತ್ನಮ್ಮನವರಿಂದ ತಿಳಿದ ಲಕ್ಷಮ್ಮನವರ ಮನಸ್ಸು ಖಿನ್ನಗೊಂಡಿತ್ತು. ಅಂದೇ ರಾತ್ರಿ ಜೈಲಿನ ಪಕ್ಕದ ಗೋಡೆಗೆ ಡೈನಾಮೈಟ್ ಇಟ್ಟು ಕಿಂಡಿ ಮಾಡಿದ್ದರ ಬಗ್ಗೆ, ಅದನ್ನು ಆತುರವಾಗಿ ರಿಪೇರಿ ಮಾಡುತ್ತಿದ್ದ ಬಗ್ಗೆ ಉಲ್ಲೇಖಿಸಿದ್ದಾರೆ.[24]

ದಿನಾಂಕ.4-10-1947ರಂದು ಮನೆಯ ನೆನಪಾಗಿ ಲಕ್ಷಮ್ಮನವರ ಯಜಮಾನರಾಗಲೀ, ಮಕ್ಕಳೆ ಆಗಲೀ ಯಾರು ಬಂದು ನೋಡಲಿಲ್ಲ, ಅವರಿಂದ ಒಂದು ಪತ್ರ ಕೂಡ ಬರಲಿಲ್ಲ ಎಂದು ದಿನಚರಿಯಲ್ಲಿ ದಾಖಲಿಸಿರುತ್ತಾರೆ.

ದಿನಾಂಕ.5-10-1947ರಂದು ಸಂಜೆ ಬಿಡುಗಡೆಯಾದ ಲಕ್ಷಮ್ಮನವರು ರಾತ್ರಿ ಸಮಯದಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಹೋಗಲು ಅಸಾಧ್ಯವಾಗಿ ಸ್ನೇಹಿತೆಯಾದ ಶಕುಂತಲರ ಮನೆಯಲ್ಲಿ ಉಳಿದುಕೊಂಡರು. ಮರುದಿನ ಬೆಳಿಗ್ಗೆ ಅಬ್ಬಾ ಮೈಸೂರು, ನನ್ನ ಮನೆ, ನನ್ನ ಯಜಮಾನರು, ಮಕ್ಕಳು ಎಂದು ದಿನಚರಿಯನ್ನು ಪೂರ್ಣಗೊಳಿಸಿದ್ದಾರೆ. ಅವರ ದಿನಚರಿಯ ಕೊನೆಯ ವಾಕ್ಯ ಅರ್ಧಕ್ಕೆ ನಿಂತಿದ್ದು, ಬಣ್ಣಿಸಲು ಆಗದ ಸಂತೋಷ ಸಮಾಧಾನಗಳು ಆ ವಾಕ್ಯದಲ್ಲಿ ಗೋಚರಿಸುತ್ತವೆ.

1945ರಲ್ಲಿ ಕಾಂಗ್ರೆಸ್ ಸದಸ್ಯೆಯಾಗಿ ರಾಜಕೀಯ ರಂಗ ಪ್ರವೇಶಿಸಿ ಚಳುವಳಿಯಲ್ಲಿ ಭಾಗವಹಿಸಿ, ಕೇವಲ ಎರಡು ವರ್ಷಗಳಲ್ಲಿ ಸತ್ಯಾಗ್ರಹಿಯಾಗಿ, ನಾಯಕಿಯಾಗಿ ಬೆಳೆದು ಸೆರೆಮನೆಯ ವಾಸವನ್ನು ಅನುಭವಿಸಿ ಬಂದ ಲಕ್ಷಮ್ಮನವರ ಜೀವನ ಒಂದು ಸುಂದರ ಕಥಾನಕ. ಇತಿಹಾಸ ವಿದ್ಯಾರ್ಥಿನಿಯಾಗಿದ್ದ ಲಕ್ಷಮ್ಮನವರು ತಮ್ಮ ಸೆರೆಮನೆ ವಾಸವನ್ನು **'ತುರಂಗಾವಾಸ ಅನುಭವ'** ಎಂದು ದಾಖಲಿಸಿರುವುದು ಅವರ ಐತಿಹಾಸಿಕ ಪ್ರಜ್ಞೆಗೆ ಸಾಕ್ಷಿಯಾಗಿದೆ.

ಅಡಿ ಟಿಪ್ಪಣಿಗಳು

1. ಮೈಸೂರು ದರ್ಶನ ಸಂಪುಟ- 1, (ಪ್ರ. ಸಂ) ಪ್ರೊ. ಕೆ.ಎಸ್.ರಂಗಪ್ಪ (ಸಂ) ಡಿ.ಕೆ.ರಾಜೇಂದ್ರ, ಕರಾಮುವಿವಿ ನಿಲಯ, ಪುಟ ಸಂಖ್ಯೆ- 162
2. ಕನ್ನಡ ವಿಷಯ ವಿಶ್ವಕೋಶ (ಇತಿಹಾಸ ಮತ್ತು ಪುರಾತತ್ವ) (ಪ್ರ. ಸಂ) ಡಾ.ಅಂಬಳಿಕೆ ಹಿರಿಯಣ್ಣ. ಪುಟ ಸಂಖ್ಯೆ-1121.
3. ಮೈಸೂರು ದರ್ಶನ ಸಂಪುಟ- 1, ಪ್ರಧಾನ ಸಂಪಾದಕರು ಪ್ರೊ.ಕೆ.ಎಸ್.ರಂಗಪ್ಪ. (ಸಂ) ಡಿ.ಕೆ.ರಾಜೇಂದ್ರ, ಕರಾಮುವಿವಿ ನಿಲಯ, ಪುಟ ಸಂಖ್ಯೆ-164.
4. ಹೋರಾಟದ ದಿಟ್ಟ ಹೆಜ್ಜೆಗಳು-ಹೆಚ್.ಎಸ್.ದೊರೆಸ್ವಾಮಿ, ಪುಟ ಸಂಖ್ಯೆ-2
5. ಹೋರಾಟದ ದಿಟ್ಟ ಹೆಜ್ಜೆಗಳು-ಹೆಚ್.ಎಸ್.ದೊರೆಸ್ವಾಮಿ, ಪುಟ ಸಂಖ್ಯೆ-6

6. ಮೈಸೂರು ದರ್ಶನ. ಸಂಪುಟ –1 ಪ್ರಸಾರಾಂಗ ಕರಾಮುವಿವಿ ನಿಲಯ, ಪುಟ ಸಂಖ್ಯೆ–164 ಮತ್ತು 165
7. ಹೋರಾಟದ ದಿಟ್ಟ ಹೆಜ್ಜೆಗಳು–ಹೆಚ್.ಎಸ್.ದೊರೆಸ್ವಾಮಿ, ಪುಟ ಸಂಖ್ಯೆ–24, 25 ಮತ್ತು 26 ಮತ್ತು ಮೈಸೂರು ದರ್ಶನ. ಸಂಪುಟ –1 ಪ್ರಸಾರಾಂಗ ಕರಾಮುವಿವಿ ನಿಲಯ, ಪುಟ ಸಂಖ್ಯೆ–166
8. ಹೋರಾಟದ ದಿಟ್ಟ ಹೆಜ್ಜೆಗಳು–ಹೆಚ್.ಎಸ್.ದೊರೆಸ್ವಾಮಿ ಪುಟ ಸಂಖ್ಯೆ–27, 28 ಮತ್ತು 29 ಮತ್ತು ಮೈಸೂರು ದರ್ಶನ. ಸಂಪುಟ –1 ಪ್ರಸಾರಾಂಗ ಕರಾಮುವಿವಿ ನಿಲಯ. ಪುಟ ಸಂಖ್ಯೆ–166
9. ಹೋರಾಟದ ದಿಟ್ಟ ಹೆಜ್ಜೆಗಳು–ಹೆಚ್.ಎಸ್.ದೊರೆಸ್ವಾಮಿ ಪುಟ ಸಂಖ್ಯೆ–31 ಮತ್ತು 32
10. ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ. ಚರಿತ್ರೆ ಸಂಪುಟ–6. ಪುಟಸಂಖ್ಯೆ–9
11. ಸಮಕಾಲೀನ ಕರ್ನಾಟಕ ಚರಿತ್ರೆಯ ವಿವಿಧ ಆಯಾಮಗಳು, ಕನ್ನಡ ವಿಶ್ವವಿದ್ಯಾನಿಲಯ ಹಂಪಿ. ಚರಿತ್ರೆ ಸಂಪುಟ–6. ಪುಟ ಸಂಖ್ಯೆ–9.
12. ಹೋರಾಟದ ದಿಟ್ಟಹೆಜ್ಜೆಗಳು, ಎಚ್.ಎಸ್.ದೊರೆಸ್ವಾಮಿ, ಪುಟ ಸಂಖ್ಯೆ–60, 61.
13. ಹೋರಾಟದ ದಿಟ್ಟಹೆಜ್ಜೆಗಳು, ಎಚ್.ಎಸ್.ದೊರೆಸ್ವಾಮಿ, ಪುಟ ಸಂಖ್ಯೆ– 61, 62
14. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು–ದ್ವಿತೀಯ ಸಂಪುಟ, ಪುಟ ಸಂಖ್ಯೆ–148 ಮತ್ತು ಹೋರಾಟದ ದಿಟ್ಟಹೆಜ್ಜೆಗಳು, ಎಚ್.ಎಸ್.ದೊರೆಸ್ವಾಮಿ, ಪುಟ ಸಂಖ್ಯೆ– 100
15. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು–ದ್ವಿತೀಯ ಸಂಪುಟ, ಪುಟ ಸಂಖ್ಯೆ–148
16. ಸಾಧ್ವಿಪತ್ರಿಕೆ, ದಿನಾಂಕ.21–4–1947.
17. ಎಂ.ಆರ್.ಲಕ್ಷಮ್ಮನವರ ತುರಂಗವಾಸ ಅನುಭವ, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು. ಪುಟಸಂಖ್ಯೆ–1
18. ಸಾಧ್ವಿಪತ್ರಿಕೆ ದಿನಾಂಕ.7–10–1947, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು.
19. ಸಾಧ್ವಿಪತ್ರಿಕೆ ದಿನಾಂಕ.16–10–1947 ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು.
20. ಎಂ.ಆರ್,ಲಕ್ಷಮ್ಮನವರ ತುರಂಗವಾಸ ಅನುಭವ, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು. ಪುಟಸಂಖ್ಯೆ–3
21. ಎಂ.ಆರ್,ಲಕ್ಷಮ್ಮನವರ ತುರಂಗವಾಸ ಅನುಭವ, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು. ಪುಟಸಂಖ್ಯೆ–4
22. ಎಂ.ಆರ್,ಲಕ್ಷಮ್ಮನವರ ತುರಂಗವಾಸ ಅನುಭವ, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು. ಪುಟಸಂಖ್ಯೆ–8

23. ಎಂ.ಆರ್,ಲಕ್ಷಮ್ಮನವರ ತುರಂಗವಾಸ ಅನುಭವ, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು. ಪುಟಸಂಖ್ಯೆ-19,20
24. ಎಂ.ಆರ್,ಲಕ್ಷಮ್ಮನವರ ತುರಂಗವಾಸ ಅನುಭವ, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು. ಪುಟಸಂಖ್ಯೆ-24

ಅಧ್ಯಾಯ ನಾಲ್ಕು

ಎಂ.ಆರ್.ಲಕ್ಷ್ಮಮ್ಮನವರ ರಾಜಕೀಯ ಸಾಧನೆಗಳು.

ರಾಜಕೀಯ ಪ್ರವೇಶ ಹಿನ್ನೆಲೆ

ಎಂ.ಆರ್.ಲಕ್ಷ್ಮಮ್ಮನವರ ರಾಜಕೀಯ ಪ್ರವೇಶ ಅವರ ಜೀವನದಲ್ಲಿ ಉಂಟಾದ ಒಂದು ಮಹತ್ತರ ತಿರುವಾಗಿದ್ದು, **'ಎತ್ತಣ ಮಾಮರ ಎತ್ತಣ ಕೋಗಿಲೆ'** ಎಂಬಂತೆ ಅವರ ರಾಜಕೀಯ ರಂಗದ ಪ್ರವೇಶ ಅವರ ಜೀವನದ ಗತಿಯನ್ನು ಬದಲಾಯಿಸಿತು. ವಯಸ್ಕರ ಶಿಕ್ಷಣ ಸಮಿತಿಯ ವಾರಪತ್ರಿಕೆ **'ಬೆಳಕು'** ಪತ್ರಿಕೆಯ ಸಂಪಾದಕತ್ವದ ಜೊತೆಗೆ ಮಹಿಳಾ ಮಂಡಳಿಗಳ ಸ್ಥಾಪನೆಯ ಜೊತೆಗೆ ರಾಜಕೀಯ ಕ್ಷೇತ್ರದ ಪ್ರವೇಶ ಅವರ ಸಮಾಜ ಸೇವೆಯ ಕೈಂಕರ್ಯವನ್ನು ಸುಗಮವಾಗಿ ನಡೆಸಲು ಸಹಕಾರಿಯಾಯಿತು. ವಿದ್ಯಾವಂತ ಕುಟುಂಬದ ಹಿನ್ನೆಲೆಯನ್ನು ಹೊಂದಿದ್ದು, ಸರ್ಕಾರಿ ಉದ್ಯೋಗದಲ್ಲಿದ್ದ ಎಂ.ಆರ್.ಲಕ್ಷ್ಮಮ್ಮನವರ ತಂದೆ ಮತ್ತು ಪತಿಯವರಿಗೆ ರಾಜಕೀಯದ ಯಾವುದೇ ಹಿನ್ನೆಲೆ ಇರಲಿಲ್ಲ. ಆದರೆ ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿ ಉನ್ನತ ಆದರ್ಶಗಳನ್ನು ಬಳಸಿಕೊಂಡ ಎಂ.ಆರ್. ಲಕ್ಷ್ಮಮ್ಮನವರ ಪತಿ ಅವರನ್ನು ಹೆಚ್ಚಿನ ಶಿಕ್ಷಣ ಪಡೆಯಲು ಪ್ರೇರೇಪಿಸಿದರು ಮತ್ತು ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಲು ಎಲ್ಲ ರೀತಿಯ ಸಹಕಾರ ನೀಡಿದರು.[1]

ಎಂ.ಆರ್.ಲಕ್ಷ್ಮಮ್ಮನವರು ವಯಸ್ಕರ ಶಿಕ್ಷಣ ಸಮಿತಿಯ ಸಭೆಯಲ್ಲಿ ಭಾಗವಹಿಸಿದಾಗ ಆದಾಗಲೇ ನಾಯಕರಾಗಿದ್ದ ಅನೇಕ ಪ್ರತಿಷ್ಠಿತ ವ್ಯಕ್ತಿಗಳ ಪರಿಚಯಯವಾಯಿತು. ಅವರಲ್ಲಿ ಸಾಹುಕಾರ್ ಚೆನ್ನಯ್ಯ, ಟಿ.ಮರಿಯಪ್ಪ, ಯಶೋದರಾ ದಾಸಪ್ಪ, ಎಚ್.ಸಿ.ದಾಸಪ್ಪ, ಟಿ.ಸಿದ್ದಲಿಂಗಯ್ಯ, ನ.ಭದ್ರಯ್ಯ ಪ್ರಮುಖರು. ದೇಶದಲ್ಲಿಯೇ ಮಾದರಿ ಸಂಸ್ಥಾನ ಎನಿಸಿಕೊಂಡಿದ್ದ ಮೈಸೂರು ರಾಜ್ಯದಲ್ಲಿ ಪ್ರಜಾಪ್ರತಿನಿಧಿ ಸಭೆ ಎಂಬ ಶಾಸನ ಸಭೆಯು 1881ರಲ್ಲಿ ಸ್ಥಾಪನೆಯಾಗಿತ್ತು. ನ್ಯಾಯ ವಿಧಾಯಕ ಸಭೆ ಎಂಬ ಮೇಲ್ಮನೆ ಹಾಗೂ ಪ್ರತಿನಿಧಿ ಸಭೆ ಎಂಬ ಕೆಳಮನೆಯನ್ನು ಒಳಗೊಂಡಿತ್ತು. ಮೇಲ್ಮನೆಯಾದ ನ್ಯಾಯವಿಧಾಯಕ ಸಭೆಯು 71 ಸದಸ್ಯರನ್ನು ಒಳಗೊಂಡಿದ್ದು, ಚುನಾಯಿತ ವರ್ಗ, ನಾಮಕರಣ ಸದಸ್ಯರು ಮತ್ತು ಪದನಿಮಿತ್ತ ಅಧಿಕಾರ ವರ್ಗದವರಿದ್ದರು. ಮಹಿಳೆಯರಿಗಾಗಿ ಎರಡು ಸ್ಥಾನಗಳನ್ನು ಮಿಸಲಾಗಿಟ್ಟಿದ್ದು, ಮೈಸೂರು ಮತ್ತು ಬೆಂಗಳೂರಿನಿಂದ ತಲಾ ಒಬ್ಬೊಬ್ಬರು ಮಹಿಳೆಯರು ನ್ಯಾಯವಿಧಾಯಕ ಸಭೆಯಲ್ಲಿ ಸದಸ್ಯರಾಗಿರುತ್ತಿದ್ದರು. 1945ರ ನ್ಯಾಯ ವಿಧಾಯಕ ಸಭೆಯ ಸದಸ್ಯೆಯಾಗಿದ್ದ ಯಶೋಧರಾ ದಾಸಪ್ಪನವರ ಅವಧಿ ಮುಗಿದು ತೆರವಾಗಿದ್ದ ಆ ಸ್ಥಾನಕ್ಕೆ ಚುನಾವಣೆ ನಡೆಯಬೇಕಾಗಿತ್ತು. ಈ ಸ್ಥಾನಕ್ಕೆ ಎಂ.ಆರ್.ಲಕ್ಷ್ಮಮ್ಮನವರನ್ನು ಸ್ಪರ್ಧಿಸುವಂತೆ ಕಾಂಗ್ರೆಸ್ ಮುಖಂಡರು ಕೇಳಿಕೊಂಡಿದ್ದರು.

ನ್ಯಾಯ ವಿಧಾಯಕ ಸಭೆಯ ಸದಸ್ಯೆಯಾಗಿ ಎಂ.ಆರ್.ಲಕ್ಷಮ್ಮನವರು–1945

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸಾಹುಕಾರ್ ಚೆನ್ನಯ್ಯನವರು ಮತ್ತು ಮೈಸೂರು ಮುನಸಿಪಲ್ ಸಮಿತಿಯ ಕಾಂಗ್ರೆಸ್ ನಾಯಕರಾಗಿದ್ದ ಟಿ. ಮರಿಯಪ್ಪನವರು ಎಂ.ಆರ್.ಲಕ್ಷಮ್ಮನವರ ಮನೆಗೆ ಬಂದು ಕಾಂಗ್ರೆಸ್ ಪಕ್ಷಕ್ಕೆ ಸೇರುವಂತೆ ಹಾಗೂ ಮೇಲ್ಮನೆಯಾದ ನ್ಯಾಯ ವಿಧಾಯಕ ಸಭೆಗೆ ಮೈಸೂರು ಕ್ಷೇತ್ರದಿಂದ ಮಹಿಳಾ ಪ್ರತಿನಿಧಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಬಗೆಬಗೆಯಾಗಿ ಕೇಳಿಕೊಂಡರು.[2] ಆದರೆ ಎಂ.ಆರ್.ಲಕ್ಷಮ್ಮನವರಿಗೆ ರಾಜಕಾರಣವೆಂದರೆ ನಮ್ಮಂತವರಿಗೆಲ್ಲಿ ಎಂಬ ಭಾವನೆ ಇದ್ದು, ಮನೆಯಿಂದ ಹೊರಗಿದ್ದು ದೇಶದ ಆಗುಹೋಗುಗಳಲ್ಲಿ ಭಾಗವಹಿಸಲು ಸಾಧ್ಯವೇ? ಅಂತಹ ಶಕ್ತಿ ನನ್ನಲ್ಲಿದೆಯೇ? ಎಂಬ ಪ್ರಶ್ನೆ ಮನದಲ್ಲಿ ಅಲ್ಲೋಲ ಕಲ್ಲೋಲವನ್ನು ಸೃಷ್ಟಿಸಿತು. ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಲು ಸಾಧ್ಯವಾಗದೇ ಬಿಕ್ಕಿ ಅಳುತ್ತಿದ್ದಾಗ ಅವರ ತಂದೆ ಅವರನ್ನು ಸಂತೈಸಿ ನಮ್ಮ ಪೂರ್ವಿಕರು ಪಾಳೆಗಾರರ ಹತ್ತಿರ ಮಂತ್ರಿಗಳಾಗಿದ್ದವರು. ನಾವು ರಾಜಮನೆತನದವರು ಆದರೆ ಜೀವನಕ್ಕಾಗಿ ಸರ್ಕಾರಿ ಉದ್ಯೋಗದಲ್ಲಿ ಇರುವ ನಮಗೆ ದೇಶದ ಸೇವೆ ಮಾಡಲು ಅವಕಾಶವಿಲ್ಲದಾಗಿದೆ. ಆದರೆ ನಿನಗೆ ಬಂದಿರುವ ಅವಕಾಶವನ್ನು ಬಿಡದೆ ದೇಶ ಸೇವೆಯಲ್ಲಿ ತೊಡಗಿಕೋ. ನಾವು ನಿನ್ನ ಹಿಂದೆ ಇದ್ದು ಬೇಕಾದ ಸಹಕಾರವನ್ನು ನೀಡುತ್ತೇವೆ ಎಂದರು.[3] ಅದಕ್ಕಿಂತ ಹೆಚ್ಚಿನ ಸಹಕಾರವನ್ನು ನೀಡಲು ಒಪ್ಪಿದ ಅವರ ಪತಿಯವರು ಎಂ.ಆರ್.ಲಕ್ಷಮ್ಮನವರನ್ನು ರಾಜಕೀಯ ರಂಗ ಪ್ರವೇಶಿಸಲು ಹುರಿದುಂಬಿಸಿದರು. ಅಳುಕುತ್ತಲೇ ಕಾಂಗ್ರೆಸ್ ಪಕ್ಷದ ಸದಸ್ಯತ್ವದ ಅರ್ಜಿಗೆ ಸಹಿ ಹಾಕಿದರು. ಒಲ್ಲದ ಮನಸ್ಸಿನಿಂದಲೇ ತಮಗಿಷ್ಟವಾದ ಆಕಾಶವಾಣಿಯ ಕೆಲಸವನ್ನು ಬಿಡಲು ನಿರ್ಧರಿಸಿದರು.

ಇಂಟರ್ ಮಿಡಿಯೇಟ್‌ನಲ್ಲಿ ಓದುತ್ತಿದ್ದಾಗ ಕೆ.ಆರ್.ಶ್ರೀನಿವಾಸ ಐಯ್ಯಂಗಾರ್ ಎಂಬುವವರು ಖಾದಿ ಉಡುಪನ್ನು ಧರಿಸುತ್ತಿದ್ದು, ಅವರು ಕಟ್ಟಾ ದೇಶಪ್ರೇಮಿಯಾಗಿದ್ದರು. ಅವರ ಭೋಧನೆಯಿಂದ ಪ್ರಭಾವಿತರಾದ ಎಂ.ಆರ್.ಲಕ್ಷಮ್ಮನವರು ಖಾದಿ ಸೀರೆ ಕೊಂಡಿದ್ದರು.[4] ಆದರೆ ಅದನ್ನು ಉಡಲು ಸಾಧ್ಯವಾಗಲಿಲ್ಲ. ರಾಜಕೀಯ ರಂಗದ ಪ್ರವೇಶ ಮಾಡಿ ದೇಶಸೇವೆ ಸಲ್ಲಿಸುವ ನಿರ್ಧಾರ ಮಾಡಿದ ಮೇಲೆ ಖಾದಿ ಸೀರೆಯನ್ನು ಕೊಂಡರು. ಎಂ.ಆರ್.ಲಕ್ಷಮ್ಮನವರು ಅವರ ಜೀವನ ಪೂರ್ತಿ ಸದಾ ಖಾದಿ ಉಡುಪನ್ನು ಧರಿಸುತ್ತಿದ್ದು ಸರಳವಾದ ನಡೆನುಡಿ ವೇಷ ಭೂಷಣಗಳನ್ನು ತನ್ನದಾಗಿಸಿಕೊಂಡರು.

ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸಾಹುಕಾರ ಚೆನ್ನಯ್ಯನವರು ಎಂ.ಆರ್.ಲಕ್ಷಮ್ಮನವರನ್ನು ತಮ್ಮ ಕಾರಿನಲ್ಲಿ ಕರೆದೊಯ್ದು ಅವರು ಚುನಾವಣೆಗೆ ಸ್ಪರ್ಧಿಸಲು ನಾಮಪತ್ರವನ್ನು ಸಲ್ಲಿಸಿದರು. ಐದು ಮಕ್ಕಳ ತಾಯಿಯಾಗಿದ್ದ ಎಂ.ಆರ್.ಲಕ್ಷಮ್ಮನವರು 1945ರ ಫೆಬ್ರವರಿ ತಿಂಗಳಲ್ಲಿ ನ್ಯಾಯವಿಧಾಯಕ ಸಭೆಗೆ ಅವಿರೋಧವಾಗಿ ಆಯ್ಕೆಗೊಂಡು ರಾಜಕೀಯ ರಂಗವನ್ನು ಪ್ರವೇಶಿಸಿದರು.[5]

ಕಾಂಗ್ರೆಸಿನ ಸದಸ್ಯರಾಗಿ ನ್ಯಾಯ ವಿಧಾಯಕ ಸಭೆಗೆ ಪ್ರವೇಶಿಸಿದ ಎಂ.ಆರ್.ಲಕ್ಕಮ್ಮನವರು ರಾಜಕೀಯದಲ್ಲಿ ರಚನಾತ್ಮಕ ಕೆಲಸಕಾರ್ಯಗಳ ನಡುವೆ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಕೂಡ ಕೆಲಸ ಮಾಡುತ್ತಿದ್ದು, 'ಬೆಳಕು' ವಾರಪತ್ರಿಕೆಯ ಸಂಪಾದಕಿಯಾಗಿ ಕೂಡ ತಮ್ಮ ಕೆಲಸವನ್ನು ಮುಂದುವರಿಸಿದರು.

1945 ಜೂನ್ 30ರಂದು ನ್ಯಾಯ ವಿಧಾಯಕ ಸಭೆಯ ಅಧಿವೇಶನ ಬೆಂಗಳೂರಿನಲ್ಲಿ ನಡೆಯಿತು. ನಾಲ್ವರು ಮಕ್ಕಳನ್ನು ಮೈಸೂರಿನಲ್ಲಿ ತಾಯಿಯ ಬಳಿ ಬಿಟ್ಟು ಕೈಗೂಸನ್ನು ಎತ್ತಿಕೊಂಡು ತಂದೆಯವರೊಂದಿಗೆ ಬೆಂಗಳೂರಿಗೆ ಬಂದ ಎಂ.ಆರ್.ಲಕ್ಷಮ್ಮನವರು ನ್ಯಾಯ ವಿಧಾಯಕ ಸಭೆಯ ಮೊದಲ ಅಧಿವೇಶನದಲ್ಲಿ ಭಾಗವಹಿಸಿದರು.

ನ್ಯಾಯವಿಧಾಯಕ ಸಭೆಯಲ್ಲಿ ಎಂ.ಆರ್.ಲಕ್ಷಮ್ಮನವರ ಭಾಷಣಗಳು ಮತ್ತು ವಿಚಾರಧಾರೆಗಳು

1945ರ ಜೂನ್ 20ರಂದು ಮೊದಲ ಅಧಿವೇಶನ ಡಿ.ಎಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಎಂ..ಆರ್.ಲಕ್ಷಮ್ಮನವರು ತಮ್ಮ ವಾಕ್‌ಚಾತುರ್ಯ, ಬುದ್ಧಿವಂತಿಕೆಯಿಂದ ಮೊದಲ ದಿನವೇ ಅನೇಕ ಪ್ರಶ್ನೆಗಳನ್ನು ಕೇಳಿ ನಂತರದ ಚರ್ಚೆಗಳಲ್ಲಿ ಭಾಗವಹಿಸಿದರು. ಆಯವ್ಯಯದ ಮೇಲೆ ಭಾಷಣವನ್ನು ಮಾಡಿದ ಲಕ್ಷಮ್ಮನವರು ಪಾನನಿರೋಧದ ಬಗ್ಗೆ ಮಾತನಾಡಿ ಸರ್ಕಾರಕ್ಕೆ ಆದಾಯವನ್ನು ತರುವಂತಹ ಪ್ರಮುಖ ಇಲಾಖೆ ಅಬಕಾರಿ ಇಲಾಖೆ ಆಗಿದ್ದರೂ, ಸರ್ಕಾರವೂ ಕಠಿಣ ನಿರ್ಧಾರ ಮಾಡಿ ಪಾನ ನಿರೋಧದ ಬಗ್ಗೆ ತನ್ನ ಮೊದಲ ಹೆಜ್ಜೆಯನ್ನು ಇಡಬೇಕು. ಮದ್ಯಪಾನದಿಂದ ಕುಡಿಯುವರಿಗಷ್ಟೆ ಅಲ್ಲದೇ ಆತನ್ನು ಅವಲಂಬಿಸಿರುವ ಕುಟುಂಬ ವರ್ಗದವರು ಕೂಡ ನರಳಬೇಕಾಗುತ್ತದೆ. ಇದರೊಂದಿಗೆ ಮಾದಕ ವಸ್ತುಗಳಾದ ಬೀಡಿ, ಸಿಗರೇಟು ಇವುಗಳನ್ನು ಕೂಡ ನಿಷೇಧಿಸಬೇಕು. ಮದ್ಯಪಾನದಿಂದ ಆಗುವ ದುಷ್ಪರಿಣಾಮದ ಬಗ್ಗೆ ಹೆಚ್ಚಿನ ಪ್ರಚಾರ ಮಾಡಬೇಕು. ಜನರಲ್ಲಿ ನೈತಿಕ ಶಿಕ್ಷಣದ ಬಗ್ಗೆ ಅರಿವನ್ನು ಮೂಡಿಸಬೇಕು. ಕುಡಿತಕ್ಕೆ ದಾಸರಾಗಿರುವವರ ಗಮನವನ್ನು ಬೇರೆಡೆಗೆ ಹರಿಸಲು ಕಾಫಿ ಹೌಸ್‌ಗಳನ್ನು, ನಾಟಕ ಮಂದಿರಗಳನ್ನು, ಆಕಾಶವಾಣಿಯ ಕಾರ್ಯಕ್ರಮಗಳನ್ನು ಆಲಿಸುವ ಕೇಂದ್ರಗಳನ್ನು ಸರ್ಕಾರದ ವತಿಯಿಂದ ಸ್ಥಾಪಿಸಬೇಕು ಎಂದರು.[6]

ಶಿಕ್ಷಣದ ಬಗ್ಗೆ ವಿಶೇಷ ಕಾಳಜಿ ಇದ್ದ ಎಂ.ಆರ್.ಲಕ್ಷಮ್ಮನವರು ಶಿಶುವಿಹಾರಗಳಿಂದ ಕಾಲೇಜು ಶಿಕ್ಷಣದವರೆಗಿನ ಸಮಸ್ಯೆಗಳ ಬಗ್ಗೆ ಮಾತನಾಡಿದ್ದಾರೆ. ಶಿಶುವಿಹಾರದ ಮಕ್ಕಳಿಗೆ ಮಧ್ಯಾಹ್ನ ಉಚಿತ ಊಟ ಮತ್ತು ಹಾಲನ್ನು ವಿತರಿಸಬೇಕು.[7]

ಇದರಿಂದಾಗಿ ಹೆಚ್ಚಿನ ಮಕ್ಕಳು ಶಿಶುವಿಹಾರಕ್ಕೆ ಬರುತ್ತಾರೆ ಹಾಗೂ ಮಕ್ಕಳಿಗೆ ಪೌಷ್ಠಿಕ ಆಹಾರ ಸಿಕ್ಕದಂತಾಗುತ್ತದೆ. ಶಿಶುವಿಹಾರಗಳಿಗೆ ಮಹಿಳಾ ಶಿಕ್ಷಕರನ್ನೆ ನೇಮಿಸಬೇಕು. ಏಕೆಂದರೆ ಮಹಿಳಾ ಶಿಕ್ಷಕರು ತಾಯಿಯ ಮಮತೆಯನ್ನು, ಕಾಳಜಿಯನ್ನು ಮಕ್ಕಳ ಮೇಲೆ ತೋರಿಸಲು ಸಾಧ್ಯ. ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಬೇಕಾದಂತಹ ವಾತಾವರಣವನ್ನು ಕಲ್ಪಿಸಿಕೊಡಬೇಕು. ಪ್ರೌಢಶಾಲೆ ಶಿಕ್ಷಣದಲ್ಲಿ ಹೆಣ್ಣು ಮಕ್ಕಳಿಗೆ ಕಲೆಯ ಬಗ್ಗೆ ಮಾಹಿತಿ ನೀಡಬೇಕು. ಲಲಿತಕಲೆಗಳ ಬಗ್ಗೆ, ಗೃಹ ಕೈಗಾರಿಕೆಗಳ ಬಗ್ಗೆ, ವಸ್ತ್ರಗಳ ಮೇಲೆ ವಿವಿಧ ವಿನ್ಯಾಸಗಳ ಅಲಂಕಾರಿಕ ಕೆಲಸಗಳನ್ನು ಮಾಡುವುದು, ಕಸೂತಿ ಹಾಕುವುದು ಮುಂತಾದವುಗಳ ಬಗ್ಗೆ ಮಾಹಿತಿಯನ್ನು ನೀಡಬೇಕು. ಇದರಿಂದ ಹೆಣ್ಣು ಮಕ್ಕಳು ಮುಂದೆ ಆರ್ಥಿಕ ಸ್ವಾವಲಂಬನೆ ಹೊಂದಲು ಸಾಧ್ಯವಾಗುತ್ತದೆ. ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಮಾಧ್ಯಮದ ಪಠ್ಯಪುಸ್ತಕಗಳ ಕೊರತೆ ಕಂಡು ಬರುತ್ತದೆ. ಈ ಬಗ್ಗೆ ತಾಯಿ ನಾಡು ಮತ್ತು ದೇಶ ಬಂಧು ಪತ್ರಿಕೆಯಲ್ಲಿ ಸುದ್ದಿ ಬಂದಿದ್ದು, ಸರ್ಕಾರವು ಅಗತ್ಯ ಪುಸ್ತಕಗಳನ್ನು ಒದಗಿಸಬೇಕೆಂದು ಸರ್ಕಾರವನ್ನು ಅಗ್ರಹಪಡಿಸುತ್ತಾರೆ.[8]

ಎಂ.ಆರ್.ಲಕ್ಷಮ್ಮನವರು ಮೂಲ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಕೆಲಸದ ಅವಕಾಶಗಳು ಕಡಿಮೆ ಇದ್ದು, ಕಾಶ್ಮೀರ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಜಾರಿಗೆ ತಂದಿರುವಂತೆ ಮೈಸೂರು ಸಂಸ್ಥಾನದಲ್ಲಿಯೂ ಮೂಲ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕೆಂದು ಹೇಳಿದ್ದಾರೆ.[9] ಸಾರ್ಜೆಂಟ್ ಸಮಿತಿಯವರು ಮಾಡಿದ ಶಿಫಾರಸ್ಸಿನಂತೆ ಮೂಲ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದರೆ ಕೈಗಾರಿಕೆಗಳ ಬಗ್ಗೆ ಗೃಹ ಕೈಗಾರಿಕೆಗಳ ಬಗ್ಗೆ ಜ್ಞಾನ ಬೆಳೆದು ಮುಂದಿನ ಜೀವನದಲ್ಲಿ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಾಗುತ್ತದೆ. ಮೂಲಶಿಕ್ಷಣವು ಜೀವನಕ್ಕೆ ದಾರಿ ದೀಪವಾಗುವುದು. 1938ರಲ್ಲಿ ನಂಜನಗೂಡು ತಾಲ್ಲೂಕು ತಗಡೂರಿನಲ್ಲಿ ಮತ್ತು ಬದನವಾಳುವಿನಲ್ಲಿ ತೆರೆದಂತಹ ಖಾದಿ ಕೇಂದ್ರವನ್ನು ಮೂಲ ಶಿಕ್ಷಣ ನೀಡುವ ಕೇಂದ್ರವಾಗಿ ಪರಿವರ್ತಿಸಬೇಕು. ಆಧುನಿಕ ಶಿಕ್ಷಣದಿಂದ ಸರ್ಕಾರಿ ಕೆಲಸಕ್ಕೆ ಸೇರಲು ಮಾತ್ರ ಸಾಧ್ಯ. ಶಿಕ್ಷಣ ಪಡೆದ ಎಲ್ಲರಿಗೂ ಸರ್ಕಾರಿ ಕೆಲಸ ದೊರಕದೆ ನಿರುದ್ಯೋಗ ಸೃಷ್ಟಿಯಾಗುತ್ತದೆ. ಆದರೆ ಮೂಲ ಶಿಕ್ಷಣವು ಜೀವನಕ್ಕೆ ಆಧಾರವಾಗುತ್ತದೆ.

ಕೈಗಾರಿಕೆಗಳು ದೇಶದ ಅಭಿವೃದ್ಧಿಗೆ ಪೂರಕವಾಗಿದ್ದು, ರಾಜ್ಯದಲ್ಲಿರುವ ಕೈಗಾರಿಕೆಗಳು ಅದರಲ್ಲೂ ವಿಶೇಷವಾಗಿ ಗೃಹ ಕೈಗಾರಿಕೆ ಮತ್ತು ಗುಡಿ ಕೈಗಾರಿಕೆಗಳ ಬಗ್ಗೆ ಲಕ್ಷಮ್ಮನವರು ಸರ್ಕಾರದ ಗಮನ ಸೆಳೆದರು.[10] ರಾಜ್ಯದಲ್ಲಿರುವ ಗೃಹ ಕೈಗಾರಿಕೆಗಳು ಎಷ್ಟಿವೆ? ಗೃಹ ಕೈಗಾರಿಕೆಗಳಲ್ಲಿ ಮಹಿಳೆಯರನ್ನು ತೊಡಗಿಸಿಕೊಳ್ಳಲು ಅವಕಾಶ

ನೀಡಬೇಕು. ಮಹಿಳಾ ಸಮಾಜ, ಮಹಿಳಾ ಮಂಡಳಿಗಳ ಸಹಾಯದಿಂದ ಇಂತಹ ಕೈಗಾರಿಕೆಗಳನ್ನು ನೀಡಬೇಕು. ಸರ್ಕಾರವು ತರಬೇತಿಯನ್ನು ನೀಡುವುದರ ಜೊತೆಗೆ ತರಬೇತಿ ಭತ್ಯೆಯನ್ನು ನೀಡಬೇಕು. ಹೊಲಿಗೆ, ಕಸೂತಿ ಮುಂತಾದ ವಿಷಯಗಳ ಬಗ್ಗೆ ತರಬೇತಿ ನೀಡಬೇಕೆಂದು ಸರ್ಕಾರಕ್ಕೆ ಆಗ್ರಹಿಸಿದ್ದರು.

ಹೆಣ್ಣು ಮಕ್ಕಳ ಬಗ್ಗೆ ವಿಶೇಷ ಕಾಳಜಿಯನ್ನಿಟ್ಟುಕೊಂಡಿದ್ದ ಎಂ.ಆರ್.ಲಕ್ಷಮ್ಮನವರು ಹೆಣ್ಣು ಮಕ್ಕಳು ಮತ್ತು ಶಿಶುಗಳ ಬಗ್ಗೆ ಸರ್ಕಾರದಿಂದ ನೀಡುತ್ತಿರುವ ಸವಲತ್ತುಗಳು ಮತ್ತು ವೈದ್ಯಕೀಯ ಚಿಕಿತ್ಸೆ ಬಗ್ಗೆ ಪ್ರಶ್ನೆ ಮಾಡಿದರು.[11] ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ ಹೆಣ್ಣುಮಕ್ಕಳಿಗೆ ದೊರೆಯುತ್ತಿರುವ ಚಿಕಿತ್ಸೆ, ಶಿಶುಗಳ ಮರಣಕ್ಕೆ ಕಾರಣವೇನು? ರಕ್ತ ಹೀನತೆಯಿಂದ ಬಳಲುತಿದ್ದವರಿಗೆ ಸೂಕ್ತ ಸೌಲಭ್ಯವನ್ನು ಕಲ್ಪಿಸಿಕೊಡುವ ಬಗ್ಗೆ ಸರ್ಕಾರದ ಆರೋಗ್ಯ ಸಚಿವರನ್ನು ಪ್ರಶ್ನಿಸಿದರು. ಮಧ್ಯಮ ವರ್ಗ ಮತ್ತು ಕೆಳವರ್ಗದ ಜನತೆಯ ಬಗ್ಗೆ ವಿಶೇಷ ಅಭಿಮಾನವುಳ್ಳವರಾಗಿದ್ದು, ಸರ್ಕಾರಿ ನೌಕರಿಯಲ್ಲಿರುವ ಕೆಳವರ್ಗದ ನೌಕರರನ್ನು ಅಧಿಕಾರಿಗಳು ಹೀನಾಯವಾಗಿ ಕಾಣುತ್ತಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿದ ಎಂ.ಆರ್.ಲಕ್ಷಮ್ಮನವರು ಅಧಿಕಾರೇತರ ಸರ್ಕಾರಿ ನೌಕರರು **'ಇಲಾಖೆಯ ಬೆನ್ನುಮೂಳೆ ಇದ್ದಂತೆ'** ಮತ್ತು ಇಲಾಖೆಯ ಎಲ್ಲ ಕೆಲಸ ಕಾರ್ಯಗಳ ಬಗ್ಗೆ ತಿಳಿದಿದ್ದು, ಅವರು **'ಇಲಾಖೆಯ ಜ್ಯೋತಿ'** ಎಂದು ನೌಕರರನ್ನು ಪ್ರಶಂಸಿಸಿದ್ದಾರೆ.[12]

ಅಧಿಕಾರಿಗಳಿಗೆ ಉತ್ತಮ ಸಂಬಳ ಸವಲತ್ತುಗಳು ದೊರಕುತಿದ್ದರು, ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ತೊಡಗಿಕೊಂಡಿದ್ದು, ಅವರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಿದ ಎಂ.ಆರ್.ಲಕ್ಷಮ್ಮನವರು ಗುಮಾಸ್ತರು ಮತ್ತು ಕೆಳವರ್ಗದವರು ಹಣದ ಕೊರತೆಯಿಂದ ಭ್ರಷ್ಟಾಚಾರದಲ್ಲಿ ತೊಡಗುತ್ತಾರೆ. ಭ್ರಷ್ಟಾಚಾರವನ್ನು ಕಡಿಮೆ ಮಾಡಲು ಕೆಳವರ್ಗದ ನೌಕರರಿಗೆ ಹೆಚ್ಚಿನ ಸಂಬಳ ಮತ್ತು ಭತ್ಯೆಯನ್ನು ನೀಡಬೇಕೆಂದು ಸರ್ಕಾರವನ್ನು ಅಗ್ರಹಿಸಿದರು.

ಮೈಸೂರು ನಗರದಲ್ಲಿ ಹಾಲಿನ ಕೊರತೆಯ ಬಗ್ಗೆ ಪ್ರಶ್ನಿಸಿದ ಎಂ.ಆರ್.ಲಕ್ಷಮ್ಮನವರು ಮಧ್ಯವರ್ಗ ಮತ್ತು ಕೆಳವರ್ಗದ ಜನತೆಗೆ ಅಗತ್ಯವಿರುವಷ್ಟು ಹಾಲಿನ ಕೊರತೆ ಇದ್ದು, ಸರ್ಕಾರದವರು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಲಹೆ ನೀಡಿದರು. ಹಳ್ಳಿಕಾರ್ ಮತ್ತು ಸಿಂಧಿ ತಳಿಯ ಹಸುಗಳನ್ನು ಮುರಾ ತಳಿಯ ಎಮ್ಮೆಗಳ ತಳಿಗಳನ್ನು ಅಭಿವೃದ್ಧಿ ಪಡಿಸಿ ಹೆಚ್ಚಿನ ಹಾಲನ್ನು ಉತ್ಪಾದಿಸುವುದರ ಬಗ್ಗೆ ಸರ್ಕಾರ ಗಮನ ಹರಿಸಬೇಕೆಂದು ಸಲಹೆ ನೀಡಿದರು.[13]

ನ್ಯಾಯ ವಿಧಾಯಕ ಸಭೆ ದಿನಾಂಕ 19-6-1946ರಂದು ರಾಜ ಮಂತ್ರ ಪ್ರವೀಣ ಶ್ರೀಎಚ್.ಬಿ. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು.[14]

ಎಂ.ಆರ್.ಲಕ್ಷ್ಮಮ್ಮನವರು ಪತ್ರಿಕಾ ಸಲಹಾ ಸಮಿತಿ ವಿಚಾರವಾಗಿ ಪ್ರಶ್ನೆಗಳನ್ನು ಕೇಳಿದರು. ಲಕ್ಷ್ಮಮ್ಮನವರು ಆಯವ್ಯಯದ ಮೇಲೆ ಭಾಷಣ ಮಾಡಿ ಸಣ್ಣಸಣ್ಣ ಕೈಗಾರಿಕೆಗಳಿಗೆ ಸಾಕಷ್ಟು ಪ್ರೋತ್ಸಾಹ ನೀಡಬೇಕು. ಸ್ತ್ರೀಯರ ಶಿಕ್ಷಣಕ್ಕೆ ಹೆಚ್ಚಿನ ಗಮನ ಕೊಡಬೇಕು. ಕನ್ನಡ ಭಾಷಾಭಿವೃದ್ಧಿಗಾಗಿ ಸಾಕಷ್ಟು ಉತ್ತೇಜನಕೊಡಬೇಕೆಂದು ಹೇಳಿದರು.[15]

ಎಂ.ಆರ್ ಲಕ್ಷ್ಮಮ್ಮನವರು ಎಂ ಎ ಪದವೀಧರೆಯಾದ್ದರಿಂದ ಶಿಕ್ಷಣದ ಬಗ್ಗೆ ಹೆಚ್ಚಿನ ಕಾಳಜಿಯುಳ್ಳವರಾಗಿದ್ದು, ದಿನಾಂಕ:30-06-1948 ರಂದು ಶಾಸನ ಸಭೆಯಿಂದ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್‌ಗೆ ಚುನಾಯಿತರಾದರು. ಇದರೊಂದಿಗೆ ಶೈಕ್ಷಣಿಕ ರಂಗದ ಸೇವೆಯು ಅಧಿಕೃತವಾಗಿ ಆರಂಭವಾಯಿತು.

1945 ರಿಂದ 1947 ಆಗಸ್ಟ್ ತಿಂಗಳವರೆಗೆ ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ ಎಂ.ಆರ್.ಲಕ್ಷ್ಮಮ್ಮನವರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರು. ಜವಾಬ್ದಾರಿ ಸರ್ಕಾರದ ರಚನೆಯ ಹೋರಾಟವಾದ 'ಚಲೋ ಮೈಸೂರು' ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆಯಿಂದ ಹೊರಬಂದ ಎಂ.ಆರ್.ಲಕ್ಷ್ಮಮ್ಮನವರು ಚಳುವಳಿಗೆ ಸ್ತ್ರೀಯರನ್ನು ಸಂಘಟಿಸುವ ಮೂಲಕ ಚಳುವಳಿಗೆ ಬೆನ್ನೆಲುಬಾಗಿ ನಿಂತಿದ್ದರು. ನ್ಯಾಯಾವಿಧಾಯಕ ಸಭೆಯ ಸದಸ್ಯತ್ವ ಅವಧಿ 3 ವರ್ಷಗಳಾಗಿದ್ದು, ಚಳುವಳಿಯಲ್ಲಿ ಭಾಗವಹಿಸಿದ ಪರಿಣಾಮವಾಗಿ ಅವರ ಸದಸ್ಯತ್ವ ರದ್ದುಗೊಳಿಸಲ್ಪಟ್ಟಿತು.

ಪುರಸಭಾ ಸದಸ್ಯರಾಗಿ ಎಂ.ಆರ್.ಲಕ್ಷ್ಮಮ್ಮನವರ ಸೇವೆ

ನ್ಯಾಯಾವಿಧಾಯಕ ಸಭೆಯ ಸದಸ್ಯರಾಗಿದ್ದ ಎಂ.ಆರ್.ಲಕ್ಷ್ಮಮ್ಮನವರು ಸಮಾಜಸೇವೆಯ ಜೊತೆಗೆ ವಯಸ್ಕರ ಶಿಕ್ಷಣ ಸಮಿತಿಯ ವಾರಪತ್ರಿಕೆ ಬೆಳಕು ಪತ್ರಿಕೆಯ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾಗಲೇ ಮೈಸೂರು ಕಾಂಗ್ರೆಸ್ ಪಕ್ಷ ಅವರನ್ನು ಪುರಸಭಾ ಚುನಾವಣೆಗೆ ಉಮೇದುವಾರರನ್ನಾಗಿ ನಿಲ್ಲಿಸಿತು.[16] ಒಟ್ಟು 24 ಜನರು ಮೈಸೂರು ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದು, ದಿನಾಂಕ:14-11-1946 ರಂದು ಪುರಸಭೆ ಚುನಾವಣೆ ನಡೆಯಿತು. ಮೈಸೂರಿನ ಚಾಮರಾಜಮೊಹಲ್ಲ ಕ್ಷೇತ್ರದಿಂದ ಒಟ್ಟು 4 ಸ್ಥಾನಗಳಿದ್ದು, 9 ಜನರು ಕಣದಲ್ಲಿದ್ದರು.

ಅವರಲ್ಲಿ 4 ಜನರು ಕಾಂಗ್ರೆಸ್ ಪಕ್ಷದ ಉಮೇದುವಾರರಾಗಿದ್ದರು. ಚಾಮರಾಜಮೊಹಲ್ಲದಿಂದ ಅತ್ಯಧಿಕ ಮತಗಳಿಂದ 3 ಜನ ಕಾಂಗ್ರೆಸ್ ಪಕ್ಷದಿಂದ ಮತ್ತು ಒಬ್ಬರು ಸ್ವತಂತ್ರ ಅಭ್ಯರ್ಥಿಯಾಗಿ ಪುರಸಭಾ ಚುನಾವಣೆಯಲ್ಲಿ ಜಯಗಳಿಸಿದರು. ಇವರಲ್ಲಿ ಬಿ.ನಾರಾಯಣಸ್ವಾಮಿ 54 ಮತ, ಎಂ.ಆರ್.ಲಕ್ಷ್ಮಮ್ಮನವರು 504 ಮತ[17], ಅಗರಂ ರಂಗಯ್ಯನವರು 460 ಮತಗಳನ್ನು ಪಡೆದು ಕಾಂಗ್ರೆಸ್ ಪಕ್ಷದಿಂದ ಮತ್ತು

ಸ್ವತಂತ್ರ ಅಭ್ಯರ್ಥಿ ಎಂ ವೆಂಕಟೇಶಯ್ಯನವರು 450 ಮತಗಳನ್ನು ಪಡೆದು ಪುರಸಭಾ ಸದಸ್ಯರಾದರು. ಕಾಂಗ್ರೆಸ್ ಪಕ್ಷದಿಂದ ಇಬ್ಬರು ಮಹಿಳೆಯರು ಆಯ್ಕೆಯಾಗಿದ್ದು, ಎಂ.ಆರ್.ಲಕ್ಷಮ್ಮ ಮತ್ತು ಎಂ.ಎನ್.ಸೀತಮ್ಮನವರು ಪುರಸಭಾ ಸದಸ್ಯರಾಗಿದ್ದು ಮೊಟ್ಟಮೊದಲ ಬಾರಿಗೆ ಇಬ್ಬರು ಮಹಿಳೆಯರು ಪುರಸಭೆಗೆ ಆಯ್ಕೆಯಾಗಿದ್ದರು.[18]

ಮೈಸೂರು ಪುರಸಭಾ ಸದಸ್ಯರಾಗಿ ಆಯ್ಕೆಯಾದ ಎಂ.ಆರ್.ಲಕ್ಷಮ್ಮನವರು ದಿನಾಂಕ;06–01–1947ರಲ್ಲಿ ಪುರಸಭೆಯ ಉಪಾಧ್ಯಕ್ಷರಾಗಿ ಆಯ್ಕೆಯಾದರು.[19] ಈ ಸಂದರ್ಭದಲ್ಲಿ ಟಿ.ಮರಿಯಪ್ಪನವರು ಅಧ್ಯಕ್ಷರಾಗಿದ್ದರು. ಒಂದು ವರ್ಷಗಳ ಕಾಲ ಉಪಾಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿದ ಎಂ.ಆರ್.ಲಕ್ಷಮ್ಮನವರ ನಾಯಕತ್ವ ಗುಣಗಳು ಅವರನ್ನು ಪುರಸಭೆಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ ಸ್ಥಾನವನ್ನಲಂಕರಿಸುವಂತೆ ಮಾಡಿತು. ಟಿ.ಮರಿಯಪ್ಪವರು ಮತ್ತು ಹ.ಮಹಮ್ಮದ್‌ಷರೀಫ್‌ರವರು ಮೈಸೂರು ಪುರಸಭೆಯಿಂದ ಮಂತ್ರಿಮಂಡಲಕ್ಕೆ ಆಯ್ಕೆಯಾದರು. ಟಿ. ಮರಿಯಪ್ಪನವರ ತೆರವಾದ ಪುರಸಭೆಯ ಅಧ್ಯಕ್ಷ ಸ್ಥಾನಕ್ಕೆ ಎಂ.ಆರ್.ಲಕ್ಷಮ್ಮನವರನ್ನು ಆಯ್ಕೆ ಮಾಡಲಾಯಿತು.[20] ಎಂ.ಆರ್.ಲಕ್ಷಮ್ಮನವರು 1946 ರಿಂದ 1948ರವರಗೆ ಎರಡು ಅವಧಿಗಳಲ್ಲಿ ಮೈಸೂರು ಪುರಸಭಾ ಸದಸ್ಯರಾಗಿ ಸೇವೆ ಸಲ್ಲಿಸಿದರು. ಪುರಸಭೆಯ ಸದಸ್ಯರಾಗಿ, ಉಪಾಧ್ಯಕ್ಷರಾಗಿ, ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ ಎಂ.ಆರ್.ಲಕ್ಷಮ್ಮನವರು ಜನರ ಸಮಸ್ಯೆಗಳನ್ನು ಬಗೆ ಹರಿಸುವುದರಲ್ಲಿ ಮೊದಲ ಆದ್ಯತೆಯನ್ನು ನೀಡಿದರು.

ಸ್ವಾತಂತ್ರ್ಯ ನಂತರ ಎಂ.ಆರ್.ಲಕ್ಷಮ್ಮನವರ ರಾಜಕೀಯ ಸಾಧನೆ

ಎಂ.ಆರ್.ಲಕ್ಷಮ್ಮನವರು ನ್ಯಾಯವಿಧಾಯಕ ಸಭೆಯ ಸದಸ್ಯರಾಗಿ, ಪುರಸಭಾ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ನಂತರ 1949 ರಿಂದ 1952ರವರಗೆ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸಮಾಜಮುಖಿ ಎಂ.ಆರ್.ಲಕ್ಷಮ್ಮನವರು ರಾಜಕೀಯ ರಂಗಕ್ಕಿಂತ ಸಮಾಜಸೇವೆ ಮತ್ತು ಪತ್ರಿಕಾರಂಗದಲ್ಲಿ ಕೆಲಸ ನಿರ್ವಹಿಸುವ ಇಚ್ಚೆಯನ್ನು ಇಟ್ಟುಕೊಂಡವರಾಗಿದ್ದು, ಕಾಂಗ್ರೆಸ್ ಪಕ್ಷವು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡುವುದಾಗಿ ಹೇಳಿದಾಗ ಅವರು ಅದನ್ನು ನಯವಾಗಿ ತಿರಸ್ಕರಿಸಿದರು.[21] ಆದರೆ ಕಾಂಗೆಸ್ ಪಕ್ಷದ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮೈಸೂರು ಪ್ರದೇಶದ ಕಾಂಗ್ರೆಸ್‌ನ ಮಹಿಳಾ ಘಟಕದ ಸಂಘಟನೆಯನ್ನು ಮಾಡಿ ವಿವಿಧ ರಚನಾತ್ಮಕ ಕಾರ್ಯಗಳನ್ನು ಕೈಗೊಂಡರು. ಮೈಸೂರು ರಾಜ್ಯದ ಮೂಲೆ ಮೂಲೆಗಳಲ್ಲಿ ಸಂಚರಿಸಿ ಜನರನ್ನು ಸಂಘಟಿಸಿದರು. ಇವರ ಅವಿರತ ಶ್ರಮ ದಿಂದಾಗಿ ವಿಧಾನ ಪರಿಷತ್ತಿನ ಸದಸ್ಯರಾಗಿ 1952ರಲ್ಲಿ ಚುನಾಯಿತರಾದರು.

ವಿಧಾನ ಪರಿಷತ್ತಿನ ಸದಸ್ಯರಾಗಿ ಎಂ.ಆರ್.ಲಕ್ಷಮ್ಮ 1952–1958

ಎಂ.ಆರ್.ಲಕ್ಷಮ್ಮ ನವರ ಸಮಾಜಸೇವೆ ಜನರ ಬಗ್ಗೆ ತೋರುತ್ತಿದ್ದ ಕಾಳಜಿ ಅವರು ವಿಧಾನ ಪರಿಷತ್ತಿನ ಸದಸ್ಯರಾದ ನಂತರ ಇನ್ನು ಹೆಚ್ಚಾಗಿ ತಮ್ಮನ್ನು ತಾವು ಜನಸೇವೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಯಿತು. ವಿಧಾನ ಪರಿಷತ್ತಿನ ಸದಸ್ಯರಾದ ಇವರು 1952 ರಿಂದ 1956ರವರಗೆ ನಾಲ್ಕು ವರ್ಷಗಳ ಕಾಲ ಶಾಸಕಾಂಗ ಕಾಂಗ್ರೆಸ್ ಪಕ್ಷದ ಸಹಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸಿದರು. ಶೀಘ್ರಲಿಪಿಕಾರರ ಕೊರತೆಯಿಂದಾಗಿ ಎರಡು ವರ್ಷಗಳ ಕಾಲ ತಾವೇ ಖುದ್ದಾಗಿ ಎಲ್ಲಾ ನಡಾವಳಿಗಳನ್ನು ತಾವೇ ಸಿದ್ದಪಡಿಸುತ್ತಿದ್ದರು.[22] ಯಾವ ನೌಕರರ ಸಹಾಯವಿಲ್ಲದೆ ಪತ್ರವ್ಯವಹಾರಗಳನ್ನೆಲ್ಲ ತಾವೊಬ್ಬರೆ ನಿಭಾಯಿಸುತ್ತಿದ್ದರು. ಶಾಸಕಾಂಗದ ಅನೇಕ ಸಮಿತಿಗಳಲ್ಲಿ ಸದಸ್ಯರಾಗಿ ಕೆಲಸ ನಿರ್ವಹಿಸಿದರು. ರೂಲ್ಸ್ ಸಮಿತಿ, ಸಾರ್ವಜನಿಕ ಹಣಕಾಸು ಸಮಿತಿ ಇದಲ್ಲದೆ ಪ್ರವಾಹ ಪೀಡಿತ ಪ್ರದೇಶಗಳಿಗೆ ತೆರಳಿ, ನೆರೆ ಸಂತ್ರಸ್ತರನ್ನು ಸಂತೈಸಿ ಅವರ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ನೇಮಿಸಿದ ಐವರು ಸದಸ್ಯರ ಸಮಿತಿಯಲ್ಲಿ ಒಬ್ಬರಾಗಿ ಕಾರ್ಯನಿರ್ವಹಿಸಿದರು. ಪ್ರದೇಶ ಕಾಂಗ್ರೆಸ್ ಸಮಿತಿಯ ಮಹಿಳಾ ಘಟಕದ ಸಂಚಾಲಕರಾಗಿ ಕೆಲಸವನ್ನು ನಿರ್ವಹಿಸಿದರು.

ಎಂ.ಆರ್.ಲಕ್ಷಮ್ಮ ನವರು ವಿಧಾನ ಪರಿಷತ್ತಿನ ಸದಸ್ಯರಾಗಿ ಅಮೇರಿಕಾ ದೇಶದ ಆಹ್ವಾನದ ಮೇರೆಗೆ 1954ರಲ್ಲಿ ಅಮೇರಿಕಾ ಪ್ರವಾಸವನ್ನು ಕೈಗೊಂಡರು. ರಾಜಕೀಯ ಸಂಸ್ಥೆಗಳ ಅಧ್ಯಯನ ಮತ್ತು ಮಹಿಳೆಯರ ಬಗ್ಗೆ ತಿಳಿದುಕೊಳ್ಳಲು ಅಮೇರಿಕಾಕ್ಕೆ ತೆರಳಿದರು. ಎಂ.ಆರ್.ಲಕ್ಷಮ್ಮನವರು ಸದಾ ಖಾದಿ ವಸ್ತುಗಳನ್ನೆ ಧರಿಸುತ್ತಿದ್ದು, ಅಮೇರಿಕಾದಲ್ಲಿ ಭಾರತೀಯರ ಸಂಸ್ಕೃತಿ ಹಿರಿಮೆಯನ್ನು ತಿಳಿಸಲು ಹಾಗೂ ಭಾರತದ ಘನತೆ ಗೌರವಕ್ಕೆ ತಕ್ಕಂತೆ ಇರಲು ನಿರ್ಧರಿಸಿ ರೇಷ್ಮೆ ವಸ್ತುಗಳನ್ನು ಕೊಂಡು ಧರಿಸಿದರು. ಅಮೇರಿಕಾ ಮಾತ್ರವಲ್ಲದೆ ಇಂಗ್ಲೆಂಡ್, ಇಟಲಿ, ಫ್ರಾನ್ಸ್, ಸ್ವಿಟ್ಜರ್‌ಲ್ಯಾಂಡ್ ಮುಂತಾದ ದೇಶಗಳಿಗೂ ಭೇಟಿ ಇತ್ತರು. ಅಮೇರಿಕಾದ ಡೆಮಾಕ್ರೆಟಿಕ್ ಪಕ್ಷದ ಮಹಿಳಾ ವಿಭಾಗಕ್ಕೆ ಸಂಬಂಧಪಟ್ಟಂತೆ ಹಾಗೂ ಇಂಗ್ಲೆಂಡಿನ ಲೇಬರ್ ಪಕ್ಷ ಮಹಿಳಾ ಘಟಕದ ಬಗ್ಗೆ ಅಧ್ಯಯನ ಮಾಡಿದರು. ವಿದೇಶಗಳಲ್ಲಿ ಮಹಿಳೆಯರ ಸ್ಥಿತಿಗತಿಗಳು, ಅವರಿಗೆ ದೊರೆತಿರುವ ಸ್ಥಾನಮಾನಗಳನ್ನು ಕಂಡು ಮೆಚ್ಚಿದರು. ಅಮೇರಿಕಾದ ಅಧ್ಯಕ್ಷರ ಪತ್ನಿ ಶ್ರೀಮತಿ ರೂಸ್‌ವೆಲ್ಟ್‌ರನ್ನು ಮತ್ತು ಉಪಾಧ್ಯಕ್ಷರಾದ ರಿಚರ್ಡ್ ನಿಕ್ಸನ್ ಹಾಗೂ ಅವರ ಪತ್ನಿ ಪ್ಯಾಟ್ರೀಷಿಯಾ ನಿಕ್ಸನ್, ಚಸ್ಟರ್ ಬೌಲ್ ದಂಪತಿಗಳು ಮುಂತಾದ ಮಹಾನೀಯರನ್ನು ಬೇಟಿ ಮಾಡಿ ಅಲ್ಲಿನ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡರು.[23] ಅಲ್ಲದೆ ಅಮೇರಿಕಾದ ಪ್ರಮುಖ ಶಾಸಕರು, ಅಧಿಕಾರಿಗಳು, ಗಣ್ಯವ್ಯಕ್ತಿಗಳು, ಹಾಲಿವುಡ್‌ನ ಪ್ರಸಿದ್ಧ ನಟರುಗಳನ್ನು ಭೇಟಿ ಮಾಡಿ ಅಲ್ಲಿನ ಹಲವಾರು ವಿಷಯಗಳ ಬಗ್ಗೆ ತಿಳಿದುಕೊಂಡರು.

ಎಂ.ಆರ್.ಲಕ್ಷ್ಮಮ್ಮನವರು ಭಾರತ ಮತ್ತು ಕರ್ನಾಟಕದ ಬಗ್ಗೆ ಅನೇಕ ಮಾಹಿತಿಗಳನ್ನು ಹಾಗೂ ಪುಸ್ತಕಗಳನ್ನು ಅಮೇರಿಕಾಕ್ಕೆ ತಗೆದುಕೊಂಡು ಹೋಗಿದ್ದು, ಅಮೇರಿಕಾದ ಜನರಿಗೆ ಭಾರತದ ವೈಶಿಷ್ಟ್ಯತೆ, ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಗಳ ಬಗ್ಗೆ ವಿಶೇಷವಾಗಿ ಕರ್ನಾಟಕದ ಬಗ್ಗೆ ಅನೇಕ ಮಾಹಿತಿಗಳನ್ನು ತಿಳಿಸಿದರು.[24]

ಟೊರೆಂಟೋದಲ್ಲಿ ನಡೆದ ಅಂತರಾಷ್ಟ್ರೀಯ ಸಮಾಜಸೇವೆ ಸಮ್ಮೇಳನದಲ್ಲಿ ಭಾಗವಹಿಸುವ ಅವಕಾಶ ಎಂ.ಆರ್.ಲಕ್ಷ್ಮಮ್ಮನವರಿಗೆ ದೊರೆತು ಭಾರತದ ಸಂಸ್ಕೃತಿ ಮತ್ತು ಇತಿಹಾಸ ವನ್ನು ಹೆಚ್ಚು ಪ್ರಚಾರ ಪಡಿಸಲು ಸಾಧ್ಯವಾಯಿತು. ಅವರ ಜ್ಞಾನ ಮತ್ತು ಕಾರ್ಯವೈಖರಿಯನ್ನು ನೋಡಿದರೆ ಭಾರತವನ್ನು ಪ್ರತಿನಿಧಿಸುವ ಸೂಕ್ತ ರಾಯಭಾರಿಯಾಗಿ ಎಂ.ಅರ್.ಲಕ್ಷ್ಮಮ್ಮನವರು ಹೊರಹೊಮ್ಮಿದರು.

ವಿಧಾನಪರಿಷತ್ತಿನಲ್ಲಿ ಎಂ.ಆರ್.ಲಕ್ಷ್ಮಮ್ಮನವರು ಮಾಡಿದ ಚರ್ಚೆಗಳು ಮತ್ತು ಭಾಷಣಗಳು (1952ರಿಂದ 1958)

ಎಂ.ಆರ್.ಲಕ್ಷ್ಮಮ್ಮನವರು ಕೆಳವರ್ಗದವರ ಬಗ್ಗೆ, ಮಹಿಳೆಯರ ಬಗ್ಗೆ ಮತ್ತು ರೈತರ ಬಗ್ಗೆ ಅಪಾರ ಕಾಳಜಿಯನ್ನಿಟ್ಟುಕೊಂಡಿದ್ದು, ವಿಧಾನ ಪರಿಷತ್ತಿನಲ್ಲಿ ಅವರು ಮಾಡಿದ ಭಾಷಣಗಳು ಮತ್ತು ಚರ್ಚೆಗಳನ್ನು ಅವಲೋಕಿಸಿದಾಗ ಅವರ ಆಳವಾದ ಜ್ಞಾನ, ದೂರದೃಷ್ಟಿತ್ವ, ದೇಶಾಭಿಮಾನ ವಿಶೇಷವಾಗಿದ್ದು, ಎಂ.ಆರ್.ಲಕ್ಷ್ಮಮ್ಮನವರು ಅತ್ಯುತ್ತಮ ವಾಕ್ಪಟು ಕೂಡ ಆಗಿದ್ದರು ಎಂಬದು ಅರಿವಾಗುತ್ತದೆ.

ರೈತರ ಬಗ್ಗೆ ಎಂ.ಆರ್.ಲಕ್ಷ್ಮಮ್ಮನವರ ನಿಲುವು

ವಿಧಾನ ಪರಿಷತ್ತಿನಲ್ಲಿ ಮೈಸೂರು ರಾಜ್ಯದ ಆಹಾರ ಕಾಯ್ದೆಯ ಬಗ್ಗೆ ಮಾತನಾಡುತ್ತಾ ಮೈಸೂರು ರಾಜ್ಯದಲ್ಲಿ ಆಹಾರ ಧಾನ್ಯಗಳ ಬೆಲೆ ಕಡಿಮೆ ಇದ್ದು ಮುಂಬೈ ಮತ್ತು ಮದ್ರಾಸ್ ಪ್ರಾಂತ್ಯಗಳಲ್ಲಿ ಆಹಾರ ಧಾನ್ಯಗಳ ಬೆಲೆ ಹೆಚ್ಚಿಗೆ ಇದೆ. ಸರ್ಕಾರವು ಬೆಂಬಲ ಬೆಲೆಯನ್ನು ನೀಡಿದರೆ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಯನ್ನು ಬೆಳೆಯುತ್ತಾರೆ. ರೈತರಿಗೆ ವ್ಯವಸಾಯಕ್ಕೆ ನೀರಾವರಿ ವ್ಯವಸ್ಥೆಯನ್ನು ಸರ್ಕಾರ ಮಾಡಿಕೊಡಬೇಕು. ಕೆರೆಕಟ್ಟೆಗಳ ಸಹಾಯದಿಂದ ವ್ಯವಸಾಯಕ್ಕೆ ನೀರನ್ನು ಒದಗಿಸಿ ಕೊಡಬೇಕು. ರೈತರಿಗೆ ಬೆಂಬಲ ಬೆಲೆ ಕಡಿಮೆಯಾದರೆ ಆಹಾರ ಧಾನ್ಯಗಳನ್ನು ಹೊರರಾಜ್ಯಕ್ಕೆ ಸಾಗಿಸಿ, ಅಲ್ಲಿ ಮಾರಾಟ ಮಾಡುತ್ತಾರೆ. ಹಾಗಾದರೆ ಮೈಸೂರು ರಾಜ್ಯದಲ್ಲಿ ಆಹಾರ ಸಮಸ್ಯೆ ತಲೆದೂರುತ್ತದೆ.[25] ರೈತರಿಂದ ಲೆವಿ ಸಂಗ್ರಹಿಸುವ ಪದ್ಧತಿ ಜಾರಿಯಲ್ಲಿರಬೇಕೆ? ಎಂಬುದನ್ನು ಸರ್ಕಾರ ಪುನರ್ ಪರಿಶೀಲಿಸಬೇಕು. ರೈತರಿಂದ ಧಾನ್ಯಗಳಿಗೆ ತಕ್ಷಣವೆ ನಗದು ಹಣ ಪಾವತಿಸಬೇಕು. ರೈತರಿಗೆ ಹಣ ಪಾವತಿಸುವಲ್ಲಿ ಸರ್ಕಾರ ನಿಧಾನಗತಿಯನ್ನು ಅನುಸರಿಸುತ್ತಿದೆ. ವ್ಯವಸಾಯಗಾರರಿಗೆ ಭತ್ತವನ್ನು ಶೇಖರಿಸುವುದಕ್ಕೆ ಸರ್ಕಾರ ಗೋದಾಮುಗಳನ್ನು ಕಟ್ಟಿಸಿಕೊಟ್ಟು ಉತ್ತೇಜನ ನೀಡಬೇಕು.

ರೈತರಿಗೆ ಗ್ರಾಮಾಂತರ ಅಪೆಕ್ಸ್ ಬ್ಯಾಂಕ್‌ಗಳು 50 ಲಕ್ಷ ರೂಪಾಯಿಗಳಷ್ಟು ಸಾಲ ನೀಡಬೇಕು, ಗ್ರಾಮೀಣಾಭಿವೃದ್ಧಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ಆಂಧ್ರ ಪ್ರದೇಶದವರು ತುಂಗಾಭದ್ರ ನದಿಗೆ ಕಟ್ಟಿದಂತಹ ಅಣೆಕಟ್ಟಿನಿಂದ ಮೈಸೂರು ರಾಜ್ಯಕ್ಕೆ ನೀರಾವರಿ ಅನುಕೂಲಗಳು ಸಾಧ್ಯವೇ? ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ದೊರೆತಿದೆ? ಎಂದು ಅವರು ಪ್ರಶ್ನೆ ಮಾಡಿದ್ದಾರೆ.

ಕ್ಷಾಮ ಪರಿಸ್ಥಿತಿಯನ್ನು ಸರ್ಕಾರವು ಮಾನವೀಯತೆ ನೆಲಗಟ್ಟಿನಲ್ಲಿ ನೋಡಬೇಕು ಮತ್ತು ಪರಿಹರಿಸಬೇಕು. ಮಹಾತ್ಮ ಗಾಂಧಿಜಿಯವರು ಹೇಳಿದ ಧರ್ಮ ಮಾರ್ಗವನ್ನು ಅನುಸರಿಸಬೇಕು. ಅದೇ ಶ್ರೇಷ್ಟವಾದ ಹಾದಿಯಾಗಿದ್ದು ನಮ್ಮ ದೇಶ ಸಂಸ್ಕೃತಿಯ ನೆಲೆಬೀಡು, ಪ್ರಪಂಚದ ಇತರೆ ದೇಶಗಳು ಬೇರೆ ಬೇರೆ ವಿಷಯಗಳಲ್ಲಿ ಪರಿಣಿತಿಯನ್ನು ಪಡೆದುಕೊಂಡಿದೆ. ಉದಾ: ಜಪಾನ್ ದೇಶ ಕೈಗಾರಿಕೆಗೆ ಪ್ರಸಿದ್ಧಿ ಆದರೆ, ಜರ್ಮನಿಯು ವಿಜ್ಞಾನದ ಕ್ಷೇತ್ರದಲ್ಲಿ ತನ್ನ ಸಾಧನೆಯನ್ನು ಮಾಡಿದೆ. ಆದರೆ ಭಾರತ ದೇಶವು ಧರ್ಮ ನಿಷ್ಠೆಗೆ ಹೆಸರಾಗಿದ್ದು, ಅದನ್ನು ಕಾಪಾಡಬೇಕು. ಕ್ಷಾಮ ಪರಿಹಾರ ನಿಧಿಗಳನ್ನು ಸರ್ಕಾರದ ವತಿಯಿಂದ ನೀಡಬೇಕು. ದನಕರುಗಳ ಮೇವಿಗೆ ಬೇಕಾಗುವ ಹುಲ್ಲನ್ನು ಸರಬರಾಜು ಮಾಡಬೇಕು ಎಂಬುದು ಇವರ ನಿಲುವಾಗಿತ್ತು. ಅಲ್ಲದೇ ಎಂ.ಆರ್.ಲಕ್ಷಮ್ಮನವರು 1953 ರಲ್ಲಿಯೇ ಉದ್ಯೋಗ ಖಾತ್ರಿ ಯೋಜನೆಯಂತಹ ಯೋಜನೆಗಳನ್ನು ರೂಪಿಸುವ ಬಗ್ಗೆ ಮಾತನಾಡಿದ್ದಾರೆ.[26] ಕಾಮಗಾರಿ ಕೆಲಸಗಳನ್ನು ನಡೆಸುವುದರ ಮೂಲಕ ಗ್ರಾಮೀಣ ಭಾಗದಲ್ಲಿ ರೈತರಿಗೆ ಉದ್ಯೋಗವನ್ನು ಒದಗಿಸಿಕೊಡಬೇಕು ಆಹಾರ ಪಡಿತರ ನೀತಿಯನ್ನು ಜಾರಿಗೆ ತರಬೇಕು. ಈಗ ನೀಡುತ್ತಿರುವ ವಿದ್ಯಾಭ್ಯಾಸ ಕ್ರಮವನ್ನು ಸುಧಾರಣೆ ಮಾಡಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ವ್ಯವಸಾಯದ ಬಗ್ಗೆ ಹೆಚ್ಚಿನ ಮಾಹಿತಿ ನೀಡುವ ಶಿಕ್ಷಣವನ್ನು ನೀಡಬೇಕು. ವ್ಯವಸಾಯವು ಮುಖ್ಯವಾದ ಉದ್ಯೋಗವಾಗಿದ್ದು, ಹೆಚ್ಚು ಜನರು ಅದರಲ್ಲಿ ತೊಡಗಿಸಿಕೊಂಡರೆ ಆ ದೇಶ ಸುಭಿಕ್ಷವಾಗುತ್ತದೆ.

ಭಾರತ ಹಳ್ಳಿಗಳ ದೇಶ ಪಂಚವಾರ್ಷಿಕ ಯೋಜನೆಗಳು ಫಲಕಾರಿಯಾಗಬೇಕಾದರೆ ಜನರ ಸಹಕಾರ ಅಗತ್ಯ ಸಾಮೂದಾಯಿಕ ಯೋಜನೆಯ ರಚನೆಯಿಂದ ಹಳ್ಳಿಗಳನ್ನು ಸಂಪೂರ್ಣವಾಗಿ ಉದ್ಧಾರ ಮಾಡಬೇಕು. ಗ್ರಾಮೀಣಾಭಿವೃದ್ಧಿಯಾಗಬೇಕಾದರೆ ಸಹಕಾರ ತತ್ವದ ಆಧಾರದ ಮೇಲೆ ಶ್ರಮದಾನ ಶಿಬಿರಗಳನ್ನು ಏರ್ಪಡಿಸಬೇಕು. ಉದಾ: ಹಾಸನ ಜಿಲ್ಲೆಯಲ್ಲಿ ಹತ್ತಿಗಟ್ಟೆ ಬಳಿ ಊರಿನಲ್ಲಿರುವರೆಲ್ಲರೂ ಸೇರಿ ರಸ್ತೆಯನ್ನು ನಿರ್ಮಿಸಿಕೊಂಡಿದ್ದಾರೆ.[27] ವಿಶ್ವೇಶ್ವರಯ್ಯ ಕಾಲುವೆಯನ್ನು ರೀಪೇರಿ ಮಾಡಿಸಿ ವ್ಯವಸಾಯಕ್ಕೆ ಅನುಕೂಲ ಮಾಡಿಕೊಡಬೇಕೆಂದು ಎಂ.ಆರ್.ಲಕ್ಷಮ್ಮನವರು ಸರ್ಕಾರವನ್ನು ಒತ್ತಾಯಿಸಿದರು. ತೆರಿಗೆ ಮತ್ತು ಕೊರತೆ ಆಯವ್ಯಯದ ಬಗ್ಗೆ ಎಂ.ಆರ್.ಲಕ್ಷಮ್ಮನವರ ನಿಲುವು.

ಪ್ರತಿವರ್ಷ ಆಯವ್ಯಯವನ್ನು ಮಂಡಿಸುವುದರಿಂದ ಜೊತೆಗೆ ಕ್ಷಾಮ ಪರಿಸ್ಥಿತಿಯ ಕಾಲದಲ್ಲಿ ಪೂರಕ ಆಯವ್ಯಯವನ್ನು ಮಂಡಿಸಬೇಕು. ಏಕೆಂದರೆ ಇಂತಹ ಪರಿಸ್ಥಿತಿಯಲ್ಲಿ ಹಣದ ಅವಶ್ಯಕತೆ ಇರುತ್ತದೆ.[28] ಎಲ್ಲಾ ದೇಶಗಳಲ್ಲಿಯೂ ಹಣದ ಏರಿಳಿತಗಳು ಸಾಮಾನ್ಯವಾಗಿ ನಡೆಯುತ್ತಲೇ ಇರುತ್ತದೆ. ಅಂತಹ ಸಮಯದಲ್ಲಿ ನಿರುದ್ಯೋಗ ಸಮಸ್ಯೆ ತಲೆದೂರುತ್ತಲೇ ಇರುತ್ತದೆ. ಈ ಸಮಸ್ಯೆಗಳನ್ನು ನಿವಾರಿಸಲು ಅನೇಕ ಜನೋಪಯುಕ್ತ ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಬೇಕು. ಸರ್ಕಾರದವರು ದೇಶಾಭ್ಯುದಯಕ್ಕೋಸ್ಕರ ಹಣವನ್ನು ಒದಗಿಸಿರುವುದು ಸರಿಯಾದ ಕ್ರಮವಾಗಿದ್ದು, ಕೊರತೆ ಆಯವ್ಯಯ ಮಂಡಿಸುವುದರಿಂದ ಹಾನಿಯಾಗುವುದಿಲ್ಲ. ಆಸ್ಪತ್ರೆ ಶಾಲೆಗಳು ಮತ್ತಿತರ ಸೌಕರ್ಯಗಳನ್ನು ಒದಗಿಸಬೇಕು. ಮೈಸೂರು ರಾಜ್ಯದಲ್ಲಿ ಇತರ ರಾಜ್ಯಕ್ಕಿಂತ ಹೆಚ್ಚಿನ ಪ್ರಜಾಹಿತ ಕಾರ್ಯಗಳನ್ನು ಕೈಗೊಳ್ಳಲಾಗಿದ್ದು, ಹೆಚ್ಚಿನ ಹಣದ ವಿನಿಯೋಗವಾಗುತ್ತಿದೆ. ಸರ್ಕಾರವು ಸಾಮಾನ್ಯ ವರ್ಗದವರು ಬಳಸುವ ವಸ್ತುಗಳ ಮೇಲೆ ಕಡಿಮೆ ತೆರಿಗೆಯನ್ನು ವಿಧಿಸಿ, ಶ್ರೀಮಂತರು ಬಳಸುವ ವಸ್ತುಗಳ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಬೇಕು. ಮೋಟಾರು ವಾಹನಗಳ ಬೆಲೆ ಕಡಿಮೆಯಾಗಿರುವ ಕಾರಣ ಪೆಟ್ರೋಲ್ ಮೇಲೆ ಹೆಚ್ಚಿನ ತೆರಿಗೆಯನ್ನು ವಿಧಿಸಬೇಕು. ಸರ್ಕಾರವು ರಸ್ತೆಗಳನ್ನು ನಿರ್ಮಾಣ ಮಾಡಿ ಬಸ್ ಮಾಲೀಕರಿಂದ ನಿರ್ಧಿಷ್ಟವಾದ ತೆರಿಗೆ ವಸೂಲಿ ಮಾಡಿದರೆ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುತ್ತದೆ. ಇದರಿಂದ ರಾಷ್ಟ್ರಾಭಿವೃದ್ದಿ ಸಾಧ್ಯ. ಪರಸ್ಪರ ಅವಲಂಬಿತವಾದ ಎರಡು ಇಲಾಖೆಗಳನ್ನು ಒಗ್ಗೂಡಿಸುವ ಮೂಲಕ ಸರ್ಕಾರದ ಖರ್ಚು ವೆಚ್ಚವನ್ನು ಕಡಿಮೆ ಮಾಡಬಹುದು. ಉದಾಹರಣೆ ವಯಸ್ಕರ ಶಿಕ್ಷಣ ಸಮಿತಿಯನ್ನು ಗ್ರಾಮೀಣಾಭಿವೃದ್ಧಿ ಇಲಾಖೆಯೊಂದಿಗೆ ಒಗ್ಗೂಡಿಸಬಹುದು.

ಹಳ್ಳಿಯನ್ನು ಸ್ವಾವಲಂಬನೆಯ ಹಾದಿಯ ಕಡೆಗೆ ಕರೆದ್ಯೊಯ್ಯಬಹುದು. ಉದಾ: ಗ್ರಾಮೀಣ ಜನರೇ ತಮ್ಮ ಊರಿನ ಶಾಲೆಗಳನ್ನು ನಿರ್ಮಿಸಿ ಅವರೇ ನಿರ್ವಹಣೆ ಮಾಡಿದರೆ ಸರ್ಕಾರದ ವೆಚ್ಚ ಕಡಿಮೆಯಾಗಿ ಜನರು ತಮ್ಮನ್ನು ತಾವು ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯ.

ಕೈಗಾರಿಕೆಗಳ ಬಗ್ಗೆ ಎಂ.ಆರ್.ಲಕ್ಷ್ಮಮ್ಮನವರ ನಿಲುವು

ಮೈಸೂರು ರಾಜ್ಯವು ಕೈಗಾರಿಕೆಗಳಲ್ಲಿ ತನ್ನದೇ ಆದ ಪ್ರಸಿದ್ಧಿಯನ್ನು ಹೊಂದಿದ್ದು, ಜಪಾನ್ ಬಿಟ್ಟರೆ ಏಷ್ಯಾದಲ್ಲಿಯೇ ಏಕಮಾತ್ರ ಕಬ್ಬಿಣದ ಕಾರ್ಖಾನೆ ಭದ್ರಾವತಿ ಕಾರ್ಖಾನೆಯಾಗಿದ್ದು, ಭದ್ರಾವತಿ ಕಾರ್ಖಾನೆಗೆ ವಿದ್ಯುಚ್ಛಕ್ತಿಯನ್ನು ಬಳಸುತ್ತಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದ ಎಂ.ಆರ್.ಲಕ್ಷ್ಮಮ್ಮನವರು ನೈಸರ್ಗಿಕ ಸಂಪತ್ತನ್ನು ಹಿತಮಿತವಾಗಿ ಬಳಸಬೇಕೆಂದು ಹೇಳಿದ್ದಾರೆ.[29] ಭದ್ರಾವತಿ ಕಾರ್ಖಾನೆಯಲ್ಲಿ ವಿದ್ಯುಚ್ಛಕ್ತಿಯನ್ನು ಬಳಸುತ್ತಿರುವುದರಿಂದ ಉರುವಲಿನ ಉಳಿತಾಯವಾಗುತ್ತದೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದಿಂದ ಬೆಂಗಳೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಗುಡಿ ಕೈಗಾರಿಕೆ ಕೇಂದ್ರದ

ಕಾರ್ಯವೈಖರಿಯ ಬಗ್ಗೆ ಬಗ್ಗೆ ತಿಳಿದುಕೊಂಡ ಎಂ.ಆರ್.ಲಕ್ಷ್ಮಮ್ಮನವರು ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಗಳಿಗೆ ಉತ್ತೇಜನ ನೀಡಬೇಕೆಂದು ಒತ್ತಾಯಿಸಿದರು. ಮೈಸೂರು ರೇಷ್ಮೆ ಕೈಗಾರಿಕೆ, ಟೆಲಿಫೋನ್ ಕಾರ್ಖಾನೆ ಬಗ್ಗೆ ವಿಚಾರ ಮಾಡಿದರು.[30]

ಭಾರತವು ಗೃಹ ಕೈಗಾರಿಕೆಗೆ ಪ್ರಸಿದ್ಧಿ ಪಡೆದಿದ್ದು, ಸರ್ಕಾರದವರು ಕೈಮಗ್ಗದ ಕೈಗಾರಿಕೆಯ ಅಭಿವೃದ್ಧಿಗೆ ಹಾಕಿಕೊಂಡಿರುವ ಯೋಜನೆ ಬಗ್ಗೆ ಮಾಹಿತಿ ಕೇಳಿದ ಎಂ.ಆರ್.ಲಕ್ಷ್ಮಮ್ಮನವರು ಆಧುನಿಕ ಬಟ್ಟೆ ಗಿರಣಿಗಳಿಂದಾಗಿ ಕೈಮಗ್ಗದ ಬಟ್ಟೆಗಳಿಗೆ ಬೇಡಿಕೆ ಕಡಿಮೆಯಾಗಿ ಕಾರ್ಮಿಕರು ಸಂಕಷ್ಟದಲ್ಲಿರುವ ಬಗ್ಗೆ ಸರ್ಕಾರದ ಗಮನ ಸೆಳೆದರು. ಸಹಕಾರ ಸಂಘಗಳಿಗೆ ಮತ್ತು ಸಂಕಷ್ಟದಲ್ಲಿರುವ ಕಾರ್ಮಿಕರಿಗೆ ಸರ್ಕಾರವು ಸೂಕ್ತ ಪರಿಹಾರ ಕೊಡಬೇಕೆಂದು ಹೇಳಿದರು. ಅಮೇರಿಕಾದಲ್ಲಿ ಕೈಮಗ್ಗ ಬಟ್ಟೆ ತಯಾರಿಕೆಯ ಯಂತ್ರಗಳು ಬಂದಿದ್ದು, ಅವುಗಳನ್ನು ನಮ್ಮ ರಾಜ್ಯಕ್ಕೆ ಆಮದು ಮಾಡಿಕೊಳ್ಳಬೇಕು. ಇದರಿಂದ ಕಾರ್ಮಿಕರು ಹೆಚ್ಚಿನ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ.

ಮಹಿಳೆಯರ ಬಗ್ಗೆ ಎಂ.ಆರ್.ಲಕ್ಷ್ಮಮ್ಮನವರ ನಿಲುವು

ಮಹಿಳೆಯರ ಬಗ್ಗೆ ಅಪಾರವಾದ ಕಾಳಜಿ ಹೊಂದಿದ್ದ ಎಂ.ಆರ್.ಲಕ್ಷ್ಮಮ್ಮನವರು ಮೊದಲಿನಿಂದಲೂ ಅನೇಕ ಮಹಿಳಾ ಮಂಡಲಿಗಳ ಸ್ಥಾಪನೆ, ಮಹಿಳೆಯರನ್ನು ಸಂಘಟಿಸುವುದು, ಮಹಿಳೆಯರಿಗೆ ಅಕ್ಷರಾಭ್ಯಾಸ ಮುಂತಾದ ಕಾರ್ಯಗಳನ್ನು ಸತತವಾಗಿ ನಡೆಸಿಕೊಂಡು ಬಂದಿದ್ದರು. ವಿಧಾನ ಪರಿಷತ್ತಿನ ಸದಸ್ಯರಾದ ಮೇಲೆ ಮಹಿಳೆಯರ ಅಭಿವೃದ್ಧಿಗಾಗಿ ಮತ್ತು ಉತ್ತಮ ಸ್ಥಾನಮಾನ ಕಲ್ಪಿಸಲು ಒಂದು ಸದಾವಕಾಶ ದೊರೆಯಿತು. ಮಹಿಳಾ ಕಾರ್ಮಿಕರು ಅನೇಕ ರಂಗಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಅವರ ಸ್ಥಿತಿಗತಿಗಳನ್ನು ಗಮನಿಸಲು ಮಹಿಳಾ ಕಾರ್ಮಿಕ ಆಯುಕ್ತರನ್ನು ನೇಮಿಸುವಂತೆ ಸಕಾರಕ್ಕೆ ವಿನಂತಿ ಮಾಡಿದರು ಎಂ.ಆರ್. ಲಕ್ಷ್ಮಮ್ಮ ನವರು ಸ್ತ್ರೀಯರ ವಿದ್ಯಾಭ್ಯಾಸದ ಬಗ್ಗೆ ವಿಶೇಷವಾದ ಆದ್ಯತೆಯನ್ನು ನೀಡಿದರು. ತಾಯಿಯೇ ಮೊದಲ ಗುರುವಾಗಿದ್ದರಿಂದ ಮತ್ತು ಅಕ್ಷರ ಕಲಿತ ಹೆಣ್ಣು ಸಂಸಾರದ ಕಣ್ಣಿದ್ದಂತೆ ಆದುದರಿಂದ ಸ್ತ್ರೀಯರಿಗೆ ವಿದ್ಯಾಭ್ಯಾಸ ಅತ್ಯಗತ್ಯ. ಒಬ್ಬ ಮಹಿಳೆ ವಿದ್ಯಾವಂತೆಯಾದರೇ ಮುಂದಿನ ಪೀಳಿಗೆಗೆ ಕೂಡ ಆಕೆ ವಿದ್ಯಾಭ್ಯಾಸ ನೀಡಬಲ್ಲಳು.

ಹೆಚ್ಚಿನ ಸಂಖ್ಯೆಯ ಹೆಣ್ಣುಮಕ್ಕಳು ಅರ್ಧದಲ್ಲಿಯೇ ವಿದ್ಯಾಭ್ಯಾಸವನ್ನು ಮೊಟಕುಗೊಳಿಸುತ್ತಾರೆ. ಅವರಿಗೆ ವಯಸ್ಕರ ಶಿಕ್ಷಣದ ಮೂಲಕ ಶಿಕ್ಷಣ ಮುಂದುವರೆಸಲು ಅವಕಾಶ ನೀಡಬೇಕು. ಸ್ವಭಾವತಹ ಹೆಣ್ಣು ಮಕ್ಕಳು ಬುದ್ಧಿವಂತರಾಗಿದ್ದು ಸೂಕ್ಷ್ಮ ಬುದ್ಧಿವುಳ್ಳವರಾಗಿರುತ್ತಾರೆ. ಅವರ ಬುದ್ಧಿ ಬಹುಬೇಗ ವಿಕಸಿತವಾಗುತ್ತದೆ. ಆದರೆ ಹೆಣ್ಣು ಮಕ್ಕಳಿಗೆ ವಿದ್ಯೆಯನ್ನು ನೀಡುವುದರಲ್ಲಿ ಹೆಚ್ಚಿನ

ಪ್ರಾತಿನಿಧ್ಯವನ್ನು ನೀಡದಿರುವ ಕಾರಣ ಸಮಾಜದ ಮುಖ್ಯವಾಹಿನಿಗೆ ಹೆಣ್ಣುಮಕ್ಕಳು ಮುಂದೆ ಬರುತ್ತಿಲ್ಲ. ಹೆಣ್ಣು ಮಕ್ಕಳ ಬಗ್ಗೆ ಗೌರವಯುತವಾಗಿ ನಡೆದುಕೊಳ್ಳಬೇಕು ಮತ್ತು ಹೆಣ್ಣು ಮಕ್ಕಳ ಬಗ್ಗೆ ಹಗುರವಾಗಿ ಮಾತನಾಡಬಾರದು ಎಂದು ಸ್ತ್ರೀ ಶೋಷಣೆಯ ವಿರುದ್ಧ ಅಂದಿನ ಕಾಲದಲ್ಲಿಯೇ ಧ್ವನಿ ಎತ್ತಿದವರು ಎಂ.ಆರ್.ಲಕ್ಷ್ಮಮ್ಮನವರು.

ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ನೀಡಿದರೇ ಮುಂದೆ ಅವರು ಸ್ವಾವಲಂಬಿಗಳಾಗಿ ಜೀವನ ನಡೆಸಲು ಸಹಕಾರಿಯಾಗುತ್ತದೆ. ಹೆಣ್ಣು ಮಕ್ಕಳು ಮನೆಯೊಳಗೆ ಕುಳಿತರೇ ಸಮಾಜದ ರಚನೆ ಕುಂಠಿತವಾಗುತ್ತದೆ. ಆದುದರಿಂದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಸಮಾಜವು ಉತ್ತೇಜನ ನೀಡಬೇಕು. ಪೂರ್ವ ಪ್ರಾಥಮಿಕ ಶಾಲೆಗಳನ್ನು ಮಹಿಳಾ ಸಮಾಜದ ಮೇಲ್ವಿಚಾರಣೆ ನೀಡಿದರೆ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯ ಜೊತೆಗೆ ಸ್ತ್ರೀ ಸಮಾಜದ ಏಳಿಗೆಗೆ ಕಾರಣವಾಗುತ್ತದೆ. ಹೆಣ್ಣು ಮಕ್ಕಳಿಗೆ ಆರ್ಥಿಕ ಸಂಕಷ್ಟವಿದ್ದು ಶುಲ್ಕ ಕಟ್ಟಲು ತೊಂದರೆಯಿದೆ. ಸರ್ಕಾರವು ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ಬಗ್ಗೆ ಗಮನ ನೀಡಬೇಕು. ಹೆಣ್ಣು ಮಕ್ಕಳಿಗೆ ಗೃಹ ವಿಜ್ಞಾನದಂತಹ ವಿಷಯದ ಬಗ್ಗೆ ಹೆಚ್ಚಿನ ಶಿಕ್ಷಣ ನೀಡಬೇಕು ಜೊತೆಗೆ ಕರಕುಶಲ ವಸ್ತುಗಳ ತಯಾರಿಕೆ ಬಗ್ಗೆ ಶಿಕ್ಷಣವನ್ನು ನೀಡಬೇಕು. ಶಾಲಾ ಪಠ್ಯ ಪುಸ್ತಕಗಳ ಜೊತೆಯಲ್ಲಿ ಸಾಮಾನ್ಯ ಜ್ಞಾನದ ಅರಿವನ್ನು ಮೂಡಿಸುವ ಶಿಕ್ಷಣಕ್ಕೆ ಆದ್ಯತೆ ನೀಡಬೇಕು. ಪ್ರಾಥಮಿಕ ಶಾಲೆಗಳಲ್ಲಿ ಮಹಿಳಾ ಶಿಕ್ಷಕಿಯರು ಇರಬೇಕು, ಜೊತೆಗೆ ಶಾಲಾ ತನಿಖಾಧಿಕಾರಿಗಳು ಕೂಡ ಮಹಿಳೆಯರೆ ಇರಬೇಕು ಹೆಣ್ಣು ಮಕ್ಕಳು ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದು, ಅವರ ಸಾಮಾರ್ಥ್ಯಕ್ಕನುಸಾರವಾಗಿ ಕೆಲಸವನ್ನು ನೀಡಬೇಕು. ಹೆಣ್ಣು ಮಕ್ಕಳು ಪುರುಷರಿಗಿಂತ ಯಾವ ವಿಧದಲ್ಲಿಯೂ ಹಿಂದುಳಿದಿಲ್ಲ.

ಗೃಹ ಕೈಗಾರಿಕೆಯಲ್ಲಿ ಜಪಾನ್ ದೇಶ ಅಗ್ರಸ್ಥಾನವನ್ನು ಪಡೆದಿದ್ದು, ಜಪಾನಿನ ಮಹಿಳೆಯರು ಕೂಡ ಭಾರತೀಯರಂತೆ ಸದ್ಗೃಹಿಣಿಯರು. ಜಪಾನಿಯರ ಶಿಸ್ತು ಸಂಯಮ ಮಹಿಳೆಯರ ಕಷ್ಟ ಸಹಿಷ್ಣುತೆ ಬುದ್ಧಿಕುಶಲತೆ ಧೈರ್ಯ, ಸ್ಥೈರ್ಯ ಮನೋಭಾವನೆ ಪ್ರಶಂಸನೀಯವಾದುದು. ಜಪಾನ್ ದೇಶದ ಮೇಲೆ ಭಾರತೀಯರ ಪ್ರಭಾವ ಇದ್ದು, ಭಾರತದಲ್ಲಿ ಜನಿಸಿದ ಬೌದ್ಧ ಧರ್ಮದ ಅನುಯಾಯಿಗಳಾಗಿರುವ ಜಪಾನಿಯರು ಭಾರತೀಯರ ಮೇಲೆ ಗೌರವನ್ನಿಟ್ಟುಕೊಂಡಿರುವವರು. ಜಪಾನ್ ದೇಶಕ್ಕೆ ಮಹಿಳಾ ಸದಸ್ಯರು ಪ್ರವಾಸ ಕೈಗೊಂಡು ಜಪಾನಿಯರ ಕೈಗಾರಿಕಾಭಿವೃದ್ದಿಯನ್ನು ಖುದ್ದಾಗಿ ವೀಕ್ಷಿಸಲು ಪ್ರವಾಸಸಮಿತಿಯನ್ನು ನೇಮಿಸಬೇಕು. ಇದರಿಂದ ಭಾರತದಲ್ಲಿಯೂ ಅಭಿವೃದ್ದಿಯನ್ನು ಕೈಗೊಳ್ಳಲು ಮತ್ತು ಜಪಾನಿಯರ ಪದ್ದತಿಯನ್ನು ಅನುಷ್ಠಾನಕ್ಕೆ ತರಲು ಸಾಧ್ಯವಾಗುತ್ತದೆ.

ಜಪಾನಿಯರು ಸಂಘಟಿತರಾಗಿ ಸಹಕಾರ ಮನೋಭಾವದಿಂದ ಕೆಲಸ ನಿರ್ವಹಿಸಿ ಕೈಗಾರಿಕಾಭಿವೃದ್ಧಿಯನ್ನು ಸಾಧಿಸಿದ್ದಾರೆ. ಆದುದರಿಂದ ಮಹಿಳೆಯರಿಂದ ಕೂಡಿದ ಒಂದು ನಿಯೋಗವನ್ನು ಜಪಾನಿಗೆ ಕಳುಹಿಸಬೇಕು. ಆ ನಿಯೋಗವು ಒಬ್ಬರು ಶಿಕ್ಷಕಿ, ಒಬ್ಬರೂ ಗೃಹಿಣಿ, ಒಬ್ಬರೂ ಕಲಾವಿದೆ, ಒಬ್ಬರು ಮಹಿಳಾ ಸಾಹಿತಿ ಮತ್ತು ಮಹಿಳಾ ಶಾಸನ ಸಭೆಯ ಸದಸ್ಯೆಯನ್ನು ಒಳಗೊಂಡಿರಬೇಕು.

ಏಕೆಂದರೆ ಗೃಹ ಕೈಗಾರಿಕೆಗಳ ಬಗ್ಗೆ ಅಧ್ಯಯನ ಮಾಡಿ ನಮ್ಮಲ್ಲೂ ಕೂಡ ಅನುಷ್ಠಾನಕ್ಕೆ ತರಲು ಮತ್ತು ಆ ರೀತಿಯ ಶಿಕ್ಷಣ ಕ್ರಮವನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಜಪಾನಿನಲ್ಲಿ 13–14ನೇ ವಯಸ್ಸಿನಿಂದಲೇ ಕೈಗಾರಿಕಾ ಶಿಕ್ಷಣವನ್ನು ನೀಡಲು ಪ್ರಾರಂಭಿಸುತ್ತಾರೆ. ಜಪಾನಿಯರು ಕಸದಿಂದ ರಸವನ್ನು ಮಾಡುವಲ್ಲಿ ಅವರು ಮೇಲುಗೈ ಸಾಧಿಸಿದ್ದಾರೆ.

ಏಕೀಕರಣದ ಬಗ್ಗೆ ಎಂ.ಆರ್.ಲಕ್ಷ್ಮಮ್ಮನವರ ಚಿಂತನೆಗಳು

ಪ್ರಾಚೀನ ಕಾಲದಿಂದಲೂ ಕನ್ನಡನಾಡಿನ ಬಗ್ಗೆ ಹಲವು ಉಲ್ಲೇಖಗಳಿದ್ದಾಗ್ಯೂ ಕನ್ನಡ ಮಾತನಾಡುವ ಪ್ರದೇಶಗಳು ಹರಿದು ಹಂಚಿ ಹೋಗಿದ್ದು, ಹಲವು ಮಹನೀಯರು ಕನ್ನಡ ನಾಡಿನ ಏಕೀಕರಣಕ್ಕಾಗಿ ಶ್ರಮಿಸಿದರು. ಕನ್ನಡ ನಾಡು ಹಲವಾರು ಭಾಗಗಳಲ್ಲಿ ಹಂಚಿಹೋಗಿತ್ತು. ಮುಂಬೈ, ಹೈದರಾಬಾದ್, ಮದ್ರಾಸ್, ಸಂಸ್ಥಾನಗಳಲ್ಲಿ ಅಲ್ಲದೆ ಕರ್ನಾಟಕದಲ್ಲಿ ಮೈಸೂರು ಸಂಸ್ಥಾನ ಕೊಡಗು, ಮಧೋಳ ಮುಂತಾದ ಅನೇಕ ಸಣ್ಣಪುಟ್ಟ ಸಂಸ್ಥಾನಗಳಲ್ಲಿ ವಿಭಾಗವಾಗಿದ್ದ ಕನ್ನಡನಾಡು ನಂತರದ ಕಾಲದಲ್ಲಿ ಒಂದುಗೂಡಲು ಸಾಕಷ್ಟು ಶ್ರಮಿಸಬೇಕಾಯಿತು. ಸ್ವಾತಂತ್ರ್ಯ ನಂತರ ಮೊಟ್ಟ ಮೊದಲ ಭಾಷಾವಾರು ಪ್ರಾಂತ್ಯವಾಗಿ ಆಂಧ್ರಪ್ರದೇಶ ರಚನೆಯಾಯಿತು. ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದ ಬಳ್ಳಾರಿಯನ್ನು ಕರ್ನಾಟಕಕ್ಕೆ ಸೇರಿಸಬೇಕೆ ಅಥವಾ ಆಂಧ್ರಪ್ರದೇಶಕ್ಕೆ ಸೇರಿಸಬೇಕೆ ಎಂಬ ಸಮಸ್ಯೆ ಉಂಟಾಗಿ ಬಳ್ಳಾರಿ ಸೇರಿದಂತೆ ಅನೇಕ ತಾಲ್ಲೂಕುಗಳನ್ನು ಮೈಸೂರು ರಾಜ್ಯಕ್ಕೆ 1953ರಲ್ಲಿ ಸೇರಿಸಲಾಯಿತು. ಬಳ್ಳಾರಿ ಮೈಸೂರು ರಾಜ್ಯಕ್ಕೆ ಸೇರ್ಪಡೆಯಾದ ಬಗ್ಗೆ ಮಾತನಾಡುತ್ತಾ, ಎಂ.ಆರ್.ಲಕ್ಷ್ಮಮ್ಮನವರು ಕನ್ನಡ ಮಾತಾನಾಡುವ ಪ್ರದೇಶಗಳಾದ ಬಳ್ಳಾರಿ ಸೇರಿದಂತೆ 7 ತಾಲ್ಲೂಕುಗಳು ಮೈಸೂರು ರಾಜ್ಯಕ್ಕೆ ಸೇರ್ಪಡೆಗೊಂಡಿರುವುದು ಸಂತೋಷ. ಆದರೆ ಆಲೂರು, ಅದೋನಿ, ಮಡಕಸಿರಾಗಳನ್ನು ಕರ್ನಾಟಕಕ್ಕೆ ಸೇರಿಸಬೇಕಾಗಿತ್ತು ಎಂದು ಏಕೀಕರಣವನ್ನು ಸ್ವಾಗತಿಸಿದರು.

ಹಳೇ ಮೈಸೂರು ಪ್ರಾಂತ್ಯದ ಕೆಲವು ಮುಖಂಡರು ಅಭಿವೃದ್ಧಿಗೊಂಡ ಮೈಸೂರು ರಾಜ್ಯಕ್ಕೆ ಇತರ ಪ್ರಾಂತ್ಯಗಳು ಸೇರ್ಪಡೆಗೊಳ್ಳುವುದನ್ನು ವಿರೋಧಿಸಿದರು ಕೂಡ ಎಂ.ಆರ್. ಲಕ್ಷಮ್ಮನವರು ಕರ್ನಾಟಕ ಏಕೀಕರಣಗೊಳ್ಳಬೇಕು ಎಂಬ ನಿಲುವನ್ನು ತಾಳಿದರು.

ಜೆ.ವಿ.ಪಿ. ಸಮಿತಿ ಮತ್ತು ಧಾರ್ ಸಮಿತಿಯ ವರದಿಯನ್ನು ಜಾರಿಗೆ ತಂದು ಭಾಷಾವಾರು ಪ್ರಾಂತ್ಯವನ್ನು ರಚಿಸಬೇಕು. ಹೈದ್ರಾಬಾದ್ ಕರ್ನಾಟಕದಲ್ಲೂ ಅಭಿವೃದ್ಧಿಯಾಗಿಲ್ಲ. ಹಾಗೆಯೇ ಮದ್ರಾಸ್ ಪ್ರಾಂತ್ಯದ ಕರ್ನಾಟಕ ಅಭಿವೃದ್ಧಿಯಾಗಿಲ್ಲ. ಆದರೆ ಆಯಾಯ ಪ್ರದೇಶಗಳು ತಮ್ಮದೇ ಆದ ವೈಶಿಷ್ಟ್ಯತೆಗಳನ್ನು ಹೊಂದಿದ್ದು, ಮೈಸೂರು ರಾಜ್ಯಕ್ಕೆ ಸೇರ್ಪಡೆಯಾದರೇ ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ಆಶಾವಾದಿಯಾಗಿರಬೇಕು. ಬೀದರ್ ಜಿಲ್ಲೆಯಲ್ಲಿ ದಿಯೋನಿ ಪಶುತಳಿಗಳು ಲೋಕ ಪ್ರಸಿದ್ಧಿಯಾಗಿದ್ದು, ಹೈದರಾಬಾದ್ ಕರ್ನಾಟಕದಲ್ಲಿ ಸಣ್ಣಪುಟ್ಟ ಕೈಗಾರಿಕೆಗಳು ಮುಂದುವರೆದಿವೆ. ನೀರಾವರಿ ಯೋಜನೆಗಳು, ಖನಿಜ ಸಂಪತ್ತು, ಚಿನ್ನದ ಗಣಿಗಳು, ಸಿಮೆಂಟ್ ಕೈಗಾರಿಕೆಗೆ ಬೇಕಾದ ಸರಕುಗಳು ಎಲ್ಲವೂ ಇದೆ.

ಗುಲ್ಬರ್ಗಾದಲ್ಲಿ ಬಟ್ಟೆ ಕೈಗಾರಿಕೆ ಇದೆ. ಕರ್ನಾಟಕದ ಏಕಿಕರಣವಾದರೇ ಅಲ್ಲಿನ ಸಂಪತ್ತು ಎಷ್ಟಿದೆ ಎಂಬುದು ನಮಗೆ ತಿಳಿಯುತ್ತದೆ. ಉತ್ತರ ಕನ್ನಡದಲ್ಲಿ ಸಮುದ್ರ ಇರುವುದರಿಂದ ಮೀನುಗಾರಿಕೆಗೆ ಅವಕಾಶವಿದೆ. ಮೀನನ್ನು ಆಹಾರವಾಗಿ ಬಳಸುವುದರ ಜೊತೆಗೆ ರಫ್ತು ಮಾಡುವುದೊಂದು ಸರಕಾಗಿದ್ದು, ಮತ್ಸ್ಯೋದ್ಯಮ ಅಭಿವೃದ್ಧಿ ಪಡಿಸಿದರೆ ರಾಜ್ಯದ ಆದಾಯ ಹೆಚ್ಚಾಗಲಿದೆ. ಉತ್ತರದಲ್ಲಿ ತೆಂಗು ಭತ್ತ ಗೋಡಂಬಿಗಳನ್ನು ಹೆಚ್ಚಾಗಿ ಬೆಳೆಯುತ್ತಿದ್ದು, ಅವೆಲ್ಲಾ ಸಂಪತ್ತು ಕರ್ನಾಟಕಕ್ಕೆ ಸೇರಬೇಕಾಗಿದೆ. ಏಕೀಕರಣದಿಂದ ಭಟ್ಕಳ, ಮಲ್ಪೆ ಮುಂತಾದ ನೈಸರ್ಗಿಕ ಬಂದರುಗಳು ನಮ್ಮದಾಗುತ್ತವೆ. ಬಿಜಾಪುರದಲ್ಲಿ ಬೆಳೆಯುವ ಆಹಾರ ಸಾಮಾಗ್ರಿಗಳನ್ನು ರಫ್ತು ಮಾಡಬಹುದು. ಪ್ರಕೃತಿ ಸಂಪತ್ತಿನ ದೃಷ್ಟಿಯಿಂದ ಮಾತ್ರವಲ್ಲ ಭಾಷಾ ದೃಷ್ಠಿಯಿಂದ ಭಾಷಾವಾರು ಪ್ರಾಂತ್ಯದ ರಚನೆ ಅಗತ್ಯವಾಗಿದ್ದು, ಒಂದೇ ಭಾಷೆ ಮಾತನಾಡುವ ಜನ ಒಟ್ಟಿಗೆ ಇದ್ದರೆ ಉತ್ತಮ ಆಡಳಿತ ನಡೆಸಿ ಸುಖೀರಾಜ್ಯ ಕಲ್ಪನೆಯನ್ನು ಸಾಕಾರಗೊಳಿಸಬಹುದು.

ಮಹಾರಾಷ್ಟ್ರ, ಗುಜರಾತ್ ರಾಜ್ಯ ನಿರ್ಮಾಣವಾಗಿ 3 ಕೋಟಿ ಕನ್ನಡಿಗರು ಒಂದಾಗಬೇಕು. 1947–48 ರಲ್ಲಿಯೇ ಮುದವೀಡುಕೃಷ್ಣರಾಯರು, ಕೆ.ವಿ.ಪುಟ್ಟಪ್ಪನವರು ಭಾಷಾವಾರು ಪ್ರಾಂತ್ಯ ರಚನೆಯನ್ನು ವಿರೋಧಿಸುವವರಿಗೆ ಬದಲಾವಣೆ ಅನಿವಾರ್ಯವಾದದ್ದು, ನಾವು ಒಪ್ಪಿಕೊಳ್ಳಲು ಸಿದ್ದರಿರಬೇಕು ಎಂಬ ಮಾತನ್ನು ಹೇಳುತ್ತಾರೆ. ಪ್ರಾಥಮಿಕ ವಿದ್ಯಾಭ್ಯಾಸ ಮಾತೃಭಾಷೆಯಲ್ಲಿ ನೀಡಬೇಕು. ಬೆಂಗಳೂರಿನಲ್ಲಿ ತೆಲುಗು ಭಾಷೆ ಮಾತನಾಡುವವರು ಕೂಡ ಇದ್ದಾರೆ. ಆದರೂ ಬೆಂಗಳೂರು, ಮೈಸೂರು ರಾಜ್ಯದ ಭಾಗವಾಗಿದೆ. ಆದರೂ ತೆಲುಗು ಮಾತನಾಡುವಂತಹ ಹೈದ್ರಾಬಾದ್ ಕರ್ನಾಟಕದ ವಿಲೀನವನ್ನು ಏಕೆ ತಡೆಯುತ್ತೀರಿ? ಕನ್ನಡಿಗರು ಸ್ನೇಹ ಸೌಹಾರ್ದದಿಂದ ಬಾಳುತ್ತಿದ್ದು, ಎಲ್ಲರೂ ತಮ್ಮ ತಮ್ಮ ವೈಷಮ್ಯವನ್ನು ಮರೆತು ಒಂದಾಗಬೇಕು. ನಮ್ಮ ದೇಶ ಜಾತ್ಯಾತೀತ ರಾಷ್ಟ್ರವಾಗುತ್ತಿದೆ. ಕರ್ನಾಟಕ ಪ್ರಾಂತ್ಯ ರಚನೆಯಲ್ಲಿ ಮತೀಯ ಭಾವನೆ ಬರಬಾರದು ಪ್ರಾಂತ್ಯ ಪುನರ್ವಿಂಗಡನೆ ಆಗಬೇಕೆಂದು ಎಂ.ಆರ್. ಲಕ್ಷ್ಮಮ್ಮನವರ ಚಿಂತನೆಯಾಗಿದೆ.

ಸಮಾಜ ಸುಧಾರಣೆಯ ಬಗ್ಗೆ ಎಂ.ಆರ್. ಲಕ್ಷ್ಮಮ್ಮನವರ ಚಿಂತನೆಗಳು

ಎಂ.ಆರ್.ಲಕ್ಷಮ್ಮನವರು ರಾಜಕೀಯ ಕ್ಷೇತ್ರಕ್ಕೆ ಬರುವ ಮೊದಲು ಮೂಲತಃ ಸಮಾಜ ಸುಧಾರಕಿಯಾಗಿದ್ದರು. ಸಮಾಜ ಸುಧಾರಣೆಯ ಬಗ್ಗೆ ವಿಶೇಷ ಒಲವನ್ನಿಟ್ಟುಕೊಂಡಿದ್ದರು ಉತ್ತಮ ಸಮಾಜ ನಿರ್ಮಾಣದ ಬಗ್ಗೆ ಹಲವಾರು ಚಿಂತನೆಗಳನ್ನು ಇಟ್ಟುಕೊಂಡಿದ್ದರು. ಪಾನನಿರೋಧ ಜಾರಿ ಮಾಡಿ ಸಮಾಜ ಸುಧಾರಣೆ ಕೆಲಸವನ್ನು ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಪಾನನಿರೋಧವನ್ನು ಕಾನೂನಿನ ಮೂಲಕ ಜಾರಿಗೆ ತರುವ ಬದಲು ಸಮಾಜ ಸುಧಾರಣೆಯ ಮೂಲಕ ಯಶಸ್ವಿಯಾಗಿ ಜಾರಿಗೆ ತರಬಹುದು. ಸಮಾಜ ಸುಧಾರಣಾ ಸಂಸ್ಥೆಗಳ ಮೂಲಕ ಪಾನ ನಿರೋಧದ ಯೋಜನೆಯನ್ನು ಜಾರಿಗೊಳಿಸಬಹುದು. ಪಾನನಿರೋಧ ಯಶಸ್ವಿಯಾಗಬೇಕಾದರೆ ಜನರಲ್ಲಿ ಅರಿವನ್ನುಂಟುಮಾಡಬೇಕು. ಅವರ ಮನ ಪರಿವರ್ತನೆ ಮಾಡಲು ಪಾನ ನಿರೋಧ ಬಗೆ ಹೆಚ್ಚು ಪ್ರಚಾರವಾಗಬೇಕು. ವಿನೋಭಾ ಭಾವೆಯವರು ಹೇಳಿದಂತೆ, **'ಪಾನನಿರೋಧ ಯಶಸ್ವಿಯಾಗಬೇಕಾದರೆ ಪ್ರಚಾರದಿಂದಲೇ ಹೊರತು, ಸರ್ಕಾರದಿಂದಲ್ಲ'** ಎಂಬುದನ್ನು ಸರ್ಕಾರ ಮನಗಾಣಬೇಕು ಎಂದು ಎಂ.ಆರ್.ಲಕ್ಷ್ಮಮ್ಮನವರು ಹೇಳಿದರು. ಅವರು ಮಾಡಿದ ಭಾಷಣಗಳನ್ನು, ಚರ್ಚೆಗಳನ್ನು ಗಮನಿಸಿದಾಗ ಎಲ್ಲಾ ವಿಚಾರಗಳ ಬಗ್ಗೆಯೂ ವಿಶೇಷ ಜ್ಞಾನವನ್ನು ಹೊಂದಿದ್ದು, ಉತ್ತಮ ಸಮಾಜ ನಿರ್ಮಾಣದ ಬಗ್ಗೆ ಚಿಂತನೆ ಮಾಡಿದ್ದಾರೆ.

ವಿಧಾನ ಪರಿಷತ್ ಸದಸ್ಯರಾಗಿ ಎಂ.ಆರ್.ಲಕ್ಷ್ಮಮ್ಮ (1958–1964)

ಎಂ.ಆರ್.ಲಕ್ಷಮ್ಮನವರು ಮೈಸೂರು ಪದವೀಧರ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿ ಬಹುಮತದಿಂದ ಆಯ್ಕೆಯಾಗಿ 1958ರಲ್ಲಿ ವಿಧಾನ ಪರಿಷತ್ ಸದಸ್ಯರಾದರು. ವಿಧಾನ ಪರಿಷತ್‌ನಲ್ಲಿ ಪದವೀಧರರಿಗೆ 2 ಸ್ಥಾನಗಳಿದ್ದು, ಎಂ.ಆರ್.ಲಕ್ಷಮ್ಮನವರು ಒಬ್ಬರಾಗಿ ಆಯ್ಕೆಯಾದರು. ಮೈಸೂರು ಪ್ರದೇಶ ಕಾಂಗ್ರೆಸ್‌ನ ಮಹಿಳಾ ಘಟಕದ ಸಂಚಾಲಕಿಯಾಗಿ 4 ವರ್ಷಗಳ ಕಾಲ ಸೇವೆ ಸಲ್ಲಿಸಿದರು. 1962ರಲ್ಲಿ ಚಿತ್ರದುರ್ಗ ಜಿಲ್ಲೆಯಿಂದ ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕಾಂಗ್ರೆಸ್ ಪಕ್ಷದ ಶಾಸಕಾಂಗ ಸಭೆಯು ಐವರು ಸದಸ್ಯರ ಸಮಿತಿಯನ್ನು ಆಯ್ಕೆ ಮಾಡಿದ್ದು ಅದರ ಸಂಚಾಲಕರಾಗಿ ಕಾರ್ಯನಿರ್ವಹಿಸಿದರು.[39] ಮೈಸೂರು ಪ್ರದೇಶ ಕಾಂಗ್ರೆಸ್ ಪಕ್ಷದ ಪದನಿಮಿತ್ತ ಸದಸ್ಯೆಯಾಗಿ 4 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯೆಯಾಗಿ ಪಕ್ಷದ ಪ್ರಚಾರ ಭಾಷಣಗಳನ್ನು ಮಾಡಿ ಪಕ್ಷದ ಸಂಘಟನೆಯಲ್ಲಿ 2 ವರ್ಷಗಳ ಕಾಲ ತಮ್ಮನ್ನು ತೊಡಗಿಸಿಕೊಂಡರು. 1962 ರಿಂದ 1964 ರವರೆಗೆ ಮೈಸೂರು ವಿಧಾನ ಪರಿಷತ್ತಿನ ಉಪಸಭಾಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಇವರು ವಿಧಾನ ಪರಿಷತ್ತಿನಲ್ಲಿ ನಡೆಸಿದ ಚರ್ಚೆಗಳು ಭಾಷಣಗಳು ಅವರ ಸೇವಾ ಮನೋಭಾವವನ್ನು ಮತ್ತು ಉತ್ತಮ ರಾಜಕೀಯ ಪಟು ಎಂಬುದನ್ನು ಸಾಬೀತುಪಡಿಸುತ್ತದೆ.

ಶಿಕ್ಷಣದ ಬಗ್ಗೆ ಎಂ.ಆರ್.ಲಕ್ಷಮ್ಮನವರ ಚಿಂತನೆಗಳು

ಶಿಕ್ಷಣದ ಬಗ್ಗೆ ಪ್ರಾರಂಭದಿಂದಲೂ ಕಾಳಜಿ ಇದ್ದಂತಹ ಇವರು ಎಂ.ಎ. ಪದವೀಧರರಾದ ಪ್ರಾರಂಭದಲ್ಲಿಯೇ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಕೆಲಸ ನಿರ್ವಹಿಸುತಿದ್ದರು. ರಾಜ್ಯದಲ್ಲಿ ಮಹಿಳೆಯರ ಮತ್ತು ಪುರುಷರ ಸಾಕ್ಷರತೆ ಪ್ರಮಾಣದ ಬಗ್ಗೆ ಪ್ರಶ್ನಿಸಿದ ಲಕ್ಷಮ್ಮನವರು ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯ ವಿದ್ಯಾಭ್ಯಾಸಕ್ಕೆ ಯಾವ ವಿಶೇಷ ಸವಲತ್ತುಗಳನ್ನು ನೀಡಲಾಗಿದೆ ಎಂಬುದರ ಬಗ್ಗೆ ಶಿಕ್ಷಣ ಸಚಿವರಾದ ಅಣ್ಣಾರಾವ್ ಗಣಮುಖಿಯವರನ್ನು ಪ್ರಶ್ನಿಸಿದರು. ಹೆಣ್ಣುಮಕ್ಕಳಿಗೆ ವಿಶೇಷ ಶಿಷ್ಯವೇತನ ಶುಲ್ಕ ವಿನಾಯಿತಿಯನ್ನು, ಮಹಿಳಾ ಶಿಕ್ಷಕಿಯರಿಗೆ ವಸತಿ ನಿಲಯಗಳನ್ನು ಸರ್ಕಾರದ ವತಿಯಿಂದ ನೀಡಲಾಗಿದ್ದು, ಸ್ತ್ರೀಯರ ವಿದ್ಯಾಭ್ಯಾಸದ ಬಗ್ಗೆ ಗಮನ ನೀಡಲಾಗಿದೆ ಎಂಬ ಉತ್ತರವನ್ನು ಪಡೆದರು. ಕಡ್ಡಾಯ ಶಿಕ್ಷಣವನ್ನು ಸರ್ಕಾರ ಜಾರಿಗೊಳಿಸಬೇಕು, ಗ್ರಾಮೀಣಭಾಗದಲ್ಲಿ ಮಲೆನಾಡಿನ ಭಾಗಗಳಲ್ಲಿ ಕೆಲಸ ಮಾಡುವ ಶಿಕ್ಷಕಿಯರಿಗೆ ಭತ್ಯೆಗಳನ್ನು ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.[40]

ಸರ್ಕಾರವು ಶಾಲೆಗಳಲ್ಲಿ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಯೋಜನೆಯನ್ನು ಕೈಗೊಳ್ಳಲಾಗಿದೆಯೇ? ಸರ್ಕಾರ ಅದಕ್ಕಾಗಿ ಮಾಡಿರುವ ಖರ್ಚುವೆಚ್ಚವೆಷ್ಟು? ಬಿಸಿಯೂಟದ ಕಾರ್ಯಕ್ರಮದ ನಂತರ ಶಾಲೆಗಳಲ್ಲಿ ಮಕ್ಕಳ ಹಾಜರಾತಿ ಸಂಖ್ಯೆಯಲ್ಲಿ ಏರಿಕೆಯಾಗಿದೆಯೆ? ಎಂದು ಪ್ರಶ್ನಿಸಿದ್ದಾರೆ. ಬಡತನದಲ್ಲಿರುವವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಮತ್ತು ಅವರಿಗೆ ಮಧ್ಯಾಹ್ನದ ಉಪಹಾರ ನೀಡುವ ಬಗ್ಗೆ ಅಂದೇ ಯೋಚಿಸಿದವರು ಎಂ.ಆರ್.ಲಕ್ಷಮ್ಮನವರು. ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ಹೆಣ್ಣುಮಕ್ಕಳ ಶೈಕ್ಷಣಿಕ ಸುಧಾರಣೆ ಬಗ್ಗೆ ಗಮನ ಹರಿಸಲು ಮಹಿಳಾ ಜಂಟಿ ನಿರ್ದೇಶಕರನ್ನು ಮತ್ತು ಸಹಾಯಕ ನಿರ್ದೇಶಕರನ್ನು ಶಿಕ್ಷಣ ಇಲಾಖೆಗೆ ನೇಮಿಸಬೇಕು. ಹೈದರಾಬಾದ್ ಕರ್ನಾಟಕದಲ್ಲಿ ಮಹಿಳೆಯರ ಸಾಕ್ಷರತೆ ಕಡಿಮೆ ಇದೆ. ಆದರೆ ಕೇರಳ ಮದ್ರಾಸ್ ಮುಂಬೈಗಿಂತ ಮೈಸೂರು ರಾಜ್ಯದಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಮಟ್ಟ ಹೆಚ್ಚಾಗಿದ್ದು ಮಹಿಳಾ ಅಧಿಕಾರಿಯನ್ನು ನೇಮಿಸಿದರೆ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತದೆ.

ಮೀಸಲಾತಿ ನಿಯಮದ ಬಗ್ಗೆ ಎಂ.ಆರ್.ಲಕ್ಷಮ್ಮನವರ ಚಿಂತನೆಗಳು

ಸಂವಿಧಾನದಲ್ಲಿ ದಲಿತರಿಗೆ ಮೀಸಲಾತಿಯನ್ನು ನೀಡಲಾಗಿದ್ದರೂ ಕೂಡ ಇನ್ನೂ ಸಾಮಾಜಿಕ ಸಮಾನತೆ ಸಾಧಿಸಲು ಸಾಧ್ಯವಾಗಿಲ್ಲ. ರಾಜ್ಯಾಂಗದ 334ನೇ ಕಾಯ್ದೆ ಪ್ರಕಾರ 8ನೇ ತಿದ್ದುಪಡಿ ಮಾಡಿ ಮೀಸಲಾತಿ ನಿಯಮವನ್ನು 10 ವರ್ಷಕ್ಕೆ ಬದಲಾಗಿ 20 ವರ್ಷಕ್ಕೆ ವಿಸ್ತರಿಸಲಾಗಿದ್ದು, ಮೂಲತತ್ವದಲ್ಲಿ ಬದಲಾವಣೆಯಾಗಿಲ್ಲ.

ಸ್ವಾತಂತ್ರ್ಯ ಬಂದು 12 ವರ್ಷಗಳಲ್ಲಿ ಅಸಮಾನತೆ ಕಡಿಮೆಯಾಗಿದ್ದು ಹರಿಜನರಿಗೆ ಇನ್ನೂ ಅನೇಕ ಸೌಲಭ್ಯಗಳನ್ನು ನೀಡಬೇಕು. ಅಮೇರಿಕದಂತಹ ಮುಂದುವರಿದ ರಾಷ್ಟ್ರದಲ್ಲಿ ವರ್ಣಭೇದ ನೀತಿ ಜಾರಿಯಲ್ಲಿರುವುದನ್ನು ಕಾಣಬಹುದು. ಹಾಗೆಯೇ ಆಫ್ರಿಕಾದಲ್ಲಿ ಕೂಡ ವರ್ಣಭೇದ ನೀತಿ ಇದೆ. ಆದರೆ ಭಾರತದಲ್ಲಿ ಅಸಮಾನತೆ ಕಡಿಮೆಯಾಗಿದ್ದು ಸುಧಾರಣೆಯತ್ತ ಸಾಗುತ್ತಿದ್ದು, ಕಡ್ಡಾಯ ಶಿಕ್ಷಣ ಜಾರಿಗೆ ಬಂದು 11 ವರ್ಷದ ಎಲ್ಲ ಮಕ್ಕಳಿಗೆ ವಿದ್ಯಾಭ್ಯಾಸ ದೊರಕಿದರೆ ಸಾಮಾಜಿಕ ನ್ಯಾಯ ಸಿಗುತ್ತದೆ. ದಲಿತರಿಗೆ ಪ್ರತ್ಯೇಕ ವಸತಿ ನಿಲಯಗಳನ್ನು ಸ್ಥಾಪಿಸುವುದರ ಬದಲು ಎಲ್ಲ ವರ್ಗಗಳ ಪಂಗಡಗಳ ವಿದ್ಯಾರ್ಥಿಗಳು ಒಂದೇ ವಸತಿ ನಿಲಯದಲ್ಲಿದ್ದು ವ್ಯಾಸಂಗ ಮಾಡುವಂತಹ ಏರ್ಪಾಡನ್ನು ಮಾಡಬೇಕು.

ಕೋಲಾರ ಜಿಲ್ಲೆಯ ಒಂದು ಹಳ್ಳಿಯಲ್ಲಿ ಶಿಶುವಿಹಾರವನ್ನು ರಾಮಮಂದಿರದಲ್ಲಿ ನಡೆಸುತ್ತಿದ್ದು, ಹರಿಜನರ ಮಕ್ಕಳಿಗೆ ಅವಕಾಶ ನೀಡುತ್ತಿಲ್ಲವೆಂದು ಸವರ್ಣೀಯರು ತಡೆಯೊಡ್ಡಿರುವುದು ಕಂಡು ಬಂದಿದೆ. ಸಮಾಜದಲ್ಲಿ ಈ ರೀತಿಯ ಮನೋಭಾವನೆ ಇದ್ದರೆ ಹತ್ತಲ್ಲ 20 ವರ್ಷವಾದರೂ ಹರಿಜನರ ಉದ್ದಾರ ಸಾಧ್ಯವಿಲ್ಲ.[42] ಸರ್ಕಾರದಿಂದ ಹರಿಜನರಿಗೆ ವಾಸಗೃಹಗಳನ್ನು ಊರಿನಿಂದ ದೂರದ ಸ್ಥಳದಲ್ಲಿ ನಿರ್ಮಾಣ ಮಾಡುವ ಪದ್ಧತಿ ಇದ್ದು ಅವರು ಮತ್ತು ಅವರ ಮಕ್ಕಳು ಜನರಿಂದ ದೂರವಿರಬೇಕು ಎಂಬ ಮನೋಭಾವನೆ ಇದ್ದು ಕನಿಷ್ಠ ವೇತನ ಸಮಿತಿಯ ಶಿಫಾರಸ್ಸಿನ ಪ್ರಕಾರ ಅವರು ಕೂಡ ಎಲ್ಲರ ಜೊತೆಯಲ್ಲಿ ವಾಸ ಮಾಡಬೇಕು. ಇದರಿಂದ ಸಮಾಜದಲ್ಲಿರುವ ಅಂತರ ಕಡಿಮೆಯಾಗಿ ಹರಿಜನ ಮತ್ತು ಗಿರಿಜನ ಏಳಿಗೆ ಸಾಧ್ಯ.

ಕೇವಲ ಅಸ್ಪೃಶ್ಯತಾ ನಿವಾರಣೆ ಕಾಯ್ದೆಯಿಂದ ಮತ್ತು ಸಹಭೋಜನದಿಂದ ಸಮಾನತೆ ಬರುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಮಹಿಳಾ ಸಮಾಜಗಳಲ್ಲಿ ವಿದ್ಯಾರ್ಥಿ ನಿಲಯಗಳಲ್ಲಿ ಹರಿಜನರ ಮಕ್ಕಳನ್ನು ಸವರ್ಣೀಯರು ತಮ್ಮ ಮಕ್ಕಳೊಂದಿಗೆ ಇದ್ದುಕೊಂಡು ಬೆಳೆಸಬೇಕು. ಆಗ ಮಾತ್ರ ಜಾತೀಯತೆ ಅಳಿಯುತ್ತದೆ. ಸಾಮಾನ್ಯರ ಚುನಾವಣಾ ಕ್ಷೇತ್ರದಿಂದ ಹರಿಜನರು ಮತ್ತು ಸ್ತ್ರೀಯರು ಸ್ಪರ್ಧಿಸಿದರೆ ಅಸಮಾನತೆ ಅಳಿದು ಹೆಚ್ಚು ಹೆಚ್ಚು ಅವಕಾಶಗಳು ಕಲ್ಪಿತವಾಗಿ ಮೀಸಲಾತಿ ತಾನಾಗಿಯೇ ಮಾಯವಾಗುತ್ತದೆ. ಉದಾಹರಣೆಗೆ ಕೇರಳದಲ್ಲಿ ಹರಿಜನರ ಸಮಸ್ಯೆ ಅಷ್ಟು ತೀವ್ರವಾಗಿಲ್ಲದಿದ್ದರೂ, ಸಾಮಾನ್ಯ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ದಿಸುವುದಾಗಿ ಒಬ್ಬ ಅಭ್ಯರ್ಥಿ ಘೋಷಿಸಿದ್ದಾನೆ. ಹೀಗೆ ಮಾಡಿದರೆ ವಿರಸ ತಾನಾಗಿಯೇ ಮಾಯವಾಗುತ್ತದೆ. ಮುಂದಿನ ಹತ್ತು ವರ್ಷಗಳಲ್ಲಿ ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಎಲ್ಲರೂ ಒಂದಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳೋಣ.

ಮೀಸಲಾತಿ ನಿಯಮದ ಪ್ರಕಾರ ಸರ್ಕಾರಿ ನೌಕರಿಯಲ್ಲಿ ಹಿಂದುಳಿದ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಿಂದುಳಿದ ವರ್ಗದವರೆಂದರೆ ಆರ್ಥಿಕವಾಗಿ ಹಿಂದುಳಿದ ವರ್ಗದವರೇ ಅಥವಾ ಸಾಮಾಜಿಕವಾಗಿ ಹಿಂದುಳಿದ ವರ್ಗದವರೇ ಅಥವಾ ವಿದ್ಯೆಯಲ್ಲಿ ಹಿಂದುಳಿದ ವರ್ಗದವರೇ ಎಂಬುದರ ಬಗ್ಗೆ ಚರ್ಚೆಯಾಗಬೇಕಿದೆ. ಸಾಹಿತಿಕವಾಗಿ ಆಲೋಚಿಸಿದಾಗ ಹಿಂದುಳಿದ ವರ್ಗದಲ್ಲಿ ಮಹಿಳೆಯರು ಕೂಡ ಸೇರುತ್ತಾರೆ. 1918ರ ಮಿಲ್ಲರ್ ಸಮಿತಿಯ ನಂತರ ಸರ್ಕಾರ ಯಾವುದೇ ಸಮಿತಿಯ ನೇಮಕ ಮಾಡಿಲ್ಲದಿರುವುದರಿಂದ ಇನ್ನೊಂದು ಸಮಿತಿಯನ್ನು ನೇಮಕಮಾಡಬೇಕು.[42] ಹಿಂದುಳಿದ ವರ್ಗ ಎಂಬುದನ್ನು ಸ್ಪಷ್ಟವಾಗಿ ಗುರುತಿಸಬೇಕು. ಅದರಲ್ಲಿ ಬೇಡರು, ಗೊಲ್ಲರು, ಬೆಸ್ತರು ಮುಂತಾದ ವರ್ಗಗಳು ನಿಜವಾಗಿಯೂ ಹಿಂದುಳಿದಿದ್ದು ಅವರಿಗೆ ಮೀಸಲಾತಿಯನ್ನು ಕಲ್ಪಿಸಬೇಕು. ಹಿಂದುಳಿದ ವರ್ಗ ಎಂದರೆ ಆರ್ಥಿಕವಾಗಿ ಹಿಂದುಳಿದವರನ್ನು ಗಮನದಲ್ಲಿಟ್ಟು ನೋಡಬೇಕು. ಕರ್ನಾಟಕ ಲೊಕಸೇವಾ ಆಯೋಗದವರು ಬಡ್ತಿಯನ್ನು ನೀಡುವಾಗ ಅರ್ಹತೆಯುಳ್ಳ ಹಿರಿಯ ನೌಕರರಿಗೆ ನೀಡಬೇಕು. ಲೋಕಸೇವಾ ಆಯೋಗದಲ್ಲಿ ಮಹಿಳಾ ಸದಸ್ಯರಿಗೂ ಪ್ರಾತಿನಿಧ್ಯತೆ ನೀಡಬೇಕೆಂಬುದು ಎಂ.ಆರ್.ಲಕ್ಷಮ್ಮನವರ ನಿಲುವಾಗಿದೆ.

ಮೈಸೂರು ನಗರದ ಅಭಿಮಾನಿಯಾಗಿ ಎಂ.ಆರ್.ಲಕ್ಷಮ್ಮನವರು

ಬಾಲ್ಯದಿಂದಲೂ ಮೈಸೂರಿನಲ್ಲಿ ಬೆಳೆದ ಎಂ.ಆರ್.ಲಕ್ಷಮ್ಮನವರ ವಿದ್ಯಾಭ್ಯಾಸ ಮೈಸೂರಿನಲ್ಲಿ ನಡೆಯಿತು. ಮೈಸೂರಿನವರಾದ ಎಂ.ನಾರಾಯಣಮೂರ್ತಿಯವರನ್ನು ವಿವಾಹವಾದ ಮೇಲೆ ಮೈಸೂರು ಅವರ ಸ್ಥಳವಾಯಿತು. ಈ ಹಿನ್ನೆಲೆಯಲ್ಲಿ ಮೈಸೂರು ನಗರದ ಸೌಂದರ್ಯ ಮತ್ತು ಮೈಸೂರಿನಲ್ಲಿ ದೊರೆಯುವ ವಿಶೇಷ ವಸ್ತುಗಳ ಬಗ್ಗೆ ತಮ್ಮ ಅಭಿಮಾನವನ್ನು ವ್ಯಕ್ತಪಡಿಸಿದ್ದಾರೆ. ಮೈಸೂರಿನಲ್ಲಿ ದೊರೆಯುವ ಹೂವುಗಳು ಪರಿಮಳಮುಕ್ತವಾಗಿದ್ದು, ಮೈಸೂರಿನಲ್ಲಿ ಸುಗಂಧ ಕಾರ್ಖಾನೆಯನ್ನು ಪ್ರಾರಂಭಿಸಬೇಕು. ಎಂ.ಆರ್.ಲಕ್ಷಮ್ಮನವರು ಅಮೇರಿಕಾ ದೇಶಕ್ಕೆ ಭೇಟಿ ನೀಡಿದ್ದಾಗ ಮೈಸೂರಿನ ಗಂಧದಕಡ್ಡಿಯನ್ನು ಅಲ್ಲಿಯವರಿಗೆ ಉಡುಗೊರೆಯ ರೂಪದಲ್ಲಿ ನೀಡಿದ್ದರು.

ಮೈಸೂರಿನ ಗಂಧದಕಡ್ಡಿಯ ಪರಿಮಳ ಜಗತ್ಪ್ರಸಿದ್ಧವಾಗಿದ್ದು, ಮೈಸೂರಿನಲ್ಲಿ ಗಂಧದಕಡ್ಡಿಯ ಕೈಗಾರಿಕೆಯನ್ನು ಸ್ಥಾಪಿಸಬೇಕು. ಮೈಸೂರಿನಲ್ಲಿ ಬೈಸಿಕಲ್ ಕಾರ್ಖಾನೆ, ಗೊಂಬೆ ತಯಾರಿಸುವ ಕಾರ್ಖಾನೆಗಳನ್ನು ಸ್ಥಾಪಿಸಬೇಕು. ಆಹಾರ ಸಂಶೋಧನಾಲಯ ಕೇಂದ್ರಗಳು ತಯಾರು ಮಾಡುವಂತಹ ವಿಟಮಿನ್‌ಯುಕ್ತ ಬಿಸ್ಕೆಟ್‌ಗಳನ್ನು ಸರ್ಕಾರವೇ ತಯಾರು ಮಾಡುವಂತಹ ಕೈಗಾರಿಕೆಗಳನ್ನು ಪ್ರಾರಂಭಿಸಿದರೆ ಹಲವಾರು ಜನರಿಗೆ ನೌಕರಿ ದೊರೆಯುತ್ತದೆ. ಬೆಂಗಳೂರಿನಲ್ಲಿ ಸ್ಥಳದ ಅಭಾವ ಇರುವುದರಿಂದ ಸರ್ಕಾರದ ಕೆಲವು ಇಲಾಖೆಗಳ ಕಛೇರಿಗಳನ್ನು ಮೈಸೂರಿಗೆ ವರ್ಗಾಯಿಸಬೇಕು.

ಮೈಸೂರಿನಲ್ಲಿ ಕಟ್ಟಡಗಳ ಅನುಕೂಲತೆ ಇದ್ದು, ಜೊತೆಗೆ ಮೈಸೂರಿನ ಜನತೆಗೆ ಉದ್ಯೋಗಾವಕಾಶಗಳು ಸೃಷ್ಠಿ ಮಾಡಿದಂತಾಗುತ್ತದೆ. ಮೈಸೂರು ನಗರದ ಸೌಂದರ್ಯವನ್ನು ಮತ್ತು ಐತಿಹಾಸಿಕ ಶ್ರೇಷ್ಠತೆಯನ್ನು ಎತ್ತಿ ಹಿಡಿಯಬೇಕು. ಮೈಸೂರು ಸತ್ಯಮಂಗಲ ರೈಲ್ವೆ ವ್ಯವಸ್ಥೆ ಕಲ್ಪಿಸಬೇಕು. ಖಾಸಗಿ ಬಂಡವಾಳಗಾರರಿಗೆ ಉತ್ತೇಜನ ಕೊಟ್ಟು ಹೆಚ್ಚು ಉದ್ಯಮವನ್ನು ಸ್ಥಾಪಿಸಬೇಕು. ದೆಹಲಿಯಲ್ಲಿ ಮೈಸೂರಿನ ಸುಪ್ರಸಿದ್ಧವಾದ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಮಾಡಲು ಒಂದು ಸಂಗ್ರಹಾಲಯವನ್ನು ಸ್ಥಾಪಿಸಬೇಕು ಎಂದಿದ್ದಾರೆ.

ಸಮಾಜ ಕಲ್ಯಾಣದ ಬಗ್ಗೆ ಎಂ.ಆರ್.ಲಕ್ಷಮ್ಮನವರ ಚಿಂತನೆಗಳು

ಎಂ.ಆರ್.ಲಕ್ಷಮ್ಮನವರು ಮೈಸೂರು ಹೆಬಿಚ್ಯುಯಲ್ ಅಪೆಂಡರ್ಸ್ ಕಾಯ್ದೆಯ ಬಗ್ಗೆ ಮಾತನಾಡುತ್ತಾ ಪ್ರಾಚೀನ ಕಾಲದಿಂದಲೂ ದೇವದಾಸಿ ಪದ್ದತಿ ಜಾರಿಯಲ್ಲಿದ್ದು ಈಗಲೂ ಕೂಡ ಕೆಲವು ಸ್ಥಳಗಳಲ್ಲಿ ಈ ಪದ್ದತಿ ಜಾರಿಯಲ್ಲಿದೆ. ರಾಜ್ಯದಲ್ಲಿ ಅನೇಕ ಕಡೆ ಹೆಣ್ಣು ಮಕ್ಕಳಿಗೆ ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸಿರುವುದು ಸ್ವಾಗತಾರ್ಹ. ಇಲ್ಲಿ ಉತ್ತಮ ಶಿಕ್ಷಣವನ್ನು ನೀಡಿ ಅವರಿಗೆ ಜೀವನ ಮಾರ್ಗವನ್ನು ತೋರಿಸಿಕೊಡುವ ಕೆಲಸ ಆಗಬೇಕಿದೆ. ವೇಶ್ಯಾವೃತ್ತಿಯನ್ನು ಕೈಗೊಳ್ಳಲೂ ಅನೇಕ ಕಾರಣಗಳಿದ್ದೂ, ಜೀವನ ನಡೆಸುವುದಕ್ಕೋಸ್ಕರ ಹಣಕಾಸಿನ ತೊಂದರೆಯಿಂದ ದಾರಿದ್ರ್ಯದಿಂದ ಈ ವೃತ್ತಿಯನ್ನು ಕೈಗೊಳ್ಳುತ್ತಿದ್ದು, ಅವರಿಗೆ ಸೂಕ್ತ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಟ್ಟರೆ ಅವರ ಜೀವನ ಸುಧಾರಿಸುತ್ತದೆ. ಅವರಿಗೆ ಸರಿಯಾದ ರೀತಿಯಲ್ಲಿ ಪುನರ್ವಸತಿ ಕೇಂದ್ರಗಳಲ್ಲಿ ಆಪ್ತ ಸಲಹೆ ನೀಡಲು ವೈದ್ಯರು, ಕಾನೂನಿನ ಅರಿವು ಮೂಡಿಸಲು ಪೋಲೀಸರು ಇರಬೇಕು. ಅವರನ್ನು ಅಪರಾಧಿಗಳಂತೆ ನೋಡದೆ ಅವರೊಡನೆ ಮಾನವೀಯ ದೃಷ್ಟಿಯಿಂದ ಕೆಲಸ ಮಾಡುವ ಸಿಬ್ಬಂದಿಯನ್ನು ನೇಮಿಸಬೇಕು. ಹಳ್ಳಿಗಳಿಂದ ಜನರು ವಲಸೆ ಬಂದು ನಗರಗಳಲ್ಲಿ ನೆಲೆಸುತ್ತಿದ್ದು, ನಗರಗಳಲ್ಲಿ ಜನಸಂಖ್ಯೆ ಹೆಚ್ಚಾಗಿದ್ದು ನಗರಗಳಲ್ಲಿ ನಿರುದ್ಯೋಗ ಸಮಸ್ಯೆ ಮತ್ತು ಒತ್ತಡ ಹೆಚ್ಚಾಗಿ ವೇಶ್ಯಾವೃತ್ತಿ ಹೆಚ್ಚಾಗಿದೆ. ಇವರಿಗೆ ಪುನರ್ವಸತಿ ಕಲ್ಪಿಸುವುದರ ಜೊತೆಗೆ ಸಮಾಜಕಲ್ಯಾಣ ಇಲಾಖೆಯಲ್ಲಿ ಒಂದು ಸಮಿತಿಯನ್ನು ಸ್ಥಾಪಿಸಬೇಕು. ಪುನರ್ವಸತಿ ಕೇಂದ್ರಗಳಲ್ಲಿ ಸಣ್ಣ ಕೈಗಾರಿಕೆಗಳ ಬಗ್ಗೆ ತರಬೇತಿಯನ್ನು ನೀಡಿ ಸ್ವಾವಲಂಭಾವನೆಯನ್ನು ಮೂಡಿಸಬೇಕು.[44]

ಮೂರನೇ ಬಾರಿಗೆ ವಿಧಾನ ಪರಿಷತ್ ಸದಸ್ಯರಾಗಿ ಎಂ.ಆರ್.ಲಕ್ಷಮ್ಮನವರು (1964–70)

ಎಂ.ಆರ್.ಲಕ್ಷಮ್ಮನವರು ಮೂರನೇ ಬಾರಿಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಪದವೀಧರ ಕ್ಷೇತ್ರದಿಂದ 1964 ರಲ್ಲಿ ಆಯ್ಕೆಯಾದರು. ಅನೇಕ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನ ಸೆಳೆದ ಎಂ.ಆರ್.ಲಕ್ಷಮ್ಮನವರು ಗಡಿವಿವಾದಕ್ಕೆ ಸಂಬಂಧಪಟ್ಟಂತೆ ರೈಲ್ವೆ ಸತ್ಯಾಗ್ರಹಗಳಲ್ಲಿ ಭಾಗವಹಿಸಿದರು. ಪ್ರತಿಯೊಂದು ವಿಚಾರಗಳ ಬಗ್ಗೆ ಚರ್ಚೆ ಮಾಡಿದ ಎಂ.ಆರ್.ಲಕ್ಷಮ್ಮನವರು ಸಮಾಜಮುಖಿಯಾಗಿದ್ದರೆಂಬುದು ಸಾಬೀತಾಗುತ್ತದೆ.

ಕೃಷಿ, ನೀರಾವರಿ ಮತ್ತು ಭೂಸುಧಾರಣೆಗಳ ಬಗ್ಗೆ ಎಂ.ಆರ್.ಲಕ್ಷಮ್ಮನವರ ನಿಲುವುಗಳು

ಎಂ.ಆರ್.ಲಕ್ಷಮ್ಮನವರು ರೈತರ ಬಗ್ಗೆ ವಿಶೇಷ ಕಾಳಜಿಯುಳ್ಳವರಾಗಿದ್ದರು. ರೈತರು ಈ ದೇಶದ ಬೆನ್ನೆಲುಬು ಅವರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಮಂಡ್ಯ ಕೃಷಿ ಸಂಶೋಧನಾ ಕೇಂದ್ರದಲ್ಲಿ ಬೆಳೆಯಲಾಗಿರುವ ರಾಗಿಯ ಹೊಸ ತಳಿಯನ್ನು ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಲಾಗಿದಿಯೇ? ಏಕೆಂದರೆ ರಾಗಿ ಬಡವರ ಆಹಾರ ಎಲ್ಲರಿಗೂ ದೊರಕುವಂತಾಗಬೇಕು.[45] ಮೈಸೂರು ಭೂಸುಧಾರಣಾ ಕಾಯ್ದೆ 1965 ಅನ್ನು ಸ್ವಾಗತಿಸಿದ ಎಂ.ಆರ್.ಲಕ್ಷಮ್ಮನವರು ತೋಟದ ಬೆಳೆಗಳಾದ ತೆಂಗು, ಕಾಫಿ, ಏಲಕ್ಕಿ ಮುಂತಾದ ಬೆಳೆಗಳಿಗೆ ಸರ್ಕಾರ ಪ್ರೋತ್ಸಾಹವನ್ನು ನೀಡಬೇಕು. ಮೈಸೂರು ನೀರಾವರಿ ಕಾಯ್ದೆಯ ಅನ್ವಯ ಸಣ್ಣ ನೀರಾವರಿ ಯೋಜನೆಗಳು ಅನುಷ್ಠಾನಕ್ಕೆ ಬರುತ್ತಿದ್ದು, ಅವುಗಳನ್ನು ಬಳಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ನೀರಾವರಿ ಯೋಜನೆಗಳಲ್ಲಿ ಅವೈಜ್ಞಾನಿಕ ರೀತಿಯಲ್ಲಿ ನೀರನ್ನು ಸಂಗ್ರಹ ಮಾಡುವುದರಿಂದ ಕೃಷಿಗೆ ಸಂಪೂರ್ಣವಾಗಿ ಬಳಕೆ ಮಾಡುವಲ್ಲಿ ಮತ್ತು ಸದ್ವಿನಿಯೋಗ ಮಾಡಿಕೊಳ್ಳಲು ವಿಫಲರಾಗುತ್ತಿದ್ದಾರೆ. ಕೃಷಿಯ ಅಭಿವೃದ್ಧಿಗಾಗಿ ಕಂದಾಯ ಇಲಾಖೆ ಕೃಷಿ ಇಲಾಖೆ ನೀರಾವರಿ ಇಲಾಖೆ ಒಟ್ಟಿಗೆ ಕೆಲಸ ನಿರ್ವಹಿಸಬೇಕು.[46]

ಕರ್ನಾಟಕದ ಏಕೀಕರಣಕ್ಕೆ ಮೊದಲು ವಿವಿಧ ಪ್ರಾಂತ್ಯಗಳಲ್ಲಿ ವಿವಿಧ ರೀತಿಯ ಕಂದಾಯ ಪದ್ದತಿ ಜಾರಿಯಲ್ಲಿದ್ದು, ಕಂದಾಯ ವಿಧಿಸುವಾಗ ಒಂದು ಕಡೆ ಒಟ್ಟು ಆದಾಯ ಗಣನೆಗೆ ತೆಗೆದುಕೊಳ್ಳುತ್ತಿದ್ದು, ರಾಜ್ಯದಲ್ಲಿ ಕಂದಾಯವನ್ನು ಸರಿಯಾಗಿ ವಿಧಿಸುತ್ತಿಲ್ಲ. ಕಂದಾಯವನ್ನು ಸರಿಯಾದ ರೀತಿಯಲ್ಲಿ ನಿಗದಿ ಮಾಡಬೇಕು ಹಾಗೂ ಭೂಮಿಯನ್ನು ಅಳತೆ ಮಾಡುವ ಭೂಮಾಪಕರಿಗೆ ಪ್ರತಿ ತಾಲೋಕಿನಲ್ಲಿ ತರಬೇತಿಯನ್ನು ನೀಡುವ ವ್ಯವಸ್ಥೆ ಜಾರಿಗೊಳಿಸಬೇಕು. ಡಿಪ್ಲೊಮೊ ಮಾಡಿರುವ ಸಿವಿಲ್ ಇಂಜಿನಿಯರ್‌ಗಳಿಗೆ ಭೂಮಿಯನ್ನು ಅಳತೆ ಮಾಡುವ ಬಗ್ಗೆ ತರಬೇತಿಯನ್ನು ನೀಡಿ ಅವರನ್ನು ಕಂದಾಯ ಇಲಾಖೆಗೆ ನೇಮಿಸಿಕೊಳ್ಳಬೇಕು.[47]

ಕಾವೇರಿ ನದಿ ನೀರಿನ ಹಂಚಿಕೆ ಬಗ್ಗೆ ಎಂ.ಆರ್.ಲಕ್ಷಮ್ಮನವರು ಮಾತನಾಡುತ್ತಾ, ಕಾವೇರಿ ನದಿ ಮೈಸೂರು ಮತ್ತು ಮದ್ರಾಸ್ ರಾಜ್ಯದ ನಡುವೆ ಹಂಚಿಕೆಯಾಗಿದ್ದು, ಮದ್ರಾಸ್ ರಾಜ್ಯ ಕಾವೇರಿ ನೀರಿನಿಂದ ಹೆಚ್ಚಿನ ಪ್ರಯೋಜನವನ್ನು ಪಡೆದುಕೊಂಡು ಕೃಷಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಿದೆ. ಆದರೆ ಮೈಸೂರು ಮತ್ತು ಮದ್ರಾಸ್ ರಾಜ್ಯಕ್ಕೆ ನದಿನೀರಿನ ಹಂಚಿಕೆಯಾಗಬೇಕು. ಕೇಂದ್ರದ ನದಿ ಪ್ರಾಧಿಕಾರವು ಅಂತರರಾಜ್ಯ ನದಿನೀರಿನ ವಿವಾದಗಳನ್ನು ಬಗೆಹರಿಸಬೇಕು.

ಮೈಸೂರು ಭೂಸುಧಾರಣಾ ಕಾಯ್ದೆ ಬಗ್ಗೆ ಮಾತನಾಡುತ್ತಾ, ನಮ್ಮಲ್ಲಿ ಸಮಾಜವಾದಿ, ಪ್ರಜಾಸತ್ತಾತ್ಮಕ ವ್ಯವಸ್ಥೆ ಜಾರಿಗೆ ಬರಬೇಕು. ಭೂಮಿ ಇಲ್ಲದವರಿಗೆ ಭೂಮಿಯನ್ನು ನೀಡುವ ಕೆಲಸ ಆಗಬೇಕು. ಉಳುವವನೆ ಭೂಮಿಯ ಒಡೆಯನಾಗಬೇಕು ಎಂಬುದು ಭೂಸುಧಾರಣಾ ಕಾಯ್ದೆಯ ಉದ್ದೇಶವಾಗಿದೆ. ಭೂಸುಧಾರಣೆ ಕಾಯ್ದೆಯಲ್ಲಿ ಹೆಣ್ಣು ಮಕ್ಕಳಿಗೂ ಪರಂಪರೆಯಾಗಿ ಆಸ್ತಿಯಲ್ಲಿ ಪಾಲು ದೊರಕುವಂತೆ ಮಾಡಬೇಕು. ಕೆಲವು ಸಂದರ್ಭದಲ್ಲಿ ವಿಧವೆಯಾದ ಹೆಣ್ಣುಮಕ್ಕಳು ಗಂಡನ ಮನೆಯಿಂದ ತಿರಸ್ಕೃತಳಾಗಿ ದುಸ್ತರ ಜೀವನ ನಡೆಸಬೇಕಾಗುತ್ತದೆ. ಆದರೆ ಹೆಣ್ಣು ಮಕ್ಕಳಿಗೆ ಆಸ್ತಿ ಇದ್ದರೆ ಜೀವನೋಪಾಯ ಮಾಡಬಹುದು. ಆದ್ದರಿಂದ ಹೆಣ್ಣು ಮಕ್ಕಳಿಗೂ ಕೂಡ ಆಸ್ತಿ ಹಕ್ಕನ್ನು ಕೊಡಬೇಕು.[48] ಎಂ.ಆರ್.ಲಕ್ಷಮ್ಮನವರು 40 ವರ್ಷಗಳಿಗೂ ಹಿಂದೆ ಹೆಣ್ಣು ಮಕ್ಕಳಿಗೆ ಆಸ್ತಿಯ ಹಕ್ಕಿನ ಬಗ್ಗೆ ಧ್ವನಿಯೆತ್ತಿದ್ದು ಇಂದು ಹೆಣ್ಣು ಮಕ್ಕಳಿಗೆ ಆಸ್ತಿಹಕ್ಕು ಜಾರಿಗೆ ಬಂದಿರುವುದನ್ನು ನಾವು ಕಾಣಬಹುದು.

ಗಡಿವಿವಾದದ ಬಗ್ಗೆ ಎಂ.ಆರ್.ಲಕ್ಷಮ್ಮನವರ ನಿಲುವು

ಪ್ರಾಚೀನ ಕರ್ನಾಟಕದ ಗಡಿಯು ಕವಿರಾಜಮಾರ್ಗದಲ್ಲಿ ಉಲ್ಲೇಖವಾಗಿರುವಂತೆ ಕಾವೇರಿಯಿಂದ ಗೋದಾವರಿಯವರೆಗೆ ಹರಡಿದ್ದು, ಕರ್ನಾಟಕದ ಏಕೀಕರಣ ಸಂದರ್ಭದಲ್ಲಿ ಅನೇಕ ಪ್ರದೇಶಗಳು ಕನ್ನಡ ನಾಡಿನ ಕೈಬಿಟ್ಟು ಹೋದವು. ಮೈಸೂರು ರಾಜ್ಯ ಮತ್ತು ಕೇರಳದ ನಡುವೆ ಕಾಸರಗೋಡು ಕರ್ನಾಟಕಕ್ಕೆ ಸೇರಬೇಕಾಗಿದ್ದು, ಅಲ್ಲಿ ಕನ್ನಡಿಗರೇ ಹೆಚ್ಚಾಗಿ ವಾಸಿಸುತ್ತಿದ್ದಾರೆ. ಕನ್ನಡ ಭಾಷೆಯಲ್ಲಿ ವ್ಯವಹರಿಸುತ್ತಾರೆ.

ಕಾಸರಗೋಡು ಮಂಗಳೂರಿಗೆ ಕೇವಲ 28 ಮೈಲಿ ದೂರವಿದ್ದು, ತಿರುವನಂತಪುರಂಗೆ 220 ಕಿ.ಮೀ. ದೂರವಿದೆ. ಕಾಸರಗೋಡುವಿನಲ್ಲಿ ಕನ್ನಡ ಭಾಷೆಯ ಜೊತೆಗೆ ಕನ್ನಡದ ಉಪಭಾಷೆ ತುಳು ಭಾಷೆಯನ್ನು ಮಾತನಾಡುವ ಜನರಿದ್ದು, ದಕ್ಷಿಣ ಕನ್ನಡದ ಅಳಿಯ ಸಂತಾನ ಪದ್ಧತಿ ಕೂಡ ಕಾಸರಗೋಡುವಿನಲ್ಲಿ ಚಾಲ್ತಿಯಲ್ಲಿದೆ.[50] ಕಾಸರಗೋಡು ರಾಷ್ಟ್ರಕವಿ ಗೋವಿಂದಪೈ ಯವರ ಜನ್ಮಸ್ಥಳವಾಗಿದ್ದು, 1947 ರಲ್ಲಿ ಕಾಸರಗೋಡುವಿನಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದು ಅದರ ಅಧ್ಯಕ್ಷತೆಯನ್ನು ಗೋವಿಂದಪೈಯವರೇ ವಹಿಸಿದ್ದರು.

ಮಹಾರಾಷ್ಟ್ರ ಮತ್ತು ಕರ್ನಾಟಕದ ಗಡಿ ಸಮಸ್ಯೆ ಬಗ್ಗೆ ಆರ್.ಆರ್.ದಿವಾಕರ್‌ರವರು ಇಂದಿರಾಗಾಂಧಿಯವರಿಗೆ ಪತ್ರ ಬರೆದಿದ್ದಾರೆ. ಗಡಿ ಸಮಸ್ಯೆಗಳನ್ನು ರಾಷ್ಟ್ರೀಯ ಏಕತಾ ಸಮಿತಿಯು ಬಗೆಹರಿಸಬೇಕಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ಸಮಸ್ಯೆಯಲ್ಲಿ ಮಹಾಜನ ಆಯೋಗದ ವರದಿ ಅಂತಿಮವಾದುದು.[51] ಮಹಾಜನ ಆಯೋಗದ ವರದಿಯನ್ನು ಒಪ್ಪದ ಶಿವಸೇನೆ ಮುಂಬೈಯಲ್ಲಿರುವ ಕನ್ನಡಿಗರಿಗೆ ತೊಂದರೆ ಕೊಟ್ಟಿದೆ. ಮಹಾರಾಷ್ಟ್ರ ಸರ್ಕಾರ ಇದರ ಬಗ್ಗೆ ಕಾನೂನು ಕ್ರಮ ಕೈಗೊಳ್ಳಬೇಕು. ಯಾವುದೇ ಕನ್ನಡಿಗರಿಗೆ ತೊಂದರೆಯಾಗದಂತೆ ರಕ್ಷಣೆಯನ್ನು ನೀಡಬೇಕು.

ಬೆಳಗಾಂ ಬಗ್ಗೆ ವಿವಾದ ಸೃಷ್ಟಿಸಿರುವ ಶಿವಸೇನೆ ಮತ್ತು ಅದರ ಮುಖ್ಯಸ್ಥರು ರಾಷ್ಟ್ರಘಾತಕ ಕೆಲಸ ಮಾಡುತ್ತಿದ್ದು, ಶಿವಸೇನೆಯ ಹೋರಾಟಗಳ ಬಗ್ಗೆ ಮಹಾರಾಷ್ಟ್ರ ಸರ್ಕಾರ ಗಮನ ಹರಿಸಬೇಕೆಂದು ಕರ್ನಾಟಕ ಸರ್ಕಾರ ಒತ್ತಡ ತರಬೇಕು.[52] ಕನ್ನಡಿಗರ ರಕ್ಷಣೆ ಬಗ್ಗೆ ಎಂ.ಆರ್.ಲಕ್ಷಮ್ಮನವರು ಖಾರವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಶ್ರೀಲಂಕಾ ಮತ್ತು ಟಿಬೆಟ್‌ನಿಂದ ಬಂದ ನಿರಾಶ್ರಿತರಿಗೆ ಮೈಸೂರು ರಾಜ್ಯದಲ್ಲಿ ಸಾಕಷ್ಟು ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸಿ ಅವರಿಗೆ ಸ್ಥಳಾವಕಾಶಗಳನ್ನು ಮಾಡಿಕೊಡಲಾಗಿದೆ. ಹಾಗೆಯೇ ನೆರೆಯ ರಾಜ್ಯಗಳಿಂದ ಕೂಡ ತಮಿಳರು, ತೆಲುಗರು, ಮಲೆಯಾಳಿಗಳು ಕರ್ನಾಟಕದಲ್ಲಿ ನೆಲೆಸುತ್ತಿದ್ದಾರೆ. ಕನ್ನಡಿಗರು ಅಂತಃಕರಣದಿಂದ ಬರಮಾಡಿಕೊಂಡು ಸೌಹಾರ್ದತೆಯಿಂದ ಜೀವನ ನಡೆಸುತ್ತಿದ್ದಾರೆ. ಆದರೆ ಇದು **'ಮನೆಗೆ ಮಾರಿ ಪರರಿಗೆ ಉಪಕಾರಿ'** ಆಗಬಾರದು. ಸರ್ಕಾರ ಆಲೋಚಿಸಿ ಯೋಜಿತ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಎಂ.ಆರ್.ಲಕ್ಷಮ್ಮನವರು ಹೇಳಿದ್ದಾರೆ.[53] ಮುಂದೆ ಬರಬಹುದಾದ ಪರಭಾಷಿಕರ ಸಮಸ್ಯೆಯನ್ನು ಅರಿತವರಾದ ಎಂ.ಆರ್.ಲಕ್ಷಮ್ಮನವರ ದೂರದೃಷ್ಟಿತ್ವ ಪ್ರಶಂಸನೀಯವಾದದ್ದು.

ಶಿಕ್ಷಣದ ಬಗ್ಗೆ ಎಂ.ಆರ್.ಲಕ್ಷಮ್ಮನವರ ಚಿಂತನೆಗಳು

ಇಂದಿನ ದಿನಗಳಲ್ಲಿ ಆಧುನಿಕ ಶಿಕ್ಷಣದ ಜೊತೆಗೆ 18 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಮಿಲಿಟರಿ ಶಿಕ್ಷಣವನ್ನು ನೀಡಬೇಕು. ಕಾಲೇಜುಗಳಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತಂದರೆ ನಮ್ಮನ್ನು ನಾವು ರಕ್ಷಿಸಿಕೊಳ್ಳುವ ತಂತ್ರವನ್ನು ಕಲಿಯಲು ಸಾಧ್ಯವಾಗುತ್ತದೆ. ಏಕೆಂದರೆ ಇಂದು ವಿಶ್ವದಾದ್ಯಂತ ರಾಸಾಯನಿಕ ಯುದ್ದಗಳು, ಬ್ಯಾಕ್ಟೀರಿಯಾ ಯುದ್ದಗಳು, ಬಾಂಬ್ ಸ್ಫೋಟಗಳು ನಡೆಯುತ್ತಿದ್ದು, ಅಮಾಯಕ ನಾಗರೀಕರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ತುರ್ತು ಪರಿಸ್ಥಿತಿಯನ್ನು ಎದುರಿಸಲು ಮತ್ತು ಸ್ವಯಂ ರಕ್ಷಣೆ ಮಾಡಿಕೊಳ್ಳಲು ಮಿಲಿಟರಿ ಶಿಕ್ಷಣವನ್ನು ನೀಡಿದರೆ ನಾಗರೀಕರಿಗೆ ಪರಿಸ್ಥಿತಿಗಳನ್ನು ನಿಭಾಯಿಸಲು ಮತ್ತು ಎದುರಿಸಲು ಸಾಧ್ಯವಾಗುತ್ತದೆ.[54] ಉದಾಹರಣೆಗೆ 2ನೇ ಮಹಾಯುದ್ದದಲ್ಲಿ ಜಪಾನಿನ ಹಿರೋಶಿಮಾ, ನಾಗಾಸಾಕಿ ಮತ್ತು ಜರ್ಮನಿಯ ಹ್ಯಾಂಬರ್ಗ್‌ನಲ್ಲಿ ಅನೇಕ ನಾಗರೀಕರು ಪ್ರಾಣ ಕಳೆದುಕೊಂಡರು.

ವಿದ್ಯಾರ್ಥಿಗಳನ್ನು ಎನ್‌ಸಿಸಿ ಮತ್ತು ಎನ್‌ಎಸ್‌ಎಸ್‌ಗಳಿಗೆ ಸೇರಲು ಪ್ರೇರೇಪಿಸಬೇಕು. ಹೆಣ್ಣು ಮಕ್ಕಳಿಗೆ ನರ್ಸಿಂಗ್ ತರಬೇತಿಯನ್ನು ನೀಡಬೇಕು. ಇಷ್ಟೇ ಅಲ್ಲದೇ ಆಹಾರ ತಂತ್ರಜ್ಞಾನಕ್ಕೆ ಸಂಬಂಧಪಟ್ಟಂತೆ ಮತ್ತು ವಸ್ತ್ರವಿನ್ಯಾಸಕ್ಕೆ ಸಂಬಂಧಪಟ್ಟ ಶಿಕ್ಷಣಗಳನ್ನು ನೀಡಲು ತಾಂತ್ರಿಕ ಶಿಕ್ಷಣ ಶಾಲೆಗಳನ್ನು ತೆರೆಯಬೇಕು.[55] ವಿಶ್ವವಿದ್ಯಾನಿಲಯಗಳಲ್ಲಿ ನಡೆಸುವ ಸಂಶೋಧನೆಗಳು ಸಕಾಲಕ್ಕೆ ಬೇಕಾದಂತಹ ಮತ್ತು ಪೂರಕವಾದ ಮೂಲಭೂತ ಕೊಡುಗೆಯನ್ನು ನೀಡುವಂತಾಗಬೇಕು. ಕರ್ನಾಟಕಲ್ಲಿರುವ ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಏಕರೂಪ ಕಾನೂನುಗಳು ಜಾರಿಗೆ ಬರಬೇಕೆಂದು ಎಂ.ಆರ್.ಲಕ್ಷಮ್ಮನವರ ಅಭಿಪ್ರಾಯವಾಗಿದೆ.

ಕನ್ನಡ ನಮ್ಮ ರಾಜ್ಯಭಾಷೆಯಾಗಿರುವುದರಿಂದ ಸಾಕಷ್ಟು ಪ್ರಮಾಣದಲ್ಲಿ ಕನ್ನಡ ಪ್ರಾಧ್ಯಾಪಕರುಗಳನ್ನು ನೇಮಿಸಬೇಕು. ಮೈಸೂರು ಕಡ್ಡಾಯ ಶಿಕ್ಷಣ ಕಾಯ್ದೆ 1969 ಒಂದು ಪ್ರಮುಖವಾದ ಕಾಯ್ದೆಯಾಗಿದ್ದು, ಬಾಂಬೆ ಕರ್ನಾಟಕ ಮತ್ತು ಮದ್ರಾಸ್ ಕರ್ನಾಟಕದಲ್ಲಿ ಕೂಡ ಶಿಕ್ಷಣದ ಪ್ರಗತಿಯನ್ನು ಸಾಧಿಸಬೇಕು. ಕಡ್ಡಾಯ ಶಿಕ್ಷಣ ಅನ್ವಯ ಗ್ರಾಮೀಣ ಜನರಿಗೆ ಅನುಕೂಲವಾಗಿ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಲು ಸಾಧ್ಯ ಎಂದು ಶಿಕ್ಷಣದ ಕಾಯ್ದೆಯನ್ನು ಸ್ವಾಗತಿಸಿದ್ದಾರೆ.[56]

ಇತಿಹಾಸ ಮತ್ತು ಸಂಸ್ಕೃತಿಯ ಬಗ್ಗೆ ಎಂ.ಆರ್.ಲಕ್ಷಮ್ಮನವರ ಕಾಳಜಿ

ಎಂ.ಆರ್.ಲಕ್ಷಮ್ಮನವರು ಇತಿಹಾಸದ ವಿದ್ಯಾರ್ಥಿನಿಯಾಗಿದ್ದರಿಂದ ಇತಿಹಾಸ ಮತ್ತು ಸಂಸ್ಕೃತಿ ಬಗ್ಗೆ ವಿಶೇಷ ಆಸಕ್ತಿಯನ್ನು ಇಟ್ಟಿದ್ದರು. ಕರ್ನಾಟಕದಲ್ಲಿರುವ ಪುರಾತನ ಸ್ಮಾರಕಗಳ ಸಂರಕ್ಷಣೆಗೆ ವಿಶೇಷವಾದಂತಹ ಪುರಾತತ್ವ ಇಲಾಖೆಯನ್ನು ಸ್ಥಾಪಿಸಬೇಕು.[57] ಹರಪ್ಪ ಮತ್ತು ಮೊಹೆಂಜಾದಾರೊ ನಗರಗಳಲ್ಲಿ ಉತ್ಖನನದಿಂದ ದೊರೆತಿರುವ ಚಿನ್ನದ ಆಭರಣಗಳ ಮೂಲ ಎಲ್ಲಿಯದು, ಅವುಗಳು ಕರ್ನಾಟಕದ ಕೋಲಾರ ಚಿನ್ನದ ಗಣಿಯಿಂದ ಪಡೆದಂತಹವುಗಳೇ? ಈ ಸಂಬಂಧ ಏರ್ಪಟ್ಟಿರುವ ಬಗ್ಗೆ ಸಂಶೋಧನೆಗಳು ನಡೆಯಬೇಕು. ರಾಜ್ಯಕ್ಕೆ ಪ್ರತ್ಯೇಕ ಪ್ರಾಚ್ಯ ಸಂಶೋಧನಾ ಇಲಾಖೆಯನ್ನು ಸ್ಥಾಪಿಸಬೇಕು. ಮಳೆಗಾಲದಲ್ಲಿ ಬಿಜಾಪುರದಲ್ಲಿರುವ ಸ್ಮಾರಕಗಳ ಸಂರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮದ ಬಗ್ಗೆ ಎಂ.ಆರ್.ಲಕ್ಷಮ್ಮನವರು ಪ್ರಶ್ನಿಸಿದರು.[58]

ಪುರಂದರ ದಾಸರ ಜಯಂತಿ ಫೆಬ್ರವರಿ 6ನೇ ತಾರೀಖು ಇದ್ದು, ಆಕಾಶವಾಣಿಯಲ್ಲಿ ಅವರ ಕೀರ್ತನೆಯನ್ನು ಪ್ರಸಾರ ಮಾಡಬೇಕು. ಆದರೆ ಆಕಾಶವಾಣಿಯಲ್ಲಿ ಅವರ ಕುರಿತಾದ ಒಂದು ಕಾರ್ಯಕ್ರಮವನ್ನು ಏರ್ಪಡಿಸಿಲ್ಲ. ಆದರೆ ಮದ್ರಾಸ್ ಆಕಾಶವಾಣಿಯಲ್ಲಿ ತ್ಯಾಗರಾಜರ ಕೀರ್ತನೆಗಳನ್ನು ಪ್ರಸಾರ ಮಾಡುತ್ತಿದ್ದು,

ಅವರಿಗೆ ಗೌರವ ಸಲ್ಲಿಸುವ ಕೆಲಸ ಮಾಡುತ್ತಿವೆ. ಕನಕದಾಸರ ಮತ್ತು ಪುರಂದರ ದಾಸರ ಕೀರ್ತನೆಗಳು ಬಸವಣ್ಣನವರ ವಚನಗಳನ್ನು ಪ್ರಸಾರ ಮಾಡಬೇಕು. ಆಕಾಶವಾಣಿಯಲ್ಲಿ ಸಾಹಿತ್ಯ ಸಂಗೀತ ಸಂಸ್ಕೃತಿಗೆ ಸಂಬಂಧಪಟ್ಟ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಎಂ.ಆರ್.ಲಕ್ಷಮ್ಮನವರು ಸರ್ಕಾರವನ್ನು ಒತ್ತಾಯಿಸಿದರು.[59] ಕನ್ನಡನಾಡಿನ ಸಾಹಿತ್ಯಕ್ಕೆ, ಸಂಗೀತಕ್ಕೆ, ಸಂಸ್ಕೃತಿಗೆ ಅವರು ನೀಡಿರುವ ಕೊಡುಗೆ ಅನನ್ಯವಾದದ್ದು.

1952 ರಿಂದ 1970 ರವರೆಗೆ ಸತತವಾಗಿ ಮೂರು ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿ 18 ವರ್ಷಗಳ ಕಾಲ ರಾಜಕೀಯ ರಂಗದಲ್ಲಿ ವಿಶಿಷ್ಠ ಸಾಧನೆ ಮಾಡಿದ ಮಹಿಳೆ ಎಂ.ಆರ್.ಲಕ್ಷಮ್ಮ. ಅಂದಿನ ಕಾಲದಲ್ಲಿ ಹೆಣ್ಣು ಮಕ್ಕಳು ಮನೆಯಿಂದ ಹೊರಬರುವುದೇ ಕಷ್ಟವಾಗಿದ್ದಂತಹ ಪರಿಸ್ಥಿತಿಯಲ್ಲಿ ಜನರ ಸಮಸ್ಯೆಗಳನ್ನು ಪರಿಹರಿಸಲು ಸಮಾಜಸೇವೆಯನ್ನು ಮಾಡಲು ರಾಜಕೀಯ ರಂಗಕ್ಕಿಳಿದು ವಿದೇಶಗಳಿಗೆ ಭೇಟಿ ನೀಡಿ, ನಮ್ಮ ದೇಶದ ಸಂಸ್ಕೃತಿಯನ್ನು ಹರಡಿದ ಎಂ.ಆರ್.ಲಕ್ಷಮ್ಮನವರು ಒಬ್ಬ ದಿಟ್ಟ ಮಹಿಳೆ.

1970ರಲ್ಲಿ ಪದವೀಧರ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸುವಂತೆ ಕಾಂಗ್ರೆಸ್ ಟಿಕೆಟ್ ನೀಡಲು ಆಹ್ವಾನಿಸಿದಾಗ ಎಂ.ಆರ್.ಲಕ್ಷಮ್ಮನವರು ನಿರಾಕರಿಸಿದರು. 1970ರಲ್ಲಿ ರಾಜಕೀಯ ಕ್ಷೇತ್ರದಿಂದ ನಿವೃತ್ತಿಗೊಂಡು ತಮ್ಮ ಸೇವೆಯನ್ನು ಪೂರ್ಣ ಪ್ರಮಾಣದಲ್ಲಿ ಸಮಾಜ ಸೇವೆಗೆ ಮುಡಿಪಾಗಿಟ್ಟರು.

ಅಡಿಟಿಪ್ಪಣಿಗಳು

1. ಕರ್ನಾಟಕ ವಿಧಾನ ಸಭೆಯ 60ನೇ ವಾರ್ಷಿಕೋತ್ಸವದ ಸಮಾರಂಭದ ಸ್ಮರಣ ಸಂಚಿಕೆ, (ಸಂ) ಆರ್.ಸುರೇಶ್‌ಕುಮಾರ್. ಪುಟಸಂಖ್ಯೆ–32
2. ಎಂ.ಆರ್.ಲಕ್ಷಮ್ಮನವರ ಸ್ವವಿವರ, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು. ಪುಟಸಂಖ್ಯೆ–7.
3. ಕರ್ನಾಟಕ ವಿಧಾನ ಸಭೆಯ 60ನೇ ವಾರ್ಷಿಕೋತ್ಸವದ ಸಮಾರಂಭ ಸ್ಮರಣ ಸಂಚಿಕೆ, (ಸಂ) ಆರ್.ಸುರೇಶ್‌ಕುಮಾರ್, ಪುಟಸಂಖ್ಯೆ–33
4. ಕರ್ನಾಟಕ ವಿಧಾನ ಸಭೆಯ 60ನೇ ವಾರ್ಷಿಕೋತ್ಸವದ ಸಮಾರಂಭ ಸ್ಮರಣ ಸಂಚಿಕೆ, (ಸಂ) ಆರ್.ಸುರೇಶ್‌ಕುಮಾರ್. ಪುಟಸಂಖ್ಯೆ–33
5. ಎಂ.ಆರ್.ಲಕ್ಷಮ್ಮನವರ ಸ್ವವಿವರ, ವಿಭಾಗೀಯ ಪತ್ರಾಗಾರ ಕಛೇರಿ. ಮೈಸೂರು. ಪುಟಸಂಖ್ಯೆ–2
6. M.L.C Debates, dated 23-06-1945 page no. 220
7. M.L.C Debates, dated 23-06-1945 page no. 222
8. M.L.C Debates, dated 25-06-1945 page no. 226
9. M.L.C Debates, dated 30-06-1945 page no. 516, 517

10. M.L.C Debates, dated 07-07-1945, page no. 827
11. M.L.C Debates, dated 25-06-1945, page no. 229
12. M.L.C Debates, dated 23-06-1945 page no. 223
13. M.L.C Debates dated 26-06-1945 page no. 297
14. ಸಾಧ್ವಿ ದಿನಪತ್ರಿಕೆ, ದಿನಾಂಕ 20–6–1946.
15. ಸಾಧ್ವಿ ದಿನಪತ್ರಿಕೆ, ದಿನಾಂಕ 24–6–1947
16. ಸಾಧ್ವಿ ದಿನಪತ್ರಿಕೆ, ದಿನಾಂಕ 23–10–1946,
17. ಸಾಧ್ವಿ ದಿನಪತ್ರಿಕೆ, ದಿನಾಂಕ 15–11–1946.
18. ಸಾಧ್ವಿ ದಿನಪತ್ರಿಕೆ, ದಿನಾಂಕ 16–11–1946.
19. ಸಾಧ್ವಿ ದಿನಪತ್ರಿಕೆ, ದಿನಾಂಕ 6–1–1947.
20. ಸಾಧ್ವಿ ದಿನಪತ್ರಿಕೆ, ದಿನಾಂಕ 7–12–47.
21. ಎಂ.ಆರ್.ಲಕ್ಷಮ್ಮನವರ ಸ್ವವಿವರ, ವಿಭಾಗೀಯ ಪತ್ರಾಗಾರ ಇಲಾಖೆ, ಮೈಸೂರು. ಪುಟಸಂಖ್ಯೆ–8
22. ಎಂ.ಆರ್.ಲಕ್ಷಮ್ಮನವರ ಸ್ವವಿವರ, ವಿಭಾಗೀಯ ಪತ್ರಾಗಾರ ಇಲಾಖೆ, ಪುಟಸಂಖ್ಯೆ–9
23. ಎಂ.ಆರ್.ಲಕ್ಷಮ್ಮನವರ ಸ್ವವಿವರ, ವಿಭಾಗೀಯ ಪತ್ರಾಗಾರ ಇಲಾಖೆ, ಮೈಸೂರು. ಪುಟಸಂಖ್ಯೆ–9
24. ಸುರೇಶ್‌ಮೂನ 'ಬೆಂಗಳೂರಿನ ನಗರ ನಿರ್ಮಾಪಕರು' ಪುಟ ಸಂಖ್ಯೆ–172
25. M.L.C Debates, dated 22-10-1952 page no. 174.
26. M.L.C Debates, dated 9-3-1953 page no. 50-51.
27. M.L.C Debates, dated 13-1-1954 page no. 73.
28. M.L.C Debates, dated 22-10-1952 page no. 211.
29. M.L.C Debates, dated 9-3-1953 page no. 52.
30. M.L.C Debates, dated 11-3-1953 page no. 162.
31. M.L.C Debates, dated 27-3-1953 page no. 439.
32. M.L.C Debates, dated 2-4-1953 page no. 168-170.
33. M.L.C Debates, dated 2-4-1953 page no. 171.
34. M.L.C Debates, dated 18-4-1953 page no. 928.
35. M.L.C Debates, dated 31-1-1954 page no. 73.
36. M.L.C Debates, dated 5-3-1955 page no. 434.
37. M.L.C Debates, dated 10-3-1953 page no. 61.
38. M.L.C Debates, dated 27-3-1953 page no. 445.
39. ಎಂ.ಆರ್.ಲಕ್ಷಮ್ಮನವರ ವ್ಯಕ್ತಿ ವಿವರ, ವಿಭಾಗೀಯ ಪತ್ರಾಗಾರ ಇಲಾಖೆ, ಮೈಸೂರು. ಪುಟಸಂಖ್ಯೆ–2
40. M.L.C Debates, dated 17-12-1959 page no. 310.
41. M.L.C Debates, dated 21-12-1959 page no. 355.

42. M.L.C Debates, dated 23-12-1959 page no. 494.
43. M.L.C Debates, dated 30-3-1959 page no. 566.
44. M.L.C Debates, dated 3-9-1960 page no. 137.
45. M.L.C Debates, dated 21-4-1965 page no. 234.
46. M.L.C Debates, dated 3-2-1965 page no. 569.
47. M.L.C Debates, dated 26-2-1969 page no. 574.
48. M.L.C Debates, dated 4-2-1970 page no. 525.
49. M.L.C Debates, dated 5-2-1970 page no. 566.
50. M.L.C Debates, dated 7-8-1967 page no. 425.
51. M.L.C Debates, dated 10-1-1968 page no. 279.
52. M.L.C Debates, dated 26-2-1969 page no. 206.
53. M.L.C Debates, dated 1-8-1967 page no. 207.
54. M.L.C Debates, dated 29-3-1966 page no. 127.
55. M.L.C Debates, dated 31-3-1966 page no. 216.
56. M.L.C Debates, dated 27-8-1969 page no. 126.
57. M.L.C Debates, dated 29-1-1965 page no. 385.
58. M.L.C Debates, dated 2-2-1965 page no. 523.
59. M.L.C Debates, dated 5-2-1970 page no. 551.

ಅಧ್ಯಾಯ ಐದು

ಎಂ.ಆರ್.ಲಕ್ಷಮ್ಮ ಮತ್ತು ಪತ್ರಿಕೋದ್ಯಮ

ಎಂ.ಆರ್.ಲಕ್ಷಮ್ಮನವರು ಸಮಾಜಸೇವೆ, ಸಮಾಜ ಸುಧಾರಣೆ, ಸಾಹಿತ್ಯ ಸೇವೆ, ರಾಜಕೀಯ ಎಂದು ನಾನಾ ಕ್ಷೇತ್ರಗಳಲ್ಲಿ ಬಿಡುವಿಲ್ಲದೆ ತಮ್ಮನ್ನು ತೊಡಗಿಸಿಕೊಳ್ಳುವುದರ ಜೊತೆಗೆ ಅವರು ತಮ್ಮ ಚಟುವಟಿಕೆಗಳ ಒಂದು ಭಾಗವಾಗಿ ಪತ್ರಿಕೋದ್ಯಮವನ್ನು ಆರಿಸಿಕೊಂಡರು. ಅವರು ಪತ್ರಿಕೋದ್ಯಮ ರಂಗಕ್ಕೆ ಬರಲು ಅವರ ಸಾಹಿತ್ಯಾಸಕ್ತಿಯ ಜೊತೆಗೆ ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿದರೂ ಅವರ ವೈಚಾರಿಕ ಮನೋಭಾವ ಕೂಡ ಕಾರಣವಾಗಿದೆ. ಅವರು ತಮ್ಮ ಕಾಲೇಜಿನ ದಿನಗಳಲ್ಲಿ ಅನೇಕ ಲೇಖನಗಳನ್ನು ಕಥೆ ಕವನಗಳನ್ನು ಬರೆಯುತ್ತಿದ್ದರು. ಅವುಗಳು ಪ್ರಮುಖ ಪತ್ರಿಕೆಗಳಾದ ಸಾಧ್ವಿ, ಪ್ರಬುದ್ಧ ಕರ್ನಾಟಕ ಇನ್ನಿತರ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಎಂ.ಆರ್.ಲಕ್ಷಮ್ಮನವರ ಸಾಹಿತ್ಯ ಸೇವೆ ಸಣ್ಣದಾಗಿ ಆರಂಭವಾಗಿದ್ದು ನಂತರದ ಕಾಲದಲ್ಲಿ **'ಸೋದರಿ'** ಎಂಬ ವಾರಪತ್ರಿಕೆಯ ಸಂಪಾದಕಿ, ಮುದ್ರಕಿ, ಪ್ರಕಾಶಕಿಯಾಗುವರೆಗೂ ಅವರ ಪತ್ರಿಕೋದ್ಯಮದ ಪಯಣ ಮುಂದುವರೆಯಿತು.

ಎಂ.ಆರ್.ಲಕ್ಷಮ್ಮನವರ ಸಾಹಿತ್ಯಸೇವೆ

ಎಂ.ಆರ್.ಲಕ್ಷಮ್ಮನವರು ಸಂಸಾರದ ಹೊರೆಯ ನಡುವೆಯು ಸ್ನಾತಕೋತ್ತರ ಶಿಕ್ಷಣವನ್ನು ಪಡೆದುಕೊಂಡಿದ್ದು, ಅವರಿಗೆ ಓದಿನ ಮೇಲಿನ ಅಭಿಮಾನವೇ ಕಾರಣ. ಸಾಹಿತ್ಯ ಪ್ರೇಮಿಯಾಗಿದ್ದ ಎಂ.ಆರ್.ಲಕ್ಷಮ್ಮನವರು ಪತ್ರಿಕೆಗಳಲ್ಲಿ ಲೇಖನಗಳನ್ನು ಕಥೆ ಕವನಗಳನ್ನು ಬರೆಯುವುದರ ಮೂಲಕ ಸಾಹಿತ್ಯ ಕ್ಷೇತ್ರಕ್ಕೆ ಅಡಿ ಇಟ್ಟರು. 'ಕೊಂತಮ್ಮನ ಪದಗಳು' ಎನ್ನುವ ಜಾನಪದ ಸಾಹಿತ್ಯವನ್ನು ಸಂಗ್ರಹ ಮಾಡಿ ಅದನ್ನು ಪ್ರಕಟಿಸಿದರು.[1]

ಜನಸಾಮಾನ್ಯರ ಜೀವನವನ್ನು ಬಿಂಬಿಸುವ ಜಾನಪದ ಗೀತೆಗಳ ಮೇಲೆ ವಿಮರ್ಶೆಯನ್ನು ರಚಿಸಿದ್ದಾರೆ. ಇತಿಹಾಸದ ವಿದ್ಯಾರ್ಥಿನಿಯಾಗಿದ್ದ ಎಂ.ಆರ್.ಲಕ್ಷಮ್ಮನವರು ನಲವತ್ತರ ದಶಕದಲ್ಲಿಯೇ ಇತಿಹಾಸದ ಆಧಾರಗಳಲ್ಲಿ ಒಂದಾದ ಮೌಖಿಕ ಆಧಾರವಾದ ಜಾನಪದ ಸಾಹಿತ್ಯವನ್ನು ಸಂಗ್ರಹಣೆ ಮಾಡಿ ಅದರ ಮೇಲೆ ವಿಮರ್ಶೆಯನ್ನು ಬರೆದಿರುವುದು ಅವರ ಜ್ಞಾನಕ್ಕೆ ಹಿಡಿದ ಕನ್ನಡಿಯಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಏಕಾಂಕ ನಾಟಕದ ಸ್ಪರ್ಧೆಯಲ್ಲಿ ಭಾಗವಹಿಸಿದ ಎಂ.ಆರ್.ಲಕ್ಷಮ್ಮನವರು ಬಹುಮಾನವನ್ನು ಪಡೆದರು. ಹಾಗೇಯೇ ಎಸ್.ಎಸ್.ವೆಂಕಾಜೀರಾವ್ ಪ್ರತಿಷ್ಠಾನ ನೀಡುವ ವರ್ಷದ ಯುವ ಸಾಹಿತಿ ಪ್ರಶಸ್ತಿಗೆ ಕೂಡ ಭಾಜನರಾದರು. ಇವೆಲ್ಲವೂ ಅವರ ಒಲವು ಸಾಹಿತ್ಯದ ಕಡೆಗೆ ಹರಿಯಲು ಸಹಕಾರಿಯಾಯಿತು.

ಶಿಕ್ಷಣ ಮುಗಿದೊಡನೆ ಆಕಾಶವಾಣಿಯಲ್ಲಿ ನೌಕರಿಗೆ ಸೇರಿದ ಎಂ.ಆರ್.ಲಕ್ಷಮ್ಮನವರು ಹಲವಾರು ರೇಡಿಯೊ ನಾಟಕಗಳನ್ನು ರಚಿಸಿದರು. ಇವರು ರಚಿಸಿದ ನಾಟಕಗಳು ಬೆಂಗಳೂರಿನ ಆಕಾಶವಾಣಿಯಲ್ಲಿ ಅಲ್ಲದೇ ಮದ್ರಾಸ್ ಮತ್ತು ಹೈದ್ರಾಬಾದಿನ ಆಕಾಶವಾಣಿಯ ಕನ್ನಡ ವಿಭಾಗಗಳಲ್ಲಿ ಪ್ರಸಾರಗೊಂಡವು.[2] ಎಂ.ಆರ್.ಲಕ್ಷಮ್ಮನವರು ರಚಿಸಿದ ನಾಟಕಗಳನ್ನು ರಂಗದ ಮೇಲೆ ಅಳವಡಿಸಿಕೊಂಡು ವಿದ್ಯಾರ್ಥಿಗಳು ಅಭಿನಯಿಸುತ್ತಿದ್ದರು. ಮಹಾಜನ ಹೈಸ್ಕೂಲಿನ ಪೋಷಕರ ದಿನಾಚರಣೆ ಸಂದರ್ಭದಲ್ಲಿ ಹಳೆಯ ವಿದ್ಯಾರ್ಥಿಗಳು ಎಂ.ಆರ್.ಲಕ್ಷಮ್ಮನವರಿಂದ ರಚಿಸಲ್ಪಟ್ಟ **'ಗ್ರಹಚಾರ ಬಿಡುಗಡೆ'** ಎಂಬ ನಾಟಕವನ್ನು ಅಭಿನಯಿಸಿದರು.[3]

ಎಂ.ಆರ್.ಲಕ್ಷಮ್ಮನವರು ಕಾಲೇಜು ವ್ಯಾಸಂಗ ಮಾಡುತ್ತಿದ್ದಾಗಲೇ ಅನಕ್ಷರಸ್ಥರಿಗೆ ಅಕ್ಷರ ಕಲಿಸುವ ಹಂಬಲವನ್ನಿಟ್ಟುಕೊಂಡಿದ್ದು ಪ್ರೊ.ಈಗಲ್ಟನ್ ನೇತೃತ್ವದಲ್ಲಿ ನಾ.ಕಸ್ತೂರಿ ಮುಂತಾದವರೊಡನೆ ಸೇರಿ ಮೈಸೂರಿನ ಕೂರ್ಗಳ್ಳಿಯಲ್ಲಿ ಹಳ್ಳಿಯ ಅವಿದ್ಯಾವಂತರಿಗೆ ಅಕ್ಷರ ಕಲಿಸುವ ಕಾರ್ಯದಲ್ಲಿ ತೊಡಗಿಸಿಕೊಂಡರು. ನಂತರ ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯಲ್ಲಿ ಸದಸ್ಯೆಯಾಗಿದ್ದುಕೊಂಡು ಅಕ್ಷರ ಪ್ರಚಾರ ಕಾರ್ಯದಲ್ಲಿ ಪ್ರತಿಭೆಯನ್ನು ಅರಿತು ವಯಸ್ಕರ ಶಿಕ್ಷಣ ಸಮಿತಿಯ ವಾರಪತ್ರಿಕೆ **'ಬೆಳಕು'** ವಾರಪತ್ರಿಕೆಯ ಪ್ರಥಮ ಸಂಪಾದಕಿಯಾಗುವ ಹೊಣೆಗಾರಿಕೆಯನ್ನು ವಹಿಸಿಕೊಂಡರು. ಹೆಣ್ಣುಮಕ್ಕಳಿಗೆ ಪತ್ರಿಕೋದ್ಯಮ ದೂರವಾಗಿದ್ದ ಕಾಲದಲ್ಲಿ ಸತತವಾಗಿ ಮೂರು ವರ್ಷಗಳ ಕಾಲ **'ಬೆಳಕು'** ವಾರಪತ್ರಿಕೆಯ ಸಂಪಾದಕಿಯಾಗಿ ಕಾರ್ಯನಿರ್ವಹಿಸಿದರು.[4] ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯು 5 ತಿಂಗಳ ಕಾಲ ಶಿಕ್ಷಣವನ್ನು ನೀಡಿದ ಮೇಲೆ ಅದನ್ನು ಅಷ್ಟಕ್ಕೆ ಬಿಡದೆ ಮುಂದುವರಿಸಿಕೊಂಡು ಹೋಗಲು ವಯಸ್ಕರ ಶಿಕ್ಷಣದ ಪುಸ್ತಕ ಮಾಲೆಯ ಅಡಿಯಲ್ಲಿ ಸಣ್ಣ ಸಣ್ಣ ಕಥೆಗಳಿಂದ ಕೂಡಿದ ಪುಸ್ತಕಗಳು, ಮೈಸೂರು ಸಂಸ್ಥಾನದ ಆಡಳಿತ ಕ್ರಮದ ಬಗ್ಗೆ, ಹೆಣ್ಣುಮಕ್ಕಳ ಪದಗಳ ಬಗ್ಗೆ, ನಮ್ಮ ಸಂಪತ್ತಿನ ಬಗ್ಗೆ, ಭೂಮಿಯ ಬಗ್ಗೆ, ಮೈಸೂರಿನ ಬಗ್ಗೆ ಇನ್ನೂ ಅನೇಕ ಮಾಹಿತಿಗಳನ್ನು ಒಳಗೊಂಡ ಪುಸ್ತಕಗಳನ್ನು ಪ್ರಕಟಿಸುತ್ತಿದ್ದರು. ವಯಸ್ಕರ ಶಿಕ್ಷಣ ಪುಸ್ತಕಮಾಲೆಯ ಉದ್ದೇಶ, ಅವುಗಳನ್ನು ಕೊಂಡು ಓದಿದ ಜನರು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ಜೀವನಮಾರ್ಗವನ್ನು ಉತ್ತಮ ಪಡಿಸಿಕೊಳ್ಳಲು ಆಡಳಿತದಲ್ಲಿ ಭಾಗವಹಿಸಲು ಸಾಧ್ಯವಾಗುವಂತೆ ಜನರನ್ನು ಪ್ರೇರೇಪಿಸುವುದಾಗಿತ್ತು. ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಪುಸ್ತಕ ಮಾಲೆಯಲ್ಲಿ ಎಂ.ಆರ್.ಲಕ್ಷಮ್ಮನವರ ಎರಡು ಪುಸ್ತಕಗಳು ಅಂಗೀಕರಿಸಲ್ಪಟ್ಟಿದ್ದವು, ಕುಂತೀದೇವಿ ಮತ್ತು ಮಾರುತಿ ಎಂಬ ಪುಸ್ತಕಗಳು ಸಣ್ಣ ಕಥೆಗಳ ಪುಸ್ತಕಗಳಾಗಿದ್ದು, ವಯಸ್ಕರ ಶಿಕ್ಷಣ ಸಮಿತಿಯ ಪುಸ್ತಕ ಮಾಲೆಯಲ್ಲಿ ಸೇರಿಸಲ್ಪಟ್ಟಿದ್ದವು.

ಕುಂತೀದೇವಿ ಮತ್ತು ಮಾರುತಿ ಕಥಾಮಾಲಿಕೆಗಳು

ಎಂ.ಆರ್.ಲಕ್ಷಮ್ಮನವರು ಬರೆದ ಕುಂತೀದೇವಿ ಎಂಬ ಪುಸ್ತಕವು 1943ರಲ್ಲಿ ಪ್ರಥಮ ಮುದ್ರಣವನ್ನು ಕಂಡಿದ್ದು, 6000 ಪ್ರತಿಗಳು ಅಚ್ಚು ಹಾಕಿಸಲ್ಪಟ್ಟಿದ್ದವು. ಎರಡನೇ ಮುದ್ರಣವನ್ನು 1948 ರಲ್ಲಿ ಮತ್ತು ಮೂರನೇ ಮುದ್ರಣವನ್ನು 1953ರಲ್ಲಿ ತಲಾ 6000 ಪ್ರತಿಗಳು ಸಿದ್ದಗೊಂಡವು. **'ಕುಂತೀದೇವಿ'** ಪುಸ್ತಕವು ವಯಸ್ಕರ ಶಿಕ್ಷಣ ಸಮಿತಿಯ ಪುಸ್ತಕಮಾಲೆಯ 12ನೇ ಪುಸ್ತಕವಾಗಿ ಪ್ರಕಟಗೊಂಡಿತು. ಪುಸ್ತಕದ ಕೊನೆಯ ಹಾಳೆಯಲ್ಲಿ **'ಅನಕ್ಷರತೆ ಎಂಬುದು ಭಯಂಕರ ಪಿಶಾಚಿ, ಇದನ್ನು ಹೊಡೆದಟ್ಟಬೇಕಾದರೆ ಎಲ್ಲಾ ಜನರೂ ಓದು, ಬರಹ, ಲೆಕ್ಕ ಇವುಗಳನ್ನು ಕಲಿಯಲೇಬೇಕು. ದೊಡ್ಡವರು ವಯಸ್ಕರ ಶಾಲೆಗೆ ಸೇರಿರಿ, ಮಕ್ಕಳನ್ನು ಹತ್ತಿರದ ಸ್ಕೂಲಿಗೆ ಸೇರಿಸಿರಿ, ಕಾಲಹರಣ ಮಾಡಬೇಡಿ'** ಎಂಬ ಘೋಷಣಾ ವಾಕ್ಯಗಳನ್ನು ಕಾಣಬಹುದು.

ಕುಂತೀದೇವಿ ಕಥೆಯು ಸರಳ ವಾಕ್ಯಗಳಿಂದ ಕೂಡಿದ ಆಡುಭಾಷೆಯನ್ನು ಬಳಸಿಕೊಂಡು ರಚಿಸಿದ ಕಥೆಯಾಗಿದೆ. ಪಂಚಪಾಂಡವರ ತಾಯಿ ಕುಂತೀದೇವಿ ಪುಸ್ತಕದ ಕಥಾವಸ್ತುವಾಗಿದ್ದು, ಕುಂತೀದೇವಿಯ ಜನನದಿಂದ ಆಕೆಯ ಕೊನೆಗಾಲದವರೆಗಿನ ಜೀವನವನ್ನು ತಿಳಿಸುತ್ತದೆ. ಮೂವತ್ತೆರಡು ಪುಟಗಳನ್ನು ಹೊಂದಿರುವ ಈ ಪುಸ್ತಕದಲ್ಲಿ ಇಡೀ ಮಹಾಭಾರತದ ಕಥಾ ಹಂದರವನ್ನು ಸಂಕ್ಷಿಪ್ತವಾಗಿ ಚಿತ್ರಿಸಲಾಗಿದೆ. ಈ ಪುಸ್ತಕದಲ್ಲಿ ಜನಿಸಿದ ತಕ್ಷಣವೇ ಕುಂತೀದೇವಿಯನ್ನು ಆಕೆಯ ತಂದೆ ಯಾದವ ಕುಲದ ಅರಸ ಶೂರರಾಜ ತನ್ನ ಸೋದರತ್ತೆ ಮಗ ಕುಂತಿಭೋಜನಿಗೆ ದತ್ತು ಕೊಟ್ಟ ಬಗ್ಗೆ, ಬಾಲ್ಯದಲ್ಲಿ ಅತಿಥಿಗಳ ಸೇವೆಯಲ್ಲಿ ತೊಡಗಿಸಿಕೊಂಡು ಉತ್ತಮ ಉಪಚಾರಗಳನ್ನು ಮಾಡುತ್ತಿದ್ದ ಕುಂತೀದೇವಿಯ ಬಗ್ಗೆ, ಸೇವೆಯಿಂದ ತೃಪ್ತರಾದ ದೂರ್ವಾಸ ಋಷಿಮುನಿಗಳು ಐದು ಮಂತ್ರಗಳನ್ನು ನೀಡಿದರು ಎಂದು ಕಥೆಯು ಪ್ರಾರಂಭವಾಗುತ್ತದೆ.

ಕುಂತೀದೇವಿ ಕಥೆಯು ಚಿಕ್ಕಚಿಕ್ಕ ಶೀರ್ಷಿಕೆಗಳನ್ನು ಹೊಂದಿದ್ದು, ಇಡೀ ಮಹಾಭಾರತದ ಘಟನೆಯನ್ನು ಕಣ್ಮುಂದೆ ತರುತ್ತದೆ. ಕರ್ಣನು ಹುಟ್ಟಿದ್ದು, ಕುಂತಿಯ ಮದುವೆ, ಪಾಂಡವರು ಜನಿಸಿದ್ದು, ಪತಿಯನ್ನು ಕಳೆದುಕೊಂಡಿದ್ದು, ಮರಳಿ ಹಸ್ತಿನಾವತಿಗೆ ಬಂದದ್ದು, ಪಾಂಡವರ ವಿದ್ಯಾಭ್ಯಾಸ, ಕರ್ಣನ ಪತ್ತೆ, ಐರಾವತದ ಪೂಜೆ, ಅರಗಿನ ಅರಮನೆಯಲ್ಲಿ ಬಕಾಸುರನ ವಧೆ, ದ್ರೌಪದಿಯನ್ನು ಗೆದ್ದ ಬಗೆ, ಇಂದ್ರಪ್ರಸ್ಥ ರಾಜ್ಯದಲ್ಲಿ, ಜೂಜಾಟ, ವನವಾಸಕ್ಕೆ ಹೊರಟಿದ್ದು, ಹದಿಮೂರು ವರ್ಷಗಳಾದ ಮೇಲೆ, ಯುದ್ಧ ಏರ್ಪಾಡು, ಕರ್ಣನಲ್ಲಿ ಕುಂತಿಯ ಬೇಡಿಕೆ, ಕುರುಕ್ಷೇತ್ರದಲ್ಲಿ, ಮರಳಿ ಹಸ್ತಿನಾವತಿಗೆ, ಕೊನೆಯ ದಿನಗಳು ಮುಂತಾದ ಶೀರ್ಷಿಕೆಗಳೊಂದಿಗೆ ಕುಂತೀದೇವಿಯ

ಕಥೆಯ ಅನಾವರಣಗೊಂಡಿದೆ. ಮಹಾಭಾರತದ ಕಥೆಯನ್ನು ಕುಂತೀದೇವಿಯ ಕಣ್ಣಲ್ಲಿ ನೋಡುವ ಪ್ರಯತ್ನವನ್ನು ಎಂ.ಆರ್.ಲಕ್ಷಮ್ಮನವರು ಮಾಡಿದ್ದಾರೆ. ಹೆಣ್ಣಾಗಿ ಹುಟ್ಟಿ ಜೀವನದಲ್ಲಿ ಅನುಭವಿಸಿದ ಕಷ್ಟಕಾರ್ಪಣ್ಯಗಳ ಬಗ್ಗೆ ಅದನ್ನು ಎದುರಿಸಿದ ಬಗೆಯನ್ನು ಚಿತ್ರಿಸಿದ್ದಾರೆ.

ಈ ಪುಸ್ತಕದಲ್ಲಿ ಕೊನೆಯದಾಗಿ ಮಹಾಭಾರತ ರಚಿಸುವಾಗ ವ್ಯಾಸ ಋಷಿಗಳು ಹೇಳಿದ ಮಾತನ್ನು ಎಂ.ಆರ್.ಲಕ್ಷಮ್ಮನವರು ಉಲ್ಲೇಖಿಸಿದ್ದಾರೆ. **'ಗಾಂಧಾರಿದೇವಿಯ ಧರ್ಮಶೀಲತೆಯನ್ನು, ವಿದುರನ ವಿವೇಕವನ್ನು, ಕುಂತಿಯ ಧೈರ್ಯವನ್ನು, ಪಾಂಡವರ ಸತ್ಯಸಂಧತೆಯನ್ನು, ಕೃಷ್ಣನ ಮಹಿಮೆಯನ್ನು ಮಹಾಭಾರತದಲ್ಲಿ ನೀವು ಕಾಣಬಹುದು'** ಎಂದು ಹೇಳುತ್ತಾರೆ. ವಿಧವೆಯಾದ ಕುಂತೀದೇವಿ ತನ್ನ ಮಕ್ಕಳ ಶ್ರೇಯಸ್ಸಿಗಾಗಿ ಶ್ರಮಿಸಿದ ಬಗ್ಗೆ ಈ ಕಥೆಯಲ್ಲಿ ನಿರೂಪಿತವಾಗಿದೆ.

ಎಂ.ಆರ್.ಲಕ್ಷಮ್ಮನವರು ಸರಳವಾಕ್ಯಗಳಲ್ಲಿ ಚಿಕ್ಕದಾಗಿ ಚೊಕ್ಕದಾಗಿ ಮಾರುತಿಯ ಕಥೆಯನ್ನು ಕಟ್ಟಿಕೊಂಡಿದ್ದು, ಜನರ ಆಡುಭಾಷೆಯನ್ನು ಬಳಸಿದ್ದಾರೆ. ಹಳ್ಳಿಯೊಂದರಲ್ಲಿ ರಾಮನ ಗುಡಿ ಇಲ್ಲದಿದ್ದರೂ ಹನುಮನ ಗುಡಿ ಮಾತ್ರ ಎಲ್ಲೆಲ್ಲೂ ಇರುವುದೆಂದು ಹೇಳುತ್ತಾ **'ನನಗಿಂತ ನನ್ನ ಬಂಟರು ದೊಡ್ಡವರು'** ಎಂದು ದೇವರು ಹೇಳುತ್ತಾನಂತೆ ಎಂಬ ಮಾತನ್ನು ಉಲ್ಲೇಖಿಸುತ್ತಾರೆ. ಶ್ರೀರಾಮನಿಗಿಂತ ಮಾರುತಿ ಎಲ್ಲರ ಇಷ್ಟದೈವ. ಕೋಟೆ ಬಾಗಿಲನ್ನು ಕಾಯುವವನು ಹನುಮಂತ, ಹಳ್ಳಿಗರ ಕಾಯಿಲೆ ಕಸಾಲೆಗಳಿಗೆ ಕಷ್ಟನಿಷ್ಠುರಗಳಿಗೆ ಹನುಮಂತನೇ ಹೊಣೆಗಾರ, ಜಟ್ಟಿಗಳ ಕಾಳಗ ಅವರ ಹೆಸರಿನಲ್ಲೇ ಆಗಬೇಕು, ರಾಮ ಭಜನೆ ಅವನ ಮುಂದೆಯೇ ನಡೆಯಬೇಕು, ಅವನ ಹೆಸರನ್ನು ಹಳ್ಳಿಯ ಹೈದ, ಹುಡುಗಿಯರಿಗೆ ಇಡಬೇಕು, ದೊಡ್ಡವರು ಅವನ ಒಕ್ಕಲಾಗಿ ನಡೆದುಕೊಳ್ಳಬೇಕು. ಹನುಮಂತನಿಗೆ ಇಂತಹ ಮಹಿಮೆ ಹೇಗೆ ಬಂತು? ಅವನ ಕಥೆಯನ್ನು ನೋಡೋಣ ಎಂದು ಮಾರುತಿಯ ಕಥೆಯನ್ನು ಪ್ರಾರಂಭಿಸುವ ಎಂ.ಆರ್.ಲಕ್ಷಮ್ಮನವರು ರಾಮ ಉಳ್ಳವರ ಆರಾಧ್ಯ ದೈವವಾದರೆ, ಹನುಮನು ಕೆಳವರ್ಗ ದೀನದಲಿತರ ದೇವರಾಗಿ ಪೂಜಿಸಲ್ಪಡುತ್ತಾನೆಂಬುದನ್ನು ಹೇಳುತ್ತಾರೆ. ಮಾರುತಿ ಕಥೆಯಲ್ಲಿ ರಾಮಾಯಣ ಕಥೆಯನ್ನು ಸಂಕ್ಷಿಪ್ತವಾಗಿ ನಿರೂಪಿಸಲಾಗಿದ್ದು, ರಾಮಾಯಣದಲ್ಲಿ ಹನುಮನ ಪಾತ್ರದ ಪ್ರಾಮುಖ್ಯತೆಯನ್ನು ಉಲ್ಲೇಖಿಸಿದ್ದಾರೆ.

ಎಂ.ಆರ್.ಲಕ್ಷಮ್ಮನವರು ಮಾರುತಿ ಕಥೆಯಲ್ಲಿ ಅಂಜನೆಯ ಮಗನಾದ ಆಂಜನೇಯನಾಗಿ ಕರೆಯಲ್ಪಡುತ್ತಾನೆಂದು ಹೇಳುತ್ತಾ ಸೂರ್ಯನನ್ನು ಹಿಡಿಯಲು ಹೋಗಿ ಕೆಳಗೆ ಬಿದ್ದು ದವಡೆ ಊದಿಕೊಂಡಿದ್ದರಿಂದ **'ಹನುಮ'** ನೆಂದು, ಹಾರುವುದರಲ್ಲಿ ಬಿರುಗಾಳಿಗೆ ಸಮನಾದ ಆಂಜನೇಯನನ್ನು **'ಮಾರುತಿ'** ಎಂದು ಕರೆಯಲಾಯಿತೆಂದು ಬಣ್ಣಿಸಿದ್ದಾರೆ. ಹೆಣ್ಣು, ಮದುವೆ ಎಂಬ ಮಾಯೆಗೆ ಈತ ಸಿಗುವವನಲ್ಲ, ಬಿಗಿ ಮನಸ್ಸಿನ ಮಹಾತ್ಮ ಎಂದು ಮಾರುತಿಯನ್ನು ಕೊಂಡಾಡಿದ್ದಾರೆ.

ಸುಗ್ರೀವನ ಮಂತ್ರಿಯಾಗಿ, ರಾಮದೂತನಾಗಿ, ರಾಮಭಕ್ತನಾಗಿ ನಂಬಿಕೆಯ ಬಂಟನಾದ ಮಾರುತಿಯ ಕಥೆಯನ್ನು ಉಲ್ಲೇಖಿಸಿದ್ದಾರೆ. ಹನುಮನಗುಡಿಗಳಲ್ಲಿ ವಿವಿಧ ರೂಪದ ಹನುಮನನ್ನು ಕಾಣಬಹುದಾಗಿದ್ದು, ಹಾರುವ ರೀತಿಯಲ್ಲಿ ನಿಂತು ಕೈಯಲ್ಲಿ ಗದೆ ಮತ್ತು ಬೆಟ್ಟವನ್ನು ಎತ್ತಿಹಿಡಿದ ಹನುಮನನ್ನು **'ವೀರಾಂಜನೇಯ'** ನೆಂದು, ಐದು ತಲೆ ಹತ್ತು ಕೈ ಇರುವ ಮೂರ್ತಿಯನ್ನು **'ಪಂಚಮುಖಿ ಆಂಜನೇಯ'** ಎಂದು, ರಾಮನ ಭಕ್ತನಾಗಿ ಮನಸ್ಸಿಟ್ಟು ಕೈಮುಗಿದು ನಿಂತಿರುವ ಮುರ್ತಿಯನ್ನು **'ಸಂಜೀವ ಮುಖ್ಯಪ್ರಾಣ'** ಎಂದು ವಿವಿಧ ಹೆಸರುಗಳಿಂದ ಕರೆಯಲ್ಪಡುವ ಹನುಮನ ಮಹಿಮೆ ಅಪಾರವಾದದ್ದು. ಎಂ.ಆರ್.ಲಕ್ಷಮ್ಮನವರು ಹನುಮನ ಕಥೆಯನ್ನು ನಿರೂಪಿಸುತ್ತಾ, ಎಲ್ಲಿಯವರೆಗೂ ನಮ್ಮ ದೇಶ, ನಮ್ಮ ಜನ, ನಮ್ಮ ನಡೆ ನುಡಿ ಉಳಿಯುವುದೋ ಅಲ್ಲಿಯವರೆಗೂ ಹನುಮನ ಪೂಜೆ ಅಳಿಯುವುದಿಲ್ಲವೆಂದು ಹೇಳುತ್ತಾರೆ. ಜನಸಾಮಾನ್ಯರ ಆರಾಧ್ಯದೈವವಾಗಿ, ಪ್ರತಿನಿಧಿಯಾಗಿ ಹನುಮನನ್ನು ನೋಡುವ ಪ್ರಯತ್ನವನ್ನು ಮಾಡಿದ್ದಾರೆ.

ಸೋದರಿ ವಾರಪತ್ರಿಕೆ

ಎಂ.ಆರ್.ಲಕ್ಷಮ್ಮನವರು ಕರ್ನಾಟಕದ ಪತ್ರಿಕೋದ್ಯಮಕ್ಕೆ ನೀಡಿರುವ ಒಂದು ಅಮೂಲ್ಯ ಕೊಡುಗೆಯೇ ಸೋದರಿ ಎಂಬ ದಿನಪತ್ರಿಕೆ. 1950ರಲ್ಲಿ ಎಂ.ಆರ್.ಲಕ್ಷಮ್ಮನವರು ಆರಂಭಿಸಿದ ಸೋದರಿ ಪತ್ರಿಕೆ ಆ ಕಾಲಕ್ಕೆ ತೀರ ಅಪರೂಪವಾಗಿದ್ದ ಮಹಿಳೆಯರಿಗಾಗಿಯೇ ಇದ್ದ ಪತ್ರಿಕೆಗಳಲ್ಲಿ ಒಂದು. ಅದಕ್ಕೆ ಮೊದಲು ಕನ್ನಡದಲ್ಲಿ ಆರ್.ಕಲ್ಯಾಣಮ್ಮನವರು ಸರಸ್ವತಿ ಪತ್ರಿಕೆಯನ್ನು ಹೊರಡಿಸುತ್ತಿದ್ದು, ಕಾಲಾನಂತರದಲ್ಲಿ ಅದು ನಿಂತುಹೋಗಿತ್ತು. ಈ ಪತ್ರಿಕೆ ಮಾತ್ರವಲ್ಲದೇ ಮುದ್ರಿಸಿ ಪ್ರಕಾಶಿಸುವ ಹೊಣೆಗಾರಿಕೆಯನ್ನು ಹೊತ್ತುಕೊಂಡು ಏಕಾಂಗಿಯಾಗಿ ಇವರು ಮಾಡುತ್ತಿದ್ದ ಕಾರ್ಯ ಶ್ಲಾಘನೀಯವಾದದ್ದು. ಬೆಂಗಳೂರಿನ ನರಸಿಂಹರಾಜ ಕಾಲೋನಿಯ ಅವರ ಬಾಡಿಗೆ ಮನೆಯಲ್ಲಿದ್ದ ಸೋದರಿ ಕಾರ್ಯಾಲಯದಿಂದ ಪತ್ರಿಕೆ ಹೊರಡುತ್ತಿದ್ದು, ಕುಟುಂಬದ ಸದಸ್ಯರೇ ಪತ್ರಿಕೆಯ ಕೆಲಸಗಾರರಾಗಿ ದುಡಿಯುತ್ತಿದ್ದರು.

ಈ ಪತ್ರಿಕೆಯ ಸಂಪಾದಕಿ ಮಾತ್ರವಲ್ಲದೇ ಮುದ್ರಿಸಿ ಪ್ರಕಾಶಿಸುವ ಹೊಣೆಗಾರಿಕೆಯನ್ನು ಹೊತ್ತುಕೊಂಡು ಏಕಾಂಗಿಯಾಗಿ ಇವರು ಮಾಡುತ್ತಿದ್ದ ಕಾರ್ಯ ಶ್ಲಾಘನೀಯವಾದದ್ದು. ಬೆಂಗಳೂರಿನ ನರಸಿಂಹರಾಜ ಕಾಲೋನಿಯ ಅವರ ಬಾಡಿಗೆ ಮನೆಯಲ್ಲಿದ್ದ ಸೋದರಿ ಕಾರ್ಯಲಯದಿಂದ ಪತ್ರಿಕೆ ಹೊರಡುತ್ತಿದ್ದು ಕುಟುಂಬದ ಸದಸ್ಯರೇ ಪತ್ರಿಕೆಯ ಕೆಲಸಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಗಂಡುಮಕ್ಕಳು ಯಂತ್ರದ ಕೆಲಸ ನಿರ್ವಹಣೆ ನೋಡಿಕೊಂಡರೆ ಹೆಣ್ಣುಮಕ್ಕಳು ಮುದ್ರಿತ ಪುಟಗಳನ್ನು ಬಿಡಿಸಿ ಹರಡಿ ನಂತರ ಜೋಡಿಸಿ ಹೊಲಿದು ವಿಳಾಸ ಬರೆದು ಅಂಚೆಚೀಟಿ ಲಗತ್ತಿಸುವ ಹೊಣೆಯನ್ನು ನಿರ್ವಹಿಸುತ್ತಿದ್ದರು.[5]

ಅಲ್ಲದೆ ಅದನ್ನು ಕೊಂಡೊಯ್ದು ಅಂಚೆ ಕಛೇರಿಗೆ ಪತ್ರಿಕೆಗಳನ್ನು ತಲುಪಿಸುವ ಕೆಲಸವನ್ನು ಮಾಡುತ್ತಿದ್ದರು.

'ಸೋದರಿ' ಪತ್ರಿಕೆಯು ಡೆಮಿ ನಾಲ್ಕನೇ ಒಂದರ ಆಕಾರದಲ್ಲಿ 20 ಪುಟಗಳನ್ನು ಒಳಗೊಂಡ ಪತ್ರಿಕೆಯಾಗಿದ್ದು, ಸೋದರಿ ಪತ್ರಿಕೆಯ ಚಂದಾದಾರರಾಗಲು ಸ್ಥಳೀಯರು 6 ರೂಪಾಯಿಗಳನ್ನು ಮತ್ತು ಪರಸ್ಥಳದವರು 6 ರೂಪಾಯಿಯೊಡನೆ ಅಂಚೆವೆಚ್ಚ 12 ರೂಪಾಯಿಗಳನ್ನು ನೀಡಬೇಕಿತ್ತು. ಸೋದರಿ ಪತ್ರಿಕೆಯ ಬಿಡಿ ಸಂಚಿಕೆಯ ಮುಖಬೆಲೆ 2 ಆಣೆಯಾಗಿತ್ತು. 'ಸೋದರಿ' ಪತ್ರಿಕೆಯು ಅಂದಿನ ಕಾಲದಲ್ಲಿ ಮೂರರಿಂದ ನಾಲ್ಕು ಸಾವಿರ ಪ್ರತಿಗಳು ಮಾರಾಟವಾಗುತ್ತಿದ್ದು, ಕರ್ನಾಟಕದ ಹೊರರಾಜ್ಯಗಳಿಗೂ ಪತ್ರಿಕೆ ರವಾನೆಯಾಗುತ್ತಿತ್ತು. ಮೈಸೂರು ಸರ್ಕಾರದವರು ತಮ್ಮ ಆದೇಶ ಸಂಖ್ಯೆ ಟಿಬಿಸಿ 9/49–50 ಪತ್ರದ ಪ್ರಕಾರ ಹೆಣ್ಣು ಮಕ್ಕಳ ಎಲ್ಲಾ ಮಾಧ್ಯಮಿಕ ಮತ್ತು ಹೈಸ್ಕೂಲುಗಳಿಗೆ ಈ ಪತ್ರಿಕೆಯನ್ನು ಮಂಜೂರು ಮಾಡಿದ್ದರು. ಹಾಗೆಯೇ ಆದೇಶ ಸಂಖ್ಯೆ ಆರ್7ಸಿ 999–50–51 ರ ಪ್ರಕಾರ ಹಳ್ಳಿ ಪಂಚಾಯಿತಿಯವರು ಕೊಳ್ಳಬಹುದೆಂದು ಮಂಜೂರು ಮಾಡಿದ್ದರು.[6] ಸೋದರಿ ಪತ್ರಿಕೆಯು ಕತೆ, ಕವನ, ವೈಚಾರಿಕ ಲೇಖನ, ವಿಮರ್ಶೆ, ವಿನೋದ, ವ್ಯಕ್ತಿತ್ವ ಪರಿಚಯ, ಪ್ರಸಿದ್ಧ ವ್ಯಕ್ತಿಗಳ ಸಾಧನೆಗಳು, ಚಿತ್ರ, ನಾಟಕ, ಸಂಗೀತ, ವಿಮರ್ಶೆ, ಅನುವಾದಿತ ಲೇಖನ, ರೇಖಾಚಿತ್ರ, ಮಹಿಳಾ ಸಮಾಜದ ಹಾಗೂ ಮಹಿಳಾ ಸಂಘಗಳ ಚಟುವಟಿಕೆಗಳ ವರದಿಗಳನ್ನು ಒಳಗೊಂಡಿರುತ್ತಿತ್ತು. ಮಹಿಳೆಯರ ಹಕ್ಕು ಭಾಧ್ಯತೆಗಳನ್ನು ವಿವರಿಸಲೂ ರಚನಾತ್ಮಕ ದೃಷ್ಟಿಯಿಂದ ಅದನ್ನು ಸಾಧಿಸುವುದಕ್ಕಾಗಿಯೂ ನಮ್ಮ ಭಾವನೆಯನ್ನು ಭಾಷೆಯ ರೂಪದಲ್ಲಿ ಹೊರಗೆಡವಿ ಜಗತ್ತಿನ ಮುಂದಿರಿಸುವುದಕ್ಕಾಗಿಯೇ ಸೋದರಿ ಶ್ರಮಿಸುತ್ತಿದೆ ಎಂಬ ಪ್ರಕಟಣೆಯೊಂದಿಗೆ ಸೋದರಿ ತನ್ನತ್ತ ಗಮನವನ್ನು ಸೆಳೆಯುತ್ತಿತ್ತು.

1950 ಜನವರಿ 26 ರಂದು ಸೋದರಿ ಪತ್ರಿಕೆ ಚೊಚ್ಚಲ ಸಂಚಿಕೆ ಪ್ರಕಟವಾಯಿತು. ಸೋದರಿ ಪತ್ರಿಕೆಯ ಮುಖಪುಟದ ವಿನ್ಯಾಸವು ವಿಶಿಷ್ಟವಾಗಿದ್ದು ಶೀರ್ಷಿಕೆಯ ಕೆಳಗೆ ಒಂದು ಚೌಕಟ್ಟು ಅದರಲ್ಲಿ ಒಂದು ಮರದ ಕೆಳಗೆ ಸಂಪಾದಕಿ ಕೈಯಲ್ಲೊಂದು ಪುಸ್ತಕ ಹಿಡಿದು ಕುಳಿತಿದ್ದರು. ಅವರ ಮುಂದಿನ ಟೇಬಲ್ ಮೇಲೆ ಒಂದು ಟೈಪ್‌ರೈಟರ್ ಮತ್ತು ಪೆನ್ನೊಳಗೊಂಡ ಶಾಯಿ ಕುಂಡವಿದೆ. ಇವುಗಳ ಮುಂದೆ ಪತ್ರಿಕೆಯ ಬೆಲೆಯನ್ನು ಸೂಚಿಸುವ ಎರಡು ಆಣೆ ನಾಣ್ಯದ ಚಿತ್ರವಿದೆ. ಪತ್ರಿಕೆಯ ಬಣ್ಣಗಳು ಪ್ರತಿ ಸಂಚಿಕೆಯಲ್ಲಿಯೂ ಬದಲಾವಣೆಯಾಗುತ್ತಿದ್ದು, ವಿಶೇಷ ಲೇಖನದಿಂದ ಪ್ರಾರಂಭವಾಗಿ ಸೋದರಿಗೆ ಪತ್ರ ಎನ್ನುವ ಸಂಪಾದಕೀಯ ಪ್ರಕಟವಾಗುತ್ತಿತ್ತು. ಸಾಹಿತ್ಯಕ್ಕೆ ಸಂಬಂಧಪಟ್ಟ ಒಂದು ಲೇಖನ ವೈಚಾರಿಕ ಲೇಖನ. ಅಲ್ಲಿ ಇಲ್ಲಿ ಎನ್ನುವ ಪುಟದಲ್ಲಿ ದೇಶವಿದೇಶಗಳಲ್ಲಿನ ಮಹಿಳೆಯರ ಕುರಿತಾದ ವಿಷಯ, ಮಕ್ಕಳ ಪುಟಗಳನ್ನು ಒಳಗೊಂಡಿರುತ್ತಿತ್ತು.

ಲೇಖನಗಳು, ಕಥೆಗಳು ಅನೇಕ ಲೇಖಕರಿಂದ ಹರಿದು ಬರುತ್ತಿದ್ದು, ನೀಳಾದೇವಿ, ಜಯಲಕ್ಷ್ಮಿ ಶ್ರೀನಿವಾಸನ್, ಎನ್.ಎಂ.ಇಂದಿರಾ, ಪ್ರತಿಭಾ, ರುಕ್ಮಿಣಿಬಾಯಿ, ಗಿರಿಮಾಜಿ, ಜಯಲಕ್ಷಮ್ಮ, ಪಿ.ಆರ್.ರಾಮಯ್ಯ, ಹೆಚ್.ವೈ.ಸರಸ್ವತಮ್ಮ, ಟಿ.ಸುನಂದಮ್ಮ, ಶ್ರೀಮತಿ ಮಾಲತಿ ಶ್ರೀನಿವಾಸನ್ ಮುಂತಾದ ಖಾಯಂ ಲೇಖಕ ಬಳಗ ನಿರಂತರವಾಗಿ 'ಸೋದರಿ'ಯ ಜೊತೆಗಿದ್ದರು. ಪ್ರತಿ ಮಂಗಳವಾರ ಬೆಂಗಳೂರಿನಿಂದ ಹೊರಡುವ ಸೋದರಿ ವಾರಪತ್ರಿಕೆಯ ಮೈಸೂರಿನ ಪತ್ರಿಕೆಯ ಪ್ರತಿನಿಧಿಯಾಗಿ, ಸಲಹೆಗಾರ್ತಿಯಾಗಿ ಟಿ.ಸುನಂದಮ್ಮನವರು ಕಾರ್ಯನಿರ್ವಹಿಸಿದರೆ, ಧಾರವಾಡದಲ್ಲಿ ಶಾಂತಾದೇವಿ ಮಾಳವಾಡರವರು ಮತ್ತು ಮಂಗಳೂರಿನಲ್ಲಿ ರಾಧಾರಾವ್‌ರವರು ಪತ್ರಿಕೆಯ ಪ್ರತಿನಿಧಿಯಾಗಿ ಸಲಹೆಗಾರ್ತಿಯಾಗಿ ಕೆಲಸ ನಿರ್ವಹಿಸುತ್ತಿದ್ದರು.[7]

ಎಂ.ಆರ್.ಲಕ್ಷಮ್ಮನವರ ತಮ್ಮ ಪ್ರಥಮ ಸಂಚಿಕೆಯಲ್ಲಿ ಸಮಾಜದ ನ್ಯೂನತೆಗಳು, ಕೊರತೆಗಳು, ಇವುಗಳನ್ನು ನಿವಾರಿಸುವಲ್ಲಿ ಮಹಿಳಾ ಪತ್ರಿಕೆಗಳು ವಹಿಸಬೇಕಾದ ಪಾತ್ರ ಮುಂತಾದ ವಿಷಯಗಳ ವಿವರವನ್ನು ಬರೆದಿದ್ದಾರೆ. ಅವರು ತಮ್ಮ ಸಂಪಾದಕೀಯದಲ್ಲಿ ಸಮಾಜದಲ್ಲಿ ಕಾಳಸಂತೆ, ಲಂಚಗುಳಿತನ, ದುಷ್ಟವರ್ತನೆ ಇವೆಲ್ಲ ಬಹಳವಾಗಿವೆ. ಆದರೆ ಅದನ್ನು ಪ್ರತಿಭಟಿಸುವವರು ಬಲು ಕಡಿಮೆ. ದುಡಿಮೆಗೆ ಇದೊಂದು ವಿಧಿಯಿಲ್ಲದ ಮಾರ್ಗ ಎಂಬುದು ಕೆಲವರ ಮನೋಧರ್ಮ ಇಂತಹ ಸಮಾಜ ವಿನಾಶಕ ಶಕ್ತಿಯನ್ನು ತಡೆಗಟ್ಟಬೇಕಾದರೆ ಅದಕ್ಕೆ ಯೋಗ್ಯ ಸಂಸ್ಕಾರ ಒದಗಬೇಕು. ಇದನ್ನು ಶ್ರವಣ, ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳಿಂದ ಕೊಡಲು ಸಾಧ್ಯ. ಇವುಗಳ ಪೈಕಿ ಜಗತ್ತಿನ ಕಣ್ಣು ಕಿವಿ ಎಂದೇ ಹೇಳಲ್ಪಡುವ ಪತ್ರಿಕೆಗಳು ಮಾತ್ರ ಜನಸಾಮಾನ್ಯರ ವ್ಯಕ್ತಿತ್ವವನ್ನು ರೂಪಿಸಬಲ್ಲವು. ಈ ಕಾರ್ಯವನ್ನು ಮಹಿಳೆ ಕೈಗೊಂಡರಂತೂ ಅದು ಮತ್ತಷ್ಟು ಅರ್ಥ ಪೂರ್ಣವೂ ಜವಾಬ್ದಾರಿಯುತವೂ ಆಗುತ್ತದೆ. ಈಗಾಗಲೇ ಇರುವ ಮಹಿಳಾ ಪುಟಗಳನ್ನೇ ತುಂಬುವವರಿಲ್ಲ ಇನ್ನೂ ಈ ಪತ್ರಿಕೆಯೇಕೆ? ಎನ್ನುವವರಿಗೆ ಉತ್ತರವಿಷ್ಟೆ. ಮಹಿಳಾ ಪುಟಗಳೂ ಇವೆ. ಮಹಿಳೆಯರ ಚಟುವಟಿಗಳಿಗೆ ಉತ್ತೇಜನ ಕೊಡತಕ್ಕ ಪತ್ರಿಕೆಗಳೂ ಇಲ್ಲವೇ ಇಲ್ಲ. ಆದರೂ ಬಹುಮುಖವಾದ ಮಹಿಳೆಯರ ಆರ್ಥಿಕ, ಸಾಮಾಜಿಕ, ರಾಜಕೀಯ ತೊಡಕುಗಳು ಸಮರ್ಪಕವಾದ ಸಮಗ್ರವಾದುದೊಂದು ರೂಪದಲ್ಲಿ ಜನರ ದೃಷ್ಟಿಗೆ ಬಿದ್ದಿಲ್ಲ ಎಂದು ನಿರ್ವಾಹವಿಲ್ಲದೆ ಹೇಳಬೇಕಾಗಿದೆ. ಆದ್ದರಿಂದಲೇ ಈ ಪತ್ರಿಕೆ ಜನ್ಮತಾಳಿದೆ.

ಸೋದರಿ ಯಾವ ಬಗೆಯ ದಾಕ್ಷಿಣ್ಯಕ್ಕೆ ಒಳಗಾಗದೇ ಪಕ್ಷಪಾತಗಳಿಗೆ ಬಲಿಬೀಳದೆ ಅಕ್ರಮ ವರ್ತನೆಗೆ ಎಡೆಕೊಡದೆ ಇರಬೇಕೆಂದು ಸಂಕಲ್ಪ ತಾಳಿದೆ. ಜಾಹಿರಾತುಗಳನ್ನು ಎಚ್ಚರಿಕೆಯಿಂದ ಆಯ್ಕೆ ಮಾಡಲಾಗುವುದು. ಕಟು ಮನೋಭಾವಗಳಿಗೆ, ನಿಷ್ಠುರ ವಚನಗಳಿಗೆ, ಆಧಾರರಹಿತ ಹೇಳಿಕೆಗಳಿಗೆ ಇಲ್ಲಿ ಸ್ಥಳವಿಲ್ಲ.

ಸೋದರಿ ಕೇವಲ ಮಹಿಳಾ ಓದುಗರಿಗೆ ಮತ್ತು ಬರಹಗಾರ್ತಿಯರಿಗೆ ಮಾತ್ರವೇ ಮೀಸಲಾಗಿಲ್ಲ. ಎಂದಿನವರೆಗೆ ಸಂಸಾರವೆಂಬುದು ಭಾರತದ ಜನಜೀವನಕ್ಕೆ ಆಸ್ತಿಪ್ರಾಯವೋ, ಎಂದಿನವರೆಗೆ ಭಾರತದ ಹೆಣ್ಣು ಮಗಳಾಗಿ, ಪತ್ನಿಯಾಗಿ, ತಾಯಿಯಾಗಿ ಬಾಳುವಳೊ ಅಂದಿನ ತನಕ ಪುರುಷ ವರ್ಗಕ್ಕೊಂದು ಹಗೆತನವಿಲ್ಲ. ಕೂಡಿಯೇ ಹೊಸಬಾಳು ರಚಿಸೋಣ. ಅದರೆ ಸ್ತ್ರೀದೃಷ್ಟಿಗೂ ಪ್ರಾಧಾನ್ಯವಿರಲಿ ಎಂಬುದೇ ನಮ್ಮ ಧ್ಯೇಯ ಎಂಬ ಭಾವನೆ ವ್ಯಕ್ತಪಡಿಸುತ್ತಾರೆ.

ಸೋದರಿ ಪತ್ರಿಕೆ ಪ್ರಾರಂಭವಾದಾಗ ಸಾಧ್ವಿ, ವಿಶ್ವಕರ್ನಾಟಕ, ಕ್ರಾಂತಿ, ಸಂಯುಕ್ತ ಕರ್ನಾಟಕ, ನವಯುಗ, ತಾಯಿನಾಡು, ಪ್ರಜಾವಾಣಿ ಮತ್ತಿತರ ಪತ್ರಿಕೆಗಳು ಸ್ವಾಗತಿಸಿ ಸೋದರಿ ಬಗ್ಗೆ ಉತ್ತಮ ಲೇಖನಗಳನ್ನು ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿದವು. ಸೋದರಿ ಇತರ ಪತ್ರಿಕೆಗಳನ್ನು ತನ್ನ ಸೋದರ ಪತ್ರಿಕೆಗಳೆಂದು ತಿಳಿದು ಅವುಗಳಿಂದ ಸಹಾಯವನ್ನು ಪಡೆಯುತ್ತಿತ್ತು. ಎಂ.ಆರ್.ಲಕ್ಷಮ್ಮನವರು ಅಮೇರಿಕಾ ಮತ್ತಿತರ ದೇಶಗಳಿಗೆ ಪ್ರವಾಸ ಹೋದಾಗ ಅಲ್ಲಿಂದಲೇ ಸಂಪಾದಕೀಯವನ್ನು ಬರೆಯುತ್ತಿದ್ದರು. ವಿದೇಶಗಳಲ್ಲಿನ ವಿಶೇಷತೆಗಳ ಬಗ್ಗೆ ತಮ್ಮ ಪತ್ರಿಕೆಯಲ್ಲಿ ಬರೆಯುತ್ತಿದ್ದರು.

ದೇಶದ ನಾಡಿನ ಸಾಮಾಜಿಕ ರಾಜಕೀಯ ಪ್ರಸಕ್ತ ಪರಿಸ್ಥಿತಿಗಳ ಬಗ್ಗೆ ಅವುಗಳ ಸುಧಾರಣೆ ಬಗ್ಗೆ ಚಿಂತಿಸುತ್ತಿದ್ದ ಎಂ.ಆರ್.ಲಕ್ಷಮ್ಮನವರು ತಮ್ಮ ಲೇಖನಗಳಲ್ಲಿ ವ್ಯಕ್ತಪಡಿಸುತ್ತಿದ್ದರು. ಎಂ.ಆರ್.ಲಕ್ಷಮ್ಮನವರು ಸಮಾಜಸೇವೆ, ರಾಜಕೀಯ ಕ್ಷೇತ್ರಗಳಲ್ಲಿ ಸಂಪೂರ್ಣವಾಗಿ ತೊಡಗಿದ್ದರೂ ಸೋದರಿಯನ್ನು ಅಚ್ಚುಕಟ್ಟಾಗಿ ರೂಪಿಸುವಲ್ಲಿ ಮತ್ತು ನಿರ್ವಹಿಸುವಲ್ಲಿ ಆಸಕ್ತಿ ಕಡಿಮೆಯಾಗಲಿಲ್ಲ. ಆದರೆ ಬಿಡುವಿಲ್ಲದ ಕೆಲಸಗಳ ಮಧ್ಯೆ ಲೇಖನಗಳ ಸಂಗ್ರಹಣೆ, ಜಾಹೀರಾತು ಸಂಪಾದನೆ, ಹಣ ಹೊಂದಿಸಿಕೊಳ್ಳುವುದು ಎಲ್ಲವೂ ಕಷ್ಟವಾಗುತ್ತಿತ್ತು. ಒಂದು ಆದರ್ಶವನ್ನಿಟ್ಟುಕೊಂಡು ಪ್ರಾರಂಭವಾಗಿದ್ದ ಈ ಪತ್ರಿಕೆ ಆರ್ಥಿಕ ಲಾಭದ ಉದ್ದೇಶದಿಂದ ಕೂಡಿರಲಿಲ್ಲ. 6 ವರ್ಷಗಳ ಕಾಲ ಸೋದರಿ ಪ್ರಾಮಾಣಿಕವಾಗಿ ತನ್ನ ಕೆಲಸವನ್ನು ನಿರ್ವಹಿಸಿತು. ನಂತರ ಕಾರ್ಯಭಾರದ ಒತ್ತಡದಿಂದ 1956 ರಲ್ಲಿ ಸೋದರಿಯನ್ನು ಮಾಸಪತ್ರಿಕೆಯಾಗಿ ಬದಲಾಯಿಸಲಾಯಿತು. ಪತ್ರಿಕೆಯ ಹೊರವಿನ್ಯಾಸವನ್ನು ಬದಲಾಯಿಸಿ ಅರ್ಥಪೂರ್ಣವಾಗಿ ರಚಿಸಲಾಯಿತು. ಪತ್ರಿಕೆಯ ಆಕಾರ ಬದಲಾಗದೆ ಹಾಗೆ ಇದ್ದೂ, ಪತ್ರಿಕೆಯ ಮುಖಪುಟದ ಎಡಭಾಗದಲ್ಲಿ ನಗುಮುಖದ ಇಬ್ಬರು ಸ್ತ್ರೀಯರು, ಮಗುವಿಗೆ ಹಾಲುಣಿಸುತ್ತಿರುವ ಸ್ತ್ರೀ, ಬಾವುಟವನ್ನು ಹಿಡಿದಿರುವ ಸ್ತ್ರೀ, ಚರಕದಿಂದ ನೂಲುವ ಸ್ತ್ರೀ, ನೃತ್ಯ ಮಾಡುತ್ತಿರುವ ಸ್ತ್ರೀ, ಪುಸ್ತಕ ಓದುತ್ತಿರುವ ಸ್ತ್ರೀಯರ ಚಿತ್ರಗಳನ್ನು ರೇಖಾಚಿತ್ರದಿಂದ ಬಿಡಿಸಿದ್ದು, ಎಲ್ಲಾ ರಂಗದಲ್ಲಿಯೂ ಸ್ತ್ರೀಯರು ಇರುವುದನ್ನು ಸೂಚಿಸುತ್ತದೆ.[8] ಅದರ ಪಕ್ಕದಲ್ಲಿ ಸಮಾಜದ ವಿವಿಧ ವರ್ಗಗಳ ಚಿತ್ರಗಳನ್ನು ಪ್ರಕಟಿಸಲಾಗುತ್ತಿತ್ತು.

1956ರ ನಂತರ ಸೋದರಿ ಮಾಸಪತ್ರಿಕೆಯು 52 ಪುಟಗಳನ್ನು ಒಳಗೊಂಡಿದ್ದು, ಇದರ ಬಿಡಿ ಪ್ರತಿಯ ಬೆಲೆ 8 ಆಣೆಯಾಗಿತ್ತು. ಪತ್ರಿಕೆಯ ಚಂದಾಹಣವು ಮೊದಲಿನಂತೆ ಇದ್ದು, ಸೋದರಿ ಆರ್ಥಿಕ ಸಂಕಷ್ಟದಿಂದ ಬಳಲುತ್ತಿದ್ದು, ಪೋಷಕರು ನೂರು ರೂಪಾಯಿಗಳನ್ನು, ಅಜೀವ ಚಂದಾದಾರರು 75 ರೂಪಾಯಿಗಳನ್ನು, ಆಶ್ರಯದಾತರು 50 ಮತ್ತು ಸಹಾಯಕರು 25 ರೂಪಾಯಿ ನೀಡಿ ವಿಶೇಷ ಚಂದದಾರರಾಗಬಹುದಿತ್ತು. ಇದರೊಂದಿಗೆ ಕೇಂದ್ರೀಯ ಸಮಾಜಕಲ್ಯಾಣ ಮಂಡಲಿಯ ಚಟುವಟಿಕೆಗಳನ್ನು ಕನ್ನಡದಲ್ಲಿ ಪ್ರಕಟಿಸಲು ಅಧಿಕಾರ ಪಡೆದಿದ್ದ ಸೋದರಿಯು ಮಹಿಳೆಯ ಸರ್ವತೋಮುಖ ಅಭಿವೃದ್ದಿಗೆ ಬಹಳಷ್ಟು ಶ್ರಮಿಸುತ್ತಿತ್ತು. ಸೋದರಿ ಪತ್ರಿಕೆಯಲ್ಲಿ ಜಾಹೀರಾತುಗಳು ಪ್ರಕಟವಾಗುತ್ತಿದ್ದು, ಇತರ ಜಾಹೀರಾತುಗಳ ಜೊತೆಯಲ್ಲಿ ಮೈಸೂರು ಸರ್ಕಾರದ ಜಾಹೀರಾತುಗಳಾದ ದಿ ಮೈಸೂರು ಪೇಪರ್ ಮಿಲ್‌ನ ಜಾಹೀರಾತು ಮತ್ತು ಮೈಸೂರು ಸ್ಯಾಂಡಲ್ ಸೋಪಿನ ಜಾಹೀರಾತು ಕೂಡ ಸೇರಿದ್ದವು.

1950ರಲ್ಲಿ ಪ್ರಾರಂಭವಾದ ಸೋದರಿ 1957 ರವರೆಗೆ ಒಟ್ಟು 8 ವರ್ಷಗಳ ಕಾಲ ಪತ್ರಿಕೆಯು ಪ್ರಕಟವಾಗುತ್ತಿತ್ತು. ನಂತರ ನಿರ್ವಹಣೆ ಮತ್ತು ಕಾರ್ಯಭಾರದ ಒತ್ತಡದಿಂದ ಪತ್ರಿಕೆಯನ್ನು ನಿಲ್ಲಿಸಲಾಯಿತು. ಮಹಿಳೆಯ ಸಮ್ಮೇಳನಗಳ ಬಗ್ಗೆ, ಮಹಿಳೆಯರು ಮತ ಚಲಾಯಿಸುವ ಬಗ್ಗೆ, ಕರ್ನಾಟಕದ ಏಕೀಕರಣದ ಬಗ್ಗೆ ಇನ್ನೂ ಅನೇಕ ವಿಷಯಗಳ ಮಾಹಿತಿಯನ್ನು ನೀಡುತ್ತಿದ್ದ ಪತ್ರಿಕೆಯನ್ನು ಅನಿವಾರ್ಯ ಕಾರಣದಿಂದ ನಿಲ್ಲಿಸಿದರೂ ಎಂ.ಆರ್.ಲಕ್ಷಮ್ಮನವರ ಸಾಹಿತ್ಯಾಸಕ್ತಿ ಕಡಿಮೆಯಾಗಲಿಲ್ಲ. ಅವರು ಛಾಯ ಎಂಬ ಸಾಂಸ್ಕೃತಿಕ ಪತ್ರಿಕೆಗೆ ಸಣ್ಣಕತೆಗಳನ್ನು, ಡೆಕ್ಕನ್ ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್‌ಗಳಿಗೆ ಇಂಗ್ಲೀಷ್ ಲೇಖನಗಳನ್ನು ಬರೆಯುತ್ತಿದ್ದರು. ಅನೇಕ ನಾಟಕಗಳನ್ನು ಮಕ್ಕಳಿಗಾಗಿ ಬರೆದು ಆಕಾಶವಾಣಿಯಲ್ಲಿ ಮಕ್ಕಳಿಂದ ನಾಟಕ ಮಾಡಿಸುತ್ತಿದ್ದರು.

ಆರು ದಶಕಗಳ ಹಿಂದೆ ಪುರುಷ ಪ್ರಧಾನವಾಗಿದ್ದ ಸಮಾಜದಲ್ಲಿ ಪುರುಷರಿಗೂ ಕೂಡ ನಿರ್ವಹಿಸಲು ಕಷ್ಟಕರವಾದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಕಾಲಿಟ್ಟು ಸೋದರಿಯನ್ನು ದೊಡ್ಡದೊಡ್ಡ ಪತ್ರಿಕೆಗಳಿಗೆ ಸರಿಸಮಾನಾಗಿ ಯಶಸ್ವಿಯಾಗಿ ನಡೆಸಿದ ಎಂ.ಆರ್.ಲಕ್ಷಮ್ಮನವರ ಸಾಧನೆ ನಿಜಕ್ಕೂ ಅಚ್ಚರಿಯನ್ನು ಮೂಡಿಸುತ್ತದೆ

ಅಡಿ ಟಿಪ್ಪಣಿಗಳು

1. ಎಂ.ಆರ್.ಲಕ್ಷಮ್ಮನವರ ಸ್ವವಿವರ, ವಿಭಾಗೀಯ ಪತ್ರಗಾರ ಕಛೇರಿ, ಮೈಸೂರು. ಪುಟಸಂಖ್ಯೆ–1
2. ಎಂ.ಆರ್.ಲಕ್ಷಮ್ಮನವರ ಸ್ವವಿವರ, ವಿಭಾಗೀಯ ಪತ್ರಗಾರ ಕಛೇರಿ, ಮೈಸೂರು. ಪುಟಸಂಖ್ಯೆ–1
3. ಸಾಧ್ವಿ ಪತ್ರಿಕೆ, ದಿ.24–12–1945.
4. ಎಂ.ಆರ್.ಲಕ್ಷಮ್ಮನವರ ಸ್ವವಿವರ ವಿಭಾಗೀಯ ಪತ್ರಗಾರ ಕಛೇರಿ, ಮೈಸೂರು. ಪುಟಸಂಖ್ಯೆ–2
5. ನಂ.ನಾಗಲಕ್ಷ್ಮಿ ಕನ್ನಡ ಪತ್ರಿಕಾ ಲೋಕದ ಧೀಮಂತರು, ಭಾಗ–8, ಪುಟ ಸಂಖ್ಯೆ 78.

6. ಎಂ.ಆರ್.ಲಕ್ಷಮ್ಮನವರ ಸೋದರಿ ಪತ್ರಿಕೆ, 1950, ಪುಟಸಂಖ್ಯೆ-19
7. ಎಂ.ಆರ್.ಲಕ್ಷಮ್ಮನವರ ಸೋದರಿ ಪತ್ರಿಕೆ, 1950.
8. ಎಂ.ಆರ್.ಲಕ್ಷಮ್ಮನವರ ಸೋದರಿ ಪತ್ರಿಕೆ, 1956.

ಅಧ್ಯಾಯ ಆರು

ಸಮಾಜ ಸೇವಾ ಕ್ಷೇತ್ರ ಮತ್ತು ಎಂ.ಆರ್.ಲಕ್ಷಮ್ಮ

ಎಂ.ಆರ್.ಲಕ್ಷಮ್ಮನವರು ತಮ್ಮ ಸ್ನಾತಕೋತ್ತರ ಶಿಕ್ಷಣ ಪೂರೈಸಿದ ನಂತರ ಸುಮ್ಮನೆ ಮನೆಯಲ್ಲಿರುವುದಕ್ಕಿಂತ ಕೆಲಸಕ್ಕೆ ಸೇರುವುದೆಂದು ನಿಶ್ಚಿಯಿಸಿ ತಂದೆಯವರಲ್ಲಿ ಕೆಲಸಕ್ಕೆ ಸೇರುತ್ತೇನೆ ಎಂದು ಅನುಮತಿಯನ್ನು ಕೇಳಿದಾಗ, ಅವರ ತಂದೆಯವರು ಕೆಲಸಕ್ಕೆ ಸೇರಿ ಹಣ ಸಂಪಾದಿಸುವುದಕ್ಕಿಂತ ನೀನೊಬ್ಬ ಸಮಾಜ ಸೇವಕಿಯಾಗ ಬೇಕೆಂಬುದು ನನ್ನಾಸೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ತಂದೆಯವರ ಮಾತನ್ನು ಅಕ್ಷರಶಃ ಪಾಲಿಸಿದ ಲಕ್ಷಮ್ಮನವರು ತಮ್ಮ ಕೊನೆಗಾಲದವರೆಗೂ ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಲಕ್ಷಮ್ಮನವರ ಪತಿ ಎಂ.ನಾರಾಯಣಮೂರ್ತಿಯವರು ತಮ್ಮ ಪತ್ನಿ ಸಮಾಜ ಸೇವಾಕಾರ್ಯವನ್ನು ಕೈಗೊಳ್ಳಲು ಒಪ್ಪಿಕೊಂಡರು. ಲಕ್ಷಮ್ಮನವರಿಗಿದ್ದ ಮಾನವಿಯ ಚಿಂತನೆಗಳು, ಅವರ ಸಮಾಜಮುಖಿ ವ್ಯಕ್ತಿತ್ವ, ಜಾಣ್ಮೆ, ಮಾತುಗಾರಿಕೆ ಜೊತೆಗೆ ತಾಳ್ಮೆ ಮತ್ತು ಸದಾ ಹಸನ್ಮುಖ ಅವರ ಸಮಾಜಸೇವೆಗೂ ಇನ್ನಷ್ಟು ಸಹಕಾರಿಯಾದವು.

ಮಹಿಳಾ ಮಂಡಳಿಗಳ ಸ್ಥಾಪನೆ

ಲಕ್ಷಮ್ಮನವರು ಕಾಲೇಜು ವಿದ್ಯಾಭ್ಯಾಸ ಮಾಡುತ್ತಿದ್ದಾಗಲೇ ನಾ.ಕಸ್ತೂರಿ ಮುಂತಾದವರೊಂದಿಗೆ ಸೇರಿ ಪ್ರೊ, ಈಗಲ್ಟನ್ ನೇತೃತ್ವದಲ್ಲಿ ಮೈಸೂರಿನ ಕೂರ್ಗಳ್ಳಿಯಲ್ಲಿ ಅನಕ್ಷರಸ್ಥರಿಗೆ ಅಕ್ಷರ ಕಲಿಸುವ ಕಾರ್ಯವನ್ನು ಕೈಗೊಂಡಿದ್ದರು. ಮಹಿಳೆಯರು, ಅಕ್ಷರಸ್ಥರು, ವಿದ್ಯಾವಂತರೂ ಅಗಬೇಕು ಹಾಗೂ ತಮ್ಮನ್ನು ದೇಶಸೇವೆಯಲ್ಲಿ ತೊಡಗಿಸಿಕೊಳ್ಳಬೇಕೆಂಬುದು ಇವರ ಆಕಾಂಕ್ಷೆಯಾಗಿತ್ತು. 1946–47 ರಲ್ಲಿ ಅನೇಕ ಮಹಿಳಾ ಮಂಡಳಿಗಳನ್ನು ಮೈಸೂರು ಮತ್ತು ಬೆಂಗಳೂರಿನಲ್ಲಿ ಸ್ಥಾಪಿಸಿದರು.[1] ಮೈಸೂರಿನ ವನಿತಾಸದನ ಮಹಿಳಾ ಸಮಾಜದ ಅಧ್ಯಕ್ಷೆಯಾಗಿ ಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಮಹಿಳಾ ಮಂಡಳಿಗಳ ನೇತೃತ್ವಗಳಲ್ಲಿ ಪ್ರತಿ ವರ್ಷವು ಮಹಿಳಾ ಸಮ್ಮೇಳನವು ನಡೆಯುತಿತ್ತು. 1926 ರಿಂದ ಮೈಸೂರು ಸಂಸ್ಥಾನದಲ್ಲಿ ಮಹಿಳಾ ಸಮ್ಮೇಳನಗಳು ನಡೆಯುತ್ತಿದ್ದವು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಮಹಿಳೆಯರು ಕೂಡ ಚಳವಳಿಗಳಲ್ಲಿ ಭಾಗವಹಿಸುತ್ತಿದ್ದು, ಮಹಿಳಾಮಂಡಳಿಗಳು ಗಾಂಧೀಜಿಯವರ ಪ್ರಭಾವದಿಂದ ರಚನಾತ್ಮಕ ಕಾರ್ಯಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಮೈಸೂರು ಸಂಸ್ಥಾನದ ಮಹಿಳಾ ಸಮ್ಮೇಳನದ 20ನೇ ಅಧಿವೇಶನವು ದಿನಾಂಕ 16–11–46 ರಂದು ಬೆಂಗಳೂರಿನ ಶಂಕರಪುರದ ಮಹಿಳಾ ಸಮಾಜದಲ್ಲಿ ಶ್ರೀಮತಿ ರಾಮಸ್ವಾಮಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ಜರುಗಿತು. ಅಲ್ಲಿ ಮಹಿಳೆಯರ ವಿದ್ಯಾಭ್ಯಾಸ, ಸಾಮಾಜಿಕ ಸುಧಾರಣೆ, ವೈದ್ಯ, ಸೌಕರ್ಯಗಳನ್ನು

ಕುರಿತು ಅನೇಕ ನಿರ್ಣಯಗಳ ಜೊತೆಗೆ ಮಹಿಳೆಯೊಬ್ಬರು ಮಂತ್ರಿಯಾಗಬೇಕು ಎನ್ನುವ ನಿರ್ಣಯವನ್ನು ತೆಗೆದುಕೊಳ್ಳಲಾಯಿತು.[2] ಮಹಿಳಾ ಮಂಡಳಿಗಳು ದಾನಿಗಳಿಂದ ಹಣ ಸಂಗ್ರಹಿಸಿ, ಅವುಗಳನ್ನು ಮಹಿಳೆಯರ ಕಲ್ಯಾಣ ನಿಧಿಗಾಗಿ ವಿನಿಯೋಗಿಸಲು ತೀರ್ಮಾನಿಸಲಾಯಿತು. ಪಂಡಿತ ಸುಂದರಮ್ಮನವರು ಮೈಸೂರಿನ ಒಂಟಿಕೊಪ್ಪಲಿನಲ್ಲಿರುವ 40,000 ರೂಪಾಯಿ ಬೆಲೆ ಬಾಳುವ ಮನೆ ಮತ್ತು ಸೈಟನ್ನು ಮಹಿಳೆಯರ ಸಾಂಸ್ಕೃತಿಕ ಮತ್ತು ಆರ್ಥಿಕ ಬೆಳವಣಿಗೆಗೆ ಉದಾರವಾಗಿ ದಾನ ಮಾಡಿದರು. ಅಲ್ಲಿ ಒಂದು ಸಾಯಿಬಾಬಾ ಮಂದಿರ ಮತ್ತು ನಿರ್ಗತಿಕ ಮಹಿಳೆಯರ ಸದನ ಇವುಗಳನ್ನು ನಿರ್ಮಿಸಲು ನಿರ್ಧರಿಸಿದ್ದಾರೆ. ಮಹಿಳಾ ಅಧ್ಯಕ್ಷರಾದ ಎಂ.ಆರ್.ಲಕ್ಷಮ್ಮನವರು ನಿರ್ಗತಿಕ ಮಹಿಳೆಯರ ಸದನ ನಿರ್ಮಾಣಕ್ಕೆ ಮಹನೀಯರು ಉದಾರ ಧನಸಹಾಯ ಮಾಡಬೇಕೆಂದು ಮನವಿ ಮಾಡುತ್ತಾ, ಸಹಾಯ ಮಾಡುವವರು ಟಿ.ಸುನಂದಮ್ಮ, ಸ್ವರಾಜ್ಯಭವನ, ಒಂಟಿಕೊಪ್ಪಲ್, ಮೈಸೂರು ಎಂಬ ವಿಳಾಸಕ್ಕೆ ಕಳುಹಿಸಿ ಕೊಡಬೇಕೆಂದು ಮನವಿ ಮಾಡಿದ್ದಾರೆ.[3]

1947ರ ನವೆಂಬರ್‌ನಲ್ಲಿ ಮೈಸೂರು ಸಂಸ್ಥಾನದ ಮಹಿಳಾ ಸಮ್ಮೇಳನ ನಡೆಯಲಿದ್ದು, ಮೈಸೂರು ಜಿಲ್ಲಾ ಶಾಖೆಗೆ ಎಂ.ಎನ್.ಸೀತಮ್ಮನವರು ಕಾರ್ಯದರ್ಶಿನಿಯಾಗಿ, ಕಾರ್ಯಕಾರಿಸಮಿತಿಯ ಸದಸ್ಯೆಯಾಗಿ ಎಂ.ಆರ್.ಲಕ್ಷಮ್ಮನವರು ಅಯ್ಕೆಯಾಗಿದ್ದರು.[4] ಅಧಿಕ ಸಂಖ್ಯೆಯಲ್ಲಿ ಮಹಿಳೆಯರನ್ನು ಸಂಘಟಿಸಿ, ಮಹಿಳಾ ಸಮ್ಮೇಳನ ಯಶಸ್ವಿಯಾಗಿ ನಡೆಯಲು ಎಂ.ಆರ್.ಲಕ್ಷ ಮ್ಮನವರು ಕಾರಣ ಕರ್ತರಾದರು. ಎಂ.ಆರ್.ಲಕ್ಷ ಮ್ಮನವರು ಮಾತೃ ಮಂಡಳಿ ವಾರ್ಷಿಕೋತ್ಸವದಲ್ಲಿ ಸತ್ಯಾಗ್ರಹದಲ್ಲಿ ಭಾಗವಹಿಸಿದ ಮಹಿಳೆಯರನ್ನು ಸನ್ಮಾನಿಸುತ್ತಾ, ಮಾತನಾಡಿ ಹೈದರಾಬಾದಿನ ಸತ್ಯಾಗ್ರಹಕ್ಕೆ ಮಹಿಳೆಯರ ಬೆಂಬಲಬೇಕೆಂದು ಕೋರಿದರು.[5] ಎಂ.ಆರ್.ಲಕ್ಷಮ್ಮ ನವರು ಮಹಿಳಾ ಮಂಡಳಿಯ ಸೇವಾ ಕಾರ್ಯಗಳಲ್ಲಿ ಸತತವಾಗಿ ತಮ್ಮನ್ನು ತೊಡಗಿಸಿಕೊಂಡರು. ಮಹಿಳಾ ಮಂಡಳಿಯ ಸಭೆಯಲ್ಲಿ ಮಾತನಾಡುತ್ತಾ ಲಕ್ಷಮ್ಮನವರು ಮಹಿಳೆಯರು ಸಮಾಜದ ಸೇವೆಯನ್ನು ಕೈಗೊಳ್ಳಬೇಕೆಂದು ಕಷ್ಟದಲ್ಲಿ ಸಿಲುಕಿರುವ ಅಕ್ಕತಂಗಿಯರನ್ನು ಸಲಹಲು ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ಹೇಳಿದರು. ನಿರಾಶ್ರಿತ ಸ್ತ್ರೀಯರ ಮಕ್ಕಳ ಉಪಯೋಗಕ್ಕಾಗಿ ದಾನಿಗಳು ನೀಡಿದ ಹಣವನ್ನು ವಿನಿಯೋಗಿಸಬೇಕೆಂದು ತೀರ್ಮಾನಿಸಲಾಯಿತು.

ಎಂ.ಆರ್.ಲಕ್ಷಮ್ಮನವರ ನೇತೃತ್ವದಲ್ಲಿ ಮಹಿಳಾ ಮಂಡಳಿಯಲ್ಲಿ ಅನೇಕ ವಿಶಿಷ್ಟವಾದ ನೂತನವಾದ ಕಾರ್ಯ ಕಲಾಪಗಳನ್ನು ಕೈಗೊಳ್ಳುತ್ತಿದ್ದು, ಸ್ತ್ರೀಯರ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದರು. ದಿನಾಂಕ:20-01-1948 ರಂದು ಸಂಜೆ ಸಾಧ್ವಿ ಪತ್ರಿಕಾ ಕಛೇರಿ ಮೇಲೆ ಮಹಿಳಾ ಮಂಡಳಿಯ ಸಭೆ ನಡೆದು ಶಾಸನ ಸಭಾ ಸದಸ್ಯೆಯಾದ ಬೆಂಗಳೂರಿನ ಶ್ರೀಮತಿ ಕಮಲಾಬಾಯಿಯವರು ಭಾಷಣ ಮಾಡಿ,

ಸ್ತ್ರೀಯರಿಗೆ ಈಗಿನ ವಿದ್ಯಾಭ್ಯಾಸದಿಂದ ಪ್ರಯೋಜನವಿಲ್ಲವೆಂದು ಆತ್ಮಾವಲಂಬನೆಗೆ ಸಾಧಕವಾದ ವಿದ್ಯೆಯನ್ನು ಕಲಿಯಬೇಕೆಂದು ಹೇಳಿದರು.[6] ಮಹಿಳೆಯರಿಗೆ ಔದ್ಯೋಗಿಕ ಶಿಕ್ಷಣವನ್ನು ನೀಡುವುದರೊಂದಿಗೆ ಅವರು ಆರ್ಥಿಕ, ಸ್ವಾವಲಂಬನೆ, ಸಾಧಿಸಲು ಸಾಧ್ಯವಾಗುತ್ತದೆ. ಮಹಿಳಾ ಮಂಡಳಿಯ ನೇತೃತ್ವದಲ್ಲಿ ಮಹಿಳೆಯರಿಗೆ ತರಬೇತಿಯನ್ನು ನೀಡಲು ಎಂ.ಆರ್.ಲಕ್ಷಮ್ಮನವರು ಕಾರ್ಯಪ್ರವೃತ್ತರಾದರು. ಮೈಸೂರು ಸಂಸ್ಥಾನದಲ್ಲಿ ಮಹಿಳೆಯರಿಗಾಗಿ ಗೃಹ ಕೈಗಾರಿಕೆಗಳ ಬಗ್ಗೆ ತರಬೇತಿ ನೀಡಲು ಕಸ್ತೂರಿಬಾಯಿ ಶಿಬಿರಗಳನ್ನು ಏರ್ಪಡಿಸುತ್ತಿದ್ದು, ಎಂ.ಆರ್.ಲಕ್ಷಮ್ಮನವರು ಅನೇಕ ಮಹಿಳಾ ಸಂಘ ಮತ್ತು ಯುವಕ ಸಂಘಗಳ ನೇತೃತ್ವದಲ್ಲಿ ಕಸ್ತೂರಿಬಾಯಿಸಮಾಜವನ್ನು ಪ್ರಾರಂಭಿಸಿದರು.

ಮೈಸೂರು ರಾಜ್ಯದ ಸಮಾಜ ಕಲ್ಯಾಣ ಇಲಾಖೆಯ ಅಧ್ಯಕ್ಷೆಯಾಗಿ ಎಂ.ಆರ್.ಲಕ್ಷಮ್ಮನವರು.

ಮಹಿಳೆಯರ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದ ಎಂ.ಆರ್.ಲಕ್ಷಮ್ಮನವರು ಮಹಿಳೆಯ ಅಭಿವೃದ್ಧಿಗಾಗಿ ಬಹಳಷ್ಟು ಶ್ರಮಿಸಿದರು. ಮಹಿಳೆಯರಿಗಾಗಿ ಮಹಿಳಾ ಮಂಡಳಿಗಳನ್ನು ಸ್ಥಾಪನೆ ಮಾಡುವುದರ ಜೊತೆಗೆ ವಿಧಾನ ಪರಿಷತ್ತಿನ ಸದಸ್ಯೆಯಾಗಿದ್ದಾಗ 1954ರಲ್ಲಿ ಅಮೇರಿಕಾಕ್ಕೆ ಭೇಟಿ ನೀಡಿ, ಅಲ್ಲಿನ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಅಧ್ಯಯನ ಮಾಡಿದರು. ಅಮೇರಿಕಾದಲ್ಲಿ ನಾಲ್ಕುವರೆ ತಿಂಗಳ ಕಾಲ ತಂಗಿದ್ದು, ಹಿಂತಿರುಗಿದ ಮೇಲೆ ಎಂ.ಆರ್.ಲಕ್ಷಮ್ಮನವರು ಮೈಸೂರು ರಾಜ್ಯದ ಸಮಾಜ ಕಲ್ಯಾಣದ ಸಲಹಾಸಮಿತಿಯ ಪ್ರಥಮ ಅಧ್ಯಕ್ಷೆಯಾಗಿ ನೇಮಿಸಲ್ಪಟ್ಟರು.[7] ಅವರು ಅನೇಕ ಅಭಿವೃದ್ಧಿ ಯೋಜನೆಗಳನ್ನು ಸಾಕಾರಗೊಳಿಸಲು ಸಂಘಟಿಸುವ ಕಾರ್ಯದಲ್ಲಿ ತೊಡಗಿದರು. ದಿನಕ್ಕೆ ಎಂಟರಿಂದ ಹತ್ತು ಗಂಟೆಗಳ ಕಾಲ ತಮ್ಮನ್ನು ತಾವು ತೊಡಗಿಸಿಕೊಂಡು ಮಹಿಳೆಯರ ಅಭಿವೃದ್ಧಿಗಾಗಿ ಶ್ರಮಿಸಿದರು.

ಶ್ರೀಮತಿ ದುರ್ಗಾಬಾಯಿ ದೇಶಮುಖರವರ ನೇತೃತ್ವದಲ್ಲಿ ಕೇಂದ್ರ ಸಮಾಜ ಕಲ್ಯಾಣ ಯೋಜನೆ ಸಂಸ್ಥೆ ಸ್ಥಾಪಿತವಾಯಿತು. ಅದು ನಾಲ್ಕು ಅಂಗ ಸಂಸ್ಥೆಗಳನ್ನು ರಚಿಸಿ, ಭಾರತಾದ್ಯಂತ ಮಹಿಳೆಯರಿಗಾಗಿ ಮತ್ತು ಮಕ್ಕಳಿಗಾಗಿ ಶ್ರಮಿಸಲು ಪ್ರಾರಂಭಿಸಿತು. 1954ರ ಮಾರ್ಚ್ ತಿಂಗಳಲ್ಲಿ ಪ್ರಾರಂಭವಾದ ಸಮಾಜ ಕಲ್ಯಾಣ ಯೋಜನಾ ಸಂಸ್ಥೆ ಭಾರತಾದ್ಯಂತ 27 ಸಂಸ್ಥಾನಗಳಲ್ಲಿ ರಾಜ್ಯ ಸಮಾಜ ಕಲ್ಯಾಣ ಸಂಸ್ಥೆ ಪ್ರಾರಂಭಿಸಿತು. ಪ್ರಾಂತ್ಯಗಳಲ್ಲಿ ಮಹಿಳೆಯರು ಮತ್ತು ಪುರುಷರು ಆದರ ಸದಸ್ಯರಾಗಿ ಕೇಂದ್ರ ಸಂಸ್ಥೆ ಮತ್ತು ರಾಜ್ಯ ಸರ್ಕಾರದ ಮಧ್ಯವರ್ತಿಯಾಗಿ ಕೆಲಸ ಮಾಡುವ ಜವಾಬ್ದಾರಿಯನ್ನು ವಹಿಸುವರು. ಪ್ರಾಂತ್ಯದಲ್ಲಿರುವ ಸಮಾಜ ಕಲ್ಯಾಣ ಸಂಸ್ಥೆಯ ಖರ್ಚುವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನಾಗಿ ಭರಿಸಬೇಕು. ಮೈಸೂರು ರಾಜ್ಯವನ್ನು 'ಬಿ' ಶ್ರೇಣಿಯ ಪ್ರಾಂತ್ಯವೆಂದು ನಿರ್ಧರಿಸಿದ್ದು 10 ಯೋಜನಾ ಕೇಂದ್ರಗಳನ್ನು ಇಲ್ಲಿ ಸ್ಥಾಪಿಸಲಾಯಿತು.

ಮೈಸೂರು ರಾಜ್ಯದಲ್ಲಿ 1954 ಅಕ್ಟೋಬರ್ 21ರಂದು ರಚನೆಯಾದ ರಾಜ್ಯ ಸಮಾಜ ಕಲ್ಯಾಣಸಲಹಾ ಸಮಿತಿಯು ಡಿಸೆಂಬರ್‌ನಲ್ಲಿ ತನ್ನ ಕಾರ್ಯಾರಂಭ ಮಾಡಿತು. ಅದರ ಪ್ರಥಮ ಅಧ್ಯಕ್ಷೆಯಾಗಿ ಎಂ.ಆರ್.ಲಕ್ಷಮ್ಮನವರು ಅನೇಕ ಕಾರ್ಯಕ್ರಮಗಳನ್ನು ಕೈಗೊಂಡರು. ಸಮಾಜ ಸೇವಾ ಕಾರ್ಯದಲ್ಲಿ ನಿರತರಾಗಿರುವ ಸ್ವಯಂ ಪ್ರೇರಿತ ಕಲ್ಯಾಣ ಸಂಸ್ಥೆಗಳ ಕಾರ್ಯಕ್ರಮವನ್ನು ರೂಪಿಸುವುದು. ಅವುಗಳಿಗೆ ಅಗತ್ಯವಾದ ಸಹಾಯ ಮತ್ತು ಧನಸಹಾಯ ಮಾಡುವುದು. ಅವುಗಳನ್ನು ಪರಿಶೀಲನೆ ಮಾಡುವುದು. ಇತ್ಯಾದಿ ಜವಾಬ್ದಾರಿಗಳನ್ನು ಹೊತ್ತುಕೊಂಡ ಎಂ.ಆರ್.ಲಕ್ಷಮ್ಮನವರು ಸಕ್ರಿಯವಾಗಿ ಭಾಗವಹಿಸಿದರು.[8]

ಗ್ರಾಹಕರ ವೇದಿಕೆಯ ಅಧ್ಯಕ್ಷೆಯಾಗಿ ಎಂ.ಆರ್.ಲಕ್ಷಮ್ಮ

ಎಂ.ಆರ್.ಲಕ್ಷಮ್ಮನವರು 1974ರಲ್ಲಿ ಬಿ.ಎನ್.ಗುಪ್ತಾರವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿದ ಕರ್ನಾಟಕ ರಾಜ್ಯ ಗ್ರಾಹಕರ ವೇದಿಕೆಯ ಕಾರ್ಯಾಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿದರು. ನಾಗರೀಕ ಸೇವೆಗಳ ಬಗ್ಗೆ ಕಳಕಳಿ ಇದ್ದ ಲಕ್ಷಮ್ಮನವರು ಗ್ರಾಹಕರ ವೇದಿಕೆಯ ಕಾರ್ಯಾಧ್ಯಕ್ಷೆಯಾಗಿ ಸೇವೆ ಸಲ್ಲಿಸಿದರು. ಗ್ರಾಹಕರಿಗೆ ಜಾಗೃತಿ ಮೂಡಿಸುವಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ರಾಜ್ಯ ಗ್ರಾಹಕರ ವೇದಿಕೆ ಲಕ್ಷಮ್ಮನವರ ನೇತೃತ್ವದಲ್ಲಿ ಮಹಿಳಾ ಮಂಡಳಿಗಳಲ್ಲಿ, ಕೊಳಗೇರಿ ಪ್ರದೇಶಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಿತು. ತೂಕ ಮತ್ತು ಅಳತೆಗಳ ಬಗ್ಗೆ, ಆಹಾರ ಕಲಬೆರಕೆಯ ಬಗ್ಗೆ, ಸಾರಿಗೆ ಸಂಪರ್ಕ, ಹಕ್ಕು ಮತ್ತು ಜವಾಬ್ದಾರಿ, ಬ್ಯಾಂಕುಗಳಲ್ಲಿ ಹಣ ನಿರ್ವಹಣೆ ಬಗ್ಗೆ, ವಿದ್ಯುಚ್ಛಕ್ತಿಯ ಬಳಕೆ ಮತ್ತು ಉಳಿತಾಯದ ಬಗ್ಗೆ, ಅಡುಗೆ ಅನಿಲ ಬಳಕೆ ಬಗ್ಗೆ ವಿಶೇಷ ಉಪನ್ಯಾಸ ಕಾರ್ಯಕ್ರಮಗಳನ್ನು ಜನಸಾಮಾನ್ಯರಿಗೆ ತಿಳಿಸುವ, ಅರಿವು ಮೂಡಿಸುವ ಕೆಲಸವನ್ನು ಲಕ್ಷಮ್ಮನವರು ಮಾಡುತ್ತಿದ್ದರು.[9]

ಕರ್ನಾಟಕ ಗ್ರಾಹಕರ ವೇದಿಕೆಯಿಂದ ಹಾಲು, ಗೋಧಿ ಮುಂತಾದ ಉತ್ಪನ್ನಗಳು, ಸಾಗರೋತ್ಪನ್ನಗಳು, ಮಕ್ಕಳ ಆಹಾರ, ಹಸಿರು ತರಕಾರಿ, ಸಾವಯವ ಉತ್ಪನ್ನಗಳ ಬಗ್ಗೆ ವಸ್ತು ಪ್ರದರ್ಶನಗಳನ್ನು ಏರ್ಪಡಿಸಲಾಗುತಿತ್ತು. ಸಂಬಂಧಪಟ್ಟ ಇಲಾಖೆಗಳ ಸಹಯೋಗದೊಂದಿಗೆ ಮಹಿಳಾ ಮಂಡಳಿಗಳಲ್ಲಿ ವನಿತಾ ಸಮಾಜಗಳಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತಿತ್ತು. ಗ್ರಾಹಕರ ವೇದಿಕೆಯಲ್ಲಿ ಲಕ್ಷಮ್ಮನವರು ನಿರ್ವಹಿಸಿದ ಕಾರ್ಯಕ್ರಮಗಳು ಜನರಲ್ಲಿ ಜಾಗೃತಿಯನ್ನು ಮೂಡಿಸಲು ಸಹಕಾರಿಯಾಯಿತು.

ಅಂಗಡಿಗಳಿಂದ ಮಾರಾಟ ಮಾಡುತ್ತಿದ್ದ, ಸರಕಿನ ಗುಣಮಟ್ಟವನ್ನು ಕಲಬೆರಕೆಯಾಗಿದ್ದರ ಬಗ್ಗೆ ಪರೀಕ್ಷೆಗಳನ್ನು ಮಾಡಲಾಗುತ್ತಿತ್ತು. ತೂಕ ಮತ್ತು ಅಳತೆಗಳಲ್ಲಿ ಆಗುತ್ತಿದ್ದ ಮೋಸವನ್ನು ಕಂಡು ಹಿಡಿದು ಸಮಸ್ಯೆಗಳನ್ನು ಪರಿಹರಿಸುವ ಕಾರ್ಯದಲ್ಲಿ ಗ್ರಾಹಕರ ವೇದಿಕೆಯ ಪಾತ್ರ ಮಹತ್ವವಾಗಿದೆ. ಎಂ.ಆರ್.ಲಕ್ಷ್ಮಮ್ಮನವರ ನೇತೃತ್ವದಲ್ಲಿ ಕರ್ನಾಟಕ ಗ್ರಾಹಕರ ವೇದಿಕೆ ನೂರಾರು ಪುರುಷರಿಗೆ ಮತ್ತು ಮಹಿಳೆಯರಿಗೆ ತರಬೇತಿಯನ್ನು ನೀಡಿ, ಆಹಾರ ಕಲಬೆರಕೆಯ ಪ್ರಾತ್ಯಕ್ಷಿಕೆಯನ್ನು ಪ್ರಯೋಗಾಲಯಗಳಲ್ಲಿ ಮಾಡಿ ತೋರಿಸಿತು. ಕಳಪೆ ಗುಣಮಟ್ಟದ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿಗಳ ಮೇಲೆ ಆರೋಗ್ಯಾಧಿಕಾರಿಗಳು ದಾಳಿ ಮಾಡಿ ಅವುಗಳನ್ನು ವಶಪಡಿಸಿಕೊಂಡು ಕೇಸನ್ನು ದಾಖಲಿಸುವ ಕಾರ್ಯವನ್ನು ಗ್ರಾಹಕರ ವೇದಿಕೆಯು ನಿರ್ವಹಿಸುತ್ತಿತ್ತು.[10]

ಕರ್ನಾಟಕ ರಾಜ್ಯ ಗ್ರಾಹಕರ ವೇದಿಕೆಯು ಬಳಕೆದಾರ ಎನ್ನುವ ವಾರ್ತಾಪತ್ರವನ್ನು ಪ್ರಕಟಿಸುತ್ತಿದ್ದು, 1974ರ ಸಂಚಿಕೆ ಒಂದರಲ್ಲಿ ಕಾರ್ಯಾಧ್ಯಕ್ಷೆಯಾದ ಎಂ.ಆರ್.ಲಕ್ಷ್ಮಮ್ಮನವರು ಬೆಂಗಳೂರು ನಾಗರೀಕರಲ್ಲಿ ವಿನಂತಿ ಎಂಬ ಲೇಖನದಲ್ಲಿ ಆಹಾರ ಕಲಬೆರಕೆ, ಮೋಸ, ವಂಚನೆ, ಲಂಚಗುಳಿತನ ಮುಂತಾದ ಸಾಮಾಜಿಕ ಪಿಡುಗುಗಳನ್ನು ನಿವಾರಿಸುವಲ್ಲಿ ಇಂತಹ ಸಂಘಟನೆಯ ಮಹತ್ವವನ್ನು ತಿಳಿಸಿದ್ದಾರೆ. ಜನತೆಯು ಎಚ್ಚೆತ್ತುಕೊಂಡು ಸಂಘ ಸಂಸ್ಥೆಗಳ ಸಹಕಾರದಿಂದ ಸಾತ್ವಿಕ ಚಳವಳಿಯನ್ನು ಕೈಗೊಳ್ಳಬೇಕೆಂದು ನಾಗರೀಕ ಪ್ರಜ್ಞೆಯನ್ನು ಬಡಿದೆಬ್ಬಿಸುವ ಕಾರ್ಯವನ್ನು ಕೈಗೊಂಡಿದ್ದಾರೆ. ಭಾರತದಲ್ಲಿ ಗ್ರಾಹಕರ ಚಳುವಳಿಯ 70ರ ದಶಕದಲ್ಲಿ ಪ್ರಾರಂಭವಾಯಿತು. ಆದರೆ ಅಮೇರಿಕಾದಲ್ಲಿ ಗ್ರಾಹಕರ ಚಳುವಳಿಗಳು ನಡೆದು ಬಳಕೆದಾರರಿಗೆ ನ್ಯಾಯ ಒದಗಿಸಿ ಕೊಡುವ ಕೆಲಸ ಮಾಡಿದೆ. ರಾಲ್ಫ್ ನಾಡೆರ್ ಎಂಬ ಹೋರಾಟಗಾರನ ಬಗ್ಗೆ ತಮ್ಮ **'ಬಳಕೆದಾರ'** ಪತ್ರಿಕೆಯಲ್ಲಿ ಎಂ.ಆರ್.ಲಕ್ಷ್ಮಮ್ಮನವರು ತಿಳಿಸಿದ್ದಾರೆ. 1965ರಲ್ಲಿ ಚಳವಳಿಯನ್ನು ಪ್ರಾರಂಭಿಸಿದ ರಾಲ್ಫ್ ನಾಡೆರ್ ಹಾವರ್ಡ್ ವಿಶ್ವವಿದ್ಯಾಲಯದ ನ್ಯಾಯಶಾಸ್ತ್ರ ಪದವೀದರನಾಗಿದ್ದು, **'ಬಳಕೆದಾರರ ಲಾಯರು'** ಎಂಬ ಅನ್ವರ್ಥ ನಾಮವನ್ನು ಹೊಂದಿದ ಈತ, ತನ್ನ ಹೋರಾಟದ ಮೂಲಕ ಅಮೇರಿಕದ ಕಾಂಗ್ರೆಸ್ ಬಳಕೆದಾರರ ರಕ್ಷಣೆಗಾಗಿ ಮಹತ್ವದ ಕಾನೂನುಗಳನ್ನು ಜಾರಿಗೆ ತರುವಲ್ಲಿ ಯಶಸ್ವಿಯಾದನು. ವಿದ್ಯಾರ್ಥಿಗಳು, ಸಾರ್ವಜನಿಕರು, ಉದ್ಯೋಗಸ್ಥರು, ಸ್ವಯಂ ಪ್ರೇರಣೆಯಿಂದ ಗ್ರಾಹಕರ ಸಂಘಟನೆಗಳನ್ನು ಮಾಡಿಕೊಂಡು ಹೋರಾಟ ಮಾಡಲು ಪ್ರೇರೇಪಿಸಿ ಯಶಸ್ವಿಯಾದ ರಾಲ್ಫ್ ನಾಡೆರ್‌ನ ಬಗ್ಗೆ ವಿವರವಾಗಿ ಲೇಖನವನ್ನು ಬರೆದ ಎಂ.ಆರ್.ಲಕ್ಷ್ಮಮ್ಮನವರು ನಮ್ಮಲ್ಲೂ ಕೂಡ ಅದೇ ರೀತಿಯ ಸಂಘಟನೆಗಳ ಅವಶ್ಯಕತೆ ಇದೆ ಎಂದು ಹೇಳುತ್ತಾರೆ.[11]

ಇತರ ಸಂಘಟನೆಗಳಲ್ಲಿ ಲಕ್ಷಮ್ಮನವರ ಪಾತ್ರ

ಎಂ.ಆರ್.ಲಕ್ಷಮ್ಮನವರು ಕರ್ನಾಟಕ ಪಾನ ಸಂಯಮ ಮಂಡಳಿಯ ಪ್ರಥಮ ಅಧ್ಯಕ್ಷೆಯಾಗಿ ಪಾನ ವ್ಯಸನಗಳಿಂದ ಆಗುವ ಅನಾಹುತಗಳ ಬಗ್ಗೆ ಜನರಿಗೆ ಅರಿವು ಮೂಡಿಸಲು ಶ್ರಮಿಸಿದರು. ಪಾನನಿರೋಧವನ್ನು ಜಾರಿಗೆ ತರುವ ಬಗ್ಗೆ ಅವರು ವಿಧಾನ ಪರಿಷತ್ತಿನ ಸದಸ್ಯೆಯಾಗಿದ್ದಾಗಲೇ ಸರ್ಕಾರದ ಮೇಲೆ ಒತ್ತಡವನ್ನು ತಂದಿದ್ದರು. ಸಾಮಾಜಿಕ ಪರಿವರ್ತನೆಯಾದರೆ ಮಾತ್ರ ಪಾನನಿರೋಧ ಯಶಸ್ವಿಯಾಗಿ ಜಾರಿಗೊಳಿಸಲು ಸಾಧ್ಯವೆಂದು ಎಂ.ಆರ್.ಲಕ್ಷಮ್ಮನವರ ಅಭಿಪ್ರಾಯವಾಗಿದೆ.

ಎಂ.ಆರ್.ಲಕ್ಷಮ್ಮನವರು ಮೈಸೂರು ಸಂಸ್ಥಾನದ ಮಕ್ಕಳ ಅಭಿವೃದ್ಧಿ ಸಮಿತಿಯ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದರು. ಮಹಿಳಾ ಖಾದಿ ಸಹಕಾರ ಸಂಘದ ಅಧ್ಯಕ್ಷರಾಗಿ ಮೂರು ವರ್ಷಗಳ ಕಾಲ ಕಾರ್ಯನಿರ್ವಹಿಸಿದ ಲಕ್ಷಮ್ಮನವರು, ಕೇಂದ್ರ ಹೆಣ್ಣುಮಕ್ಕಳ ಶಿಕ್ಷಣ ಮಂಡಳಿಯಲ್ಲಿ ಸದಸ್ಯೆಯಾಗಿ 2 ವರ್ಷಗಳ ಕಾಲ ಸೇವೆ ಸಲ್ಲಿಸಿದರು. 1961 ರಲ್ಲಿ ನಡೆದ ಚೀನಾ–ಭಾರತ ಯುದ್ಧದ ಸಮಯದಲ್ಲಿ ರಾಜ್ಯ ರಕ್ಷಣಾ ಸಮಿತಿಯ ಸದಸೆಯಾಗಿದ್ದು, ಚಿನ್ನವನ್ನು ದಾನ ಮಾಡಿದ ಪ್ರಥಮ ಮಹಿಳೆ ಎಂ.ಆರ್.ಲಕ್ಷಮ್ಮ. ಅವರು ಕೇಂದ್ರ ಗ್ರಂಥಾಲಯ ಸಮಿತಿಯ ಸದಸ್ಯೆಯಾಗಿ ಮೂರು ವರ್ಷಗಳ ಕಾಲ ಕಾರ್ಯನಿರ್ವಹಿಸಿದರು. ಇತಿಹಾಸದ ವಿದ್ಯಾರ್ಥಿನಿಯಾಗಿದ್ದ ಎಂ.ಆರ್.ಲಕ್ಷಮ್ಮನವರು ಮಿಥಿಕ್ ಸೊಸೈಟಿಯ ಉಪಾಧ್ಯಕ್ಷರಾಗಿ 2 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಭಾರತೀಯ ವಿದ್ಯಾಭವನದ ರಾಜ್ಯ ಶಾಖೆಯ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ ಕಾರ್ಯನಿರ್ವಹಿಸಿದರು. ವಾಣಿವಿಲಾಸ ಆಸ್ಪತ್ರೆಯ ಮೇಲ್ವಿಚಾರಣೆ ಸಮಿತಿಯ ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿದ್ದಾರೆ. ರಾಜ್ಯ ಹೆಣ್ಣು ಮಕ್ಕಳ ಗೈಡ್ ಸಂಸ್ಥೆಯ ರಾಜ್ಯ ಕಮಿಷನರ್ ಆಗಿ 3 ಅವಧಿಗಳ ಕಾಲ ಸೇವೆ ಸಲ್ಲಿಸಿದ್ದಾರೆ. ಮೊದಲ ಅವಧಿಯಲ್ಲಿ ಚುನಾಯಿತರಾದ ಎಂ.ಆರ್.ಲಕ್ಷಮ್ಮನವರು ಎರಡನೇ ಬಾರಿಗೆ ಅವಿರೋಧವಾಗಿ ಆಯ್ಕೆಯಾದರು. ಅವರ ಕಾರ್ಯ ದಕ್ಷತೆ ಅವರನ್ನು ಮೂರನೇ ಬಾರಿಗೆ ನಾಮನಿರ್ದೇಶನ ಮಾಡುವಲ್ಲಿ ಸಫಲವಾಯಿತು. ಕೇಂದ್ರ ಸ್ಕೌಟ್ ಮತ್ತು ಗೈಡ್ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಚುನಾಯಿತರಾದರು.

ಮೈಸೂರು ರಾಜ್ಯದ ಯುವ ಜನಸೇವಾ ಮಂಡಳಿಯ ಸದಸ್ಯರಾಗಿ 2 ವರ್ಷಗಳ ಕಾಲ ಕಾರ್ಯನಿರ್ವಹಿಸಿದರು. ನೇತ್ರಾತಜ್ಞರಾದ ಡಾ॥ಮೋದಿಯವರ ಶಿಬಿರದಲ್ಲಿ ಸ್ವಯಂ ಸೇವಕಿಯಾಗಿ ಸೇವೆ ಸಲ್ಲಿಸಿದ ಎಂ.ಆರ್.ಲಕ್ಷಮ್ಮನವರು 1970ರ ನಂತರ ರಾಜಕೀಯ ರಂಗದಿಂದ ನಿವೃತ್ತರಾಗಿ ಸಮಾಜಸೇವೆಯಲ್ಲಿ ತಮ್ಮ ಜೀವನದ ಕೊನೆಯ ಕ್ಷಣದವರೆಗೂ ಸೇವೆ ಸಲ್ಲಿಸಿದರು. ಜೀವನದ ಉದ್ದಕ್ಕೂ ಸಮಾಜಮುಖಿಯಾಗಿ ಕ್ರಿಯಾಶೀಲರಾಗಿ ಚಿಂತನೆಯನ್ನು ಮಾಡಿದ ಎಂ.ಆರ್.ಲಕ್ಷಮ್ಮನವರು 1984 ಜೂನ್ 7 ರಂದು ದೈವಾಧೀನರಾದರು.

ಇಷ್ಟೆಲ್ಲಾ ಜವಾಬ್ದಾರಿಗಳ ನಡುವೆಯೂ ಏಳು ಮಕ್ಕಳ ತಾಯಿಯಾಗಿದ್ದ ಎಂ.ಆರ್.ಲಕ್ಷ್ಮಮ್ಮನವರು ಒಬ್ಬ ಗೃಹಿಣಿಯಾಗಿ ಮಾಡಬೇಕಾದ ಕರ್ತವ್ಯವನ್ನು ಕೂಡ ಸಮರ್ಪಕವಾಗಿ ನಿರ್ವಹಿಸಿದ್ದಾರೆ.

ಅಡಿಟಿಪ್ಪಣಿಗಳು

1. ಎಂ.ಆರ್.ಲಕ್ಷ್ಮಮ್ಮನವರ ಸ್ವವಿವರ, ವಿಭಾಗೀಯ ಪತ್ರಾಗಾರ ಇಲಾಖೆ, ಮೈಸೂರು ಪುಟಸಂಖ್ಯೆ–3
2. ಸಾಧ್ವಿ ಪತ್ರಿಕೆ, ದಿನಾಂಕ:18–11–1946
3. ಸಾಧ್ವಿ ಪತ್ರಿಕೆ, ದಿನಾಂಕ:22–11–1946
4. ಸಾಧ್ವಿ ಪತ್ರಿಕೆ, ದಿನಾಂಕ:17–12–1947
5. ಸಾಧ್ವಿ ಪತ್ರಿಕೆ, ದಿನಾಂಕ:8–12–1947
6. ಸಾಧ್ವಿ ಪತ್ರಿಕೆ, ದಿನಾಂಕ:27–01–1948
7. ಎಂ.ಆರ್.ಲಕ್ಷ್ಮಮ್ಮನವರ ಸ್ವವಿವರ, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು. ಪುಟಸಂಖ್ಯೆ–9
8. ಎಂ.ಆರ್.ಲಕ್ಷ್ಮಮ್ಮ 'ಸೋದರಿ ಪತ್ರಿಕೆ' 1954 ಡಿಸೆಂಬರ್ 24, ಪುಟಸಂಖ್ಯೆ–15
9. ಎಂ.ಆರ್.ಲಕ್ಷ್ಮಮ್ಮನವರ ಸ್ವವಿವರ, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು. ಪುಟಸಂಖ್ಯೆ–4
10. ಎಂ.ಆರ್.ಲಕ್ಷ್ಮಮ್ಮನವರ ಸ್ವವಿವರ, ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು. ಪುಟಸಂಖ್ಯೆ–6
11. ಬಳಕೆದಾರ, ಎಂ.ಆರ್.ಲಕ್ಷ್ಮಮ್ಮ ಅಕ್ಟೋಬರ್ 1974 ಸಂಚಿಕೆ–1

ಅಧ್ಯಾಯ ಏಳು

ಉಪಸಂಹಾರ

ಎಂ.ಆರ್.ಲಕ್ಷಮ್ಮನವರು ಬಹುಮುಖ ಪ್ರತಿಭಾ ವ್ಯಕ್ತಿತ್ವವನ್ನು ಹೊಂದಿದ್ದ ಅಪರೂಪದ ಮಹಿಳೆ. ಸಮಾಜ ಸೇವಕಿಯಾಗಿ, ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ, ರಾಜಕಾರಣಿಯಾಗಿ, ಪತ್ರಿಕೋದ್ಯಮಿಯಾಗಿ, ಸಮಾಜಸುಧಾರಕಿಯಾಗಿ ಅವರು ನಿರ್ವಹಿಸಿದ ಪಾತ್ರ ವಿಭಿನ್ನವಾಗಿದೆ. ಸಂಪ್ರದಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದ್ದರೂ, ಹೆಣ್ಣುಮಕ್ಕಳು ಹೆಚ್ಚಿನ ಶಿಕ್ಷಣ ಪಡೆಯುವುದೇ ವಿರಳವಾಗಿದ್ದ ಕಾಲದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದು ತಮ್ಮನ್ನು ಸಮಾಜಸೇವೆಯಲ್ಲಿ ತೊಡಗಿಸಿಕೊಂಡ ಎಂ.ಆರ್.ಲಕ್ಷಮ್ಮ ತಮ್ಮ ಪತಿ ಮತ್ತು ಕುಟುಂಬದ ಅವಶ್ಯಕತೆಗಳನ್ನು ಕೂಡ ಸಮರ್ಥವಾಗಿ ನಿಭಾಯಿಸಿದ ಆದರ್ಶ ಗೃಹಿಣಿ. ಎಂ.ಆರ್.ಲಕ್ಷಮ್ಮನವರ ಕಾರ್ಯಕ್ಷೇತ್ರಗಳನ್ನು ನೋಡಿದಾಗ ಏಳು ಮಕ್ಕಳ ತಾಯಿ ಮತ್ತು ಗೃಹಿಣಿಯೊಬ್ಬರು ಇಷ್ಟೆಲ್ಲಾ ಸಾಧನೆ ಮಾಡಲು ಸಾಧ್ಯವೇ ಎಂದು ಅಚ್ಚರಿಪಡುವಂತಾಗುತ್ತದೆ. ಅವರು ಏಕಕಾಲದಲ್ಲಿಯೇ ಹಲವಾರು ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ.

ಮಹಿಳೆಯರು ಅಕ್ಷರಸ್ಥರಾಗಿ, ವಿದ್ಯಾವಂತರಾಗಿ ದೇಶಸೇವೆಯಲ್ಲಿ ತೊಡಗಬೇಕೆಂಬುದು ಇವರ ಆಕಾಂಕ್ಷೆಯಾಗಿತ್ತು. ಮೈಸೂರು ಮತ್ತು ಬೆಂಗಳೂರಿನಲ್ಲಿ ಮಹಿಳಾಮಂಡಳಿಗಳನ್ನು ಸ್ಥಾಪನೆ ಮಾಡಿ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಸಮಾಜದ ಏಳಿಗೆಗೆ ಕಾರಣಕರ್ತರಾದರು. ಬೆಂಗಳೂರಿನ ಎನ್.ಆರ್.ಕಾಲೋನಿಯ ಮಹಿಳಾ ಮಂಡಳಿ ಶಿಕ್ಷಣ ಸಂಸ್ಥೆ ಮಹಿಳೆಯರಿಂದಲೇ ಪ್ರಾರಂಭವಾಗಿ ಇಂದಿಗೂ ಸಾವಿರಾರು ಮಕ್ಕಳಿಗೆ ಶಿಕ್ಷಣ ನೀಡಲು ಕಾರಣಕರ್ತರಾದವರು ಎಂ.ಆರ್.ಲಕ್ಷಮ್ಮ.

ಎಂ.ಆರ್.ಲಕ್ಷಮ್ಮನವರು ಆಕಸ್ಮಿಕವಾಗಿ ರಾಜಕೀಯ ರಂಗಕ್ಕೆ ಕಾಲಿಟ್ಟರು ಅವರ ಸೇವೆ ಮಾತ್ರ ಅನನ್ಯವಾದದ್ದು. ಮೈಸೂರರಸರ ಬಗ್ಗೆ ಅಪಾರ ಗೌರವ ಹೊಂದಿದ್ದಂತಹ ಕಾಲಘಟ್ಟದಲ್ಲಿ ಪ್ರಭುತ್ವ ವಿರೋಧಿ ಚಳುವಳಿಯನ್ನು ಸಂಘಟಿಸಿ ಸ್ವಾತಂತ್ರ್ಯದ ಕಿಡಿಯನ್ನು ಭಿತ್ತಿ ಜಾಗೃತಗೊಳಿಸಿದರು. ಅಲ್ಲದೇ ದೇಶಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಎಂ.ಆರ್.ಲಕ್ಷಮ್ಮ, ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆ ವಾಸವನ್ನು ಅನುಭವಿಸಿದರು. ಸೆರೆಮನೆಗೆ ಹೋದಾಗ ಐದು ಮಕ್ಕಳ ತಾಯಿಯಾಗಿದ್ದ ಎಂ.ಆರ್.ಲಕ್ಷಮ್ಮನವರು ಪತಿ ಮತ್ತು ಮಕ್ಕಳನ್ನು ಬಿಟ್ಟು ದೇಶಕ್ಕಾಗಿ ತ್ಯಾಗಮಾಡಲು ಸಿದ್ದ ಎಂಬುದನ್ನು ಸಾಬೀತು ಪಡಿಸಿದರು. 1945ರಲ್ಲಿ ನ್ಯಾಯವಿಧಾಯಕ ಸಭೆಯ ಸದಸ್ಯೆಯಾಗಿ ಅವಿರೋಧವಾಗಿ ಆಯ್ಕೆಯಾಗಿ, ಅವರು ಮಾಡಿದ ಭಾಷಣಗಳು ಮತ್ತು ಚರ್ಚೆಗಳನ್ನು ನೋಡಿದಾಗ ಅವರ ಚಿಂತನೆಗಳು ಸಮಾಜಮುಖಿಯಾಗಿದ್ದು, ಸಾಮಾಜಿಕ ಕಳಕಳಿಯನ್ನು ಬಿಂಬಿಸುತ್ತವೆ.

1946ರಲ್ಲಿ ಪುರಸಭಾ ಸದಸ್ಯರಾಗಿ ಚುನಾಯಿತರಾಗಿ ಮೈಸೂರು ನಗರದ ಅಭಿವೃದ್ಧಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಎಂ.ಆರ್.ಲಕ್ಷಮ್ಮನವರು 1952, 1958, ಮತ್ತು 1964ರಲ್ಲಿ 3 ಬಾರಿ ವಿಧಾನ ಪರಿಷತ್ತಿನ ಸದಸ್ಯರಾಗಿ ಜನಸೇವೆಯಲ್ಲಿ ತೊಡಗಿಸಿಕೊಂಡರು. 1954ರಲ್ಲಿ ಮೈಸೂರು ರಾಜ್ಯದ ಮಹಿಳಾ ಕಲ್ಯಾಣ ಅಭಿವೃದ್ಧಿ ಮಂಡಳಿಯ ಪ್ರಥಮ ಅಧ್ಯಕ್ಷೆಯ ಸ್ಥಾನ ಅವರ ಸಮಾಜ ಸೇವೆಗೆ ಸಂದ ಪುರಸ್ಕಾರವಾಗಿದೆ.

ಸಂಪ್ರದಾಯಸ್ಥ ಕುಟುಂಬದ ಹಿನ್ನೆಲೆ ಇದ್ದು, ಮನೆ ತುಂಬಾ ಮಕ್ಕಳು ಜೊತೆಗೆ ರಾಜಕೀಯ ಮತ್ತು ಸಾಮಾಜಿಕ ಜವಾಬ್ದಾರಿಗಳ ನಡುವೆಯೂ ದೂರದ ದೇಶವಾಗಿದ್ದ ಅಮೇರಿಕಾಕ್ಕೆ ಭೇಟಿ ನೀಡಿದ್ದು, ಅವರ ಧೈರ್ಯ, ಸಾಹಸದ ಪ್ರತೀಕವಾಗಿದೆ. ಎಂ.ಆರ್.ಲಕ್ಷಮ್ಮನವರು ರಾಜಕೀಯ ಸಂಸ್ಥೆಗಳ ಪರಿಶೀಲನೆಗೋಸ್ಕರ 1954ರಲ್ಲಿ ಅಮೇರಿಕಾ ದೇಶ ಭೇಟಿ ನೀಡಿ ನಾಲ್ಕೂವರೆ ತಿಂಗಳುಗಳ ಕಾಲ ಅಲ್ಲಿಯೇ ನೆಲೆಸಿದ್ದು, ಭಾರತದ ಇತಿಹಾಸ ಮತ್ತು ಸಂಸ್ಕೃತಿಯ ವೈಶಿಷ್ಠತೆಯನ್ನು ಅಮೇರಿಕಾದ ದೇಶವಾಸಿಗಳಿಗೆ ಪರಿಚಯ ಮಾಡಿಸಿದರು. ಅಮೇರಿಕಾದ ಪ್ರಮುಖ ವ್ಯಕ್ತಿಗಳನ್ನು ಭೇಟಿ ಮಾಡಿ ಹಲವಾರು ವಿಷಯಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡರು. ಅಂದಿನ ಕಾಲದಲ್ಲಿ ಅಮೇರಿಕಾ ದೇಶಕ್ಕೆ ಭಾರತೀಯರ ಪ್ರತಿನಿಧಿಯಾಗಿ ಹೋಗಿ ಬಂದ ದಿಟ್ಟ ಮಹಿಳೆ ಎಂಬ ಹೆಗ್ಗಳಿಕೆ ಇವರದು. ಅಮೇರಿಕಾ ಮಾತ್ರವಲ್ಲದೇ ಯೂರೋಪ್ ಖಂಡದ ಇತರ ದೇಶಗಳಾದ ಇಂಗ್ಲೆಂಡ್, ಇಟಲಿ, ಫ್ರಾನ್ಸ್, ಸ್ವಿಟ್ಜರ್‌ಲ್ಯಾಂಡ್ ದೇಶಗಳನ್ನು ಸುತ್ತಿ ಬಂದರು. ಅಲ್ಲಿನ ಮಹಿಳೆಯರ ಸ್ಥಾನಮಾನ ಸ್ಥಿತಿಗತಿಗಳನ್ನು ಗಮನಿಸಿ ಭಾರತದಲ್ಲಿ ಕೂಡ ಮಹಿಳೆಯರು ಉತ್ತಮ ಸ್ಥಾನಮಾನ ಗಳಿಸಬೇಕೆಂಬ ಹಂಬಲ ಹೊಂದಿದ ಎಂ.ಆರ್.ಲಕ್ಷಮ್ಮ ಅದಕ್ಕಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು.

ಎಂ.ಆರ್.ಲಕ್ಷಮ್ಮನವರ ಮತ್ತೊಂದು ಸಾಹಸವೇನೆಂದರೆ, ಪತ್ರಿಕೋದ್ಯಮ ಕ್ಷೇತ್ರದ ಸಾಧನೆ. ಪುರುಷ ಪ್ರಧಾನವಾದ ಸಮಾಜದಲ್ಲಿ ಇಂದಿಗೂ ಕೂಡ ಕಾಲಿಡಲು ಹಿಂಜರಿಯುವಂತಹ ಕ್ಷೇತ್ರವಾದ ಪತ್ರಿಕೋದ್ಯಮಕ್ಕೆ 50ರ ದಶಕದಲ್ಲಿ ಕಾಲಿಟ್ಟು ಕನ್ನಡನಾಡಿನ ಪತ್ರಿಕೋದ್ಯಮಕ್ಕೆ ಒಂದು ಅಮೂಲ್ಯ ಕೊಡುಗೆಯಾಗಿ ಸೋದರಿ ವಾರಪತ್ರಿಕೆಯನ್ನು ನೀಡಿದರು. 1950ರ ಜನವರಿ 26 ರಂದು ಪ್ರಾರಂಭವಾದ ಸೋದರಿ ಪತ್ರಿಕೆ ಮಹಿಳೆಯರ ಏಳಿಗೆಗಾಗಿ ಇದ್ದ ಪತ್ರಿಕೆಯಾಗಿದ್ದು, ವೈವಿಧ್ಯಮಯ ಲೇಖನಗಳನ್ನು, ಕಥೆ ಕವನಗಳನ್ನು ಒಳಗೊಂಡಿತ್ತು. ಪ್ರಸಿದ್ಧ ಸಾಹಿತಿಗಳ ಬಳಗವನ್ನು ಒಳಗೊಂಡ ಸೋದರಿ ಪತ್ರಿಕೆಯು ನೇರ ನಿಷ್ಪಕ್ಷಪಾತ ರಚನಾತ್ಮಕ ಬರಹಗಳಿಗೆ ಹೆಸರುವಾಸಿಯಾಗಿತ್ತು.

ಎಂ.ಆರ್.ಲಕ್ಷಮ್ಮನವರು ಸ್ಥಾಪಿಸಿದ ಗ್ರಾಹಕರ ವೇದಿಕೆ, ಅವರಿಗಿದ್ದ ಸಾಮಾಜಿಕ ಕಳಕಳಿ, ನಾಗರೀಕ ಪ್ರಜ್ಞೆ, ಸಮಾಜಮುಖಿ ಚಿಂತನೆಗಳನ್ನು ಬಿಂಬಿಸುತ್ತದೆ.

ಜನಸಾಮಾನ್ಯರಿಗೆ ನ್ಯಾಯಯುತವಾದ ಹಕ್ಕುಗಳನ್ನು ಒದಗಿಸಿಕೊಡಲು ಸಾಕಷ್ಟು ಶ್ರಮಿಸಿದ ಅವರು ವಿವಿಧ ಸಂಘ ಸಂಸ್ಥೆಗಳ ಸದಸ್ಯೆಯಾಗಿದ್ದು, ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಕಾರಣಕರ್ತರಾಗಿದ್ದಾರೆ.

ಹೀಗೆ ಜೀವನದ ಉದ್ದಕ್ಕೂ ಕ್ರಿಯಾಶೀಲರಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡ ಎಂ.ಆರ್.ಲಕ್ಷಮ್ಮನವರು ಏಳು ಮಕ್ಕಳ ತಾಯಿಯಾಗಿದ್ದರು. ಐವರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳ ತಾಯಿಯಾಗಿದ್ದ, ಎಂ.ಆರ್.ಲಕ್ಷಮ್ಮನವರು ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ನೀಡಿದ್ದು, ಐವರು ಗಂಡು ಮಕ್ಕಳು ಇಂಜಿನಿಯರ್‌ಗಳಾಗಿದ್ದು, ಇಬ್ಬರು ಮರಣ ಹೊಂದಿದ್ದಾರೆ. ಇಬ್ಬರು ಪುತ್ರರಾದ ಮಾಧವ.ಎನ್.ಮೂರ್ಚಿಂಗ್ ಮತ್ತು ಶ್ರೀನಿವಾಸ.ಎನ್.ಮೂರ್ಚಿಂಗ್ ಹಾಗೂ ಇಬ್ಬರು ಪುತ್ರಿಯರಾದ ಶಾಂತಿ ದೇಶಪಾಂಡೆ ಮತ್ತು ನಂದಿನಿಯವರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇನ್ನೊಬ್ಬ ಪುತ್ರರಾದ ನಾಗೇಂದ್ರ.ಎನ್.ಮೂರ್ಚಿಂಗ್ ಅಮೇರಿಕಾದಲ್ಲಿ ಕೆಲಸ ಮಾಡುತ್ತಿದ್ದಾರೆ. ಸಾಮಾಜಿಕ ಕೆಲಸಕಾರ್ಯಗಳ ನಡುವೆಯು ಒಬ್ಬ ಗೃಹಿಣಿಯಾಗಿ ಮಾಡಬೇಕಾದ ಕರ್ತವ್ಯಗಳನ್ನು ಸಮರ್ಪಕವಾಗಿ ನಿಭಾಯಿಸಿದ ಎಂ.ಆರ್.ಲಕ್ಷಮ್ಮನವರು 1984ರ ಜೂನ್ 7 ರಂದು ಇಹಲೋಕ ತ್ಯಜಿಸಿದರು.

ಆದರೆ ಅವರ ಸಾಧನೆಗಳು ಇಂದಿಗೂ ಚಿರಸ್ಮರಣೀಯವಾಗಿದ್ದು, ಒಬ್ಬ ಮಹಿಳೆ ಗೃಹಿಣಿಯಾಗಿದ್ದುಕೊಂಡು ಎಲ್ಲಾ ಕ್ಷೇತ್ರಗಳಲ್ಲಿಯೂ ಸಾಧನೆ ಮಾಡಲು ಸಾಧ್ಯವೆಂದು ತೋರಿಸಿಕೊಟ್ಟ ದಿಟ್ಟ ಮಹಿಳೆ ಎಂ.ಆರ್.ಲಕ್ಷಮ್ಮನವರು. ಸರಳವಾದ ಜೀವನವನ್ನು ನಡೆಸಿದ ಎಂ.ಆರ್.ಲಕ್ಷಮ್ಮನವರ ಆದರ್ಶ ನಮಗೆ ಮಾರ್ಗದರ್ಶಕವೂ ಅನುಕರಣೀಯವೂ ಆಗಿದೆ. ಇಂತಹ ಆದರ್ಶಮಯ ಬದುಕನ್ನು ನಡೆಸಿದ ಲಕ್ಷಮ್ಮನವರ ಬಗ್ಗೆ ಇತಿಹಾಸದಲ್ಲಿ ದಾಖಲಾಗದಿರುವುದು ದುರದೃಷ್ಟಕರ.

ಕೇವಲ ಮೇಲ್ವರ್ಗ ಹಾಗೂ ಅಗ್ರಪಂಕ್ತಿಯ ನಾಯಕರ ಹೋರಾಟಗಳನ್ನೇ ದಾಖಲಿಸಿರುವುದು ನಮ್ಮ ಚರಿತ್ರೆಯ ಅಧ್ಯಯನದಿಂದ ಗೋಚರಿಸುತ್ತದೆ. ಅಲಕ್ಷಿತ ಸಮುದಾಯವೆಂದೇ ಪರಿಗಣಿತವಾದ ಸ್ತ್ರೀಯರ ಬದುಕು–ಹೋರಾಟಗಳನ್ನು ದಾಖಲಿಸುವ ಅಗತ್ಯತೆ ಪ್ರಸ್ತುತ ಅಧ್ಯಯನದಲ್ಲಿ ಕಂಡುಬರುತ್ತದೆ. ದೇಶ ಸೇವೆಗೋಸ್ಕರ ತಮ್ಮ ಬದುಕನ್ನೇ ಮೀಸಲಾಗಿಟ್ಟು ಯಾವುದೇ ಬಿರುದು ಸನ್ಮಾನಗಳನ್ನು ಬಯಸದೇ ಬದುಕು ಸವೆಸಿದ್ದಾರೆ. ಪ್ರಸ್ತುತ ಸ್ತ್ರೀವಾದಿ ಚಿಂತನೆಯಲ್ಲಿ ಇಂತವರ ಜೀವನದ ಘಟನೆಗಳನ್ನು ಮುಂದಿನ ಪೀಳಿಗೆಗೆ ತಿಳಿಸುವುದು ನಾಗರೀಕ ಸಮಾಜದ ಆದ್ಯಕರ್ತವ್ಯವಾಗಿದೆ. ಆ ಮೂಲಕ ಚರಿತ್ರೆಗೆ ಹೊಸ ದೃಷ್ಟಿಕೋನ ನೀಡಬೇಕಾಗಿದೆ. ಆ ದೃಷ್ಠಿಯಿಂದ ಪ್ರಸ್ತುತ ಅಧ್ಯಯನದಂತಹ ವಿಷಯಗಳ ಬಗ್ಗೆ ಸಂಶೋಧನೆ ಅಗತ್ಯವೆನಿಸಿದೆ. ಇಂತಹ ಎಷ್ಟೋ ಸಮಾಜಮುಖಿ ಚಿಂತಕರ ಚರಿತ್ರೆಗಳ ದಾಖಲೀಕರಣ ಅವಶ್ಯಕ ಹಾಗೂ ಅನುಕರಣೀಯವಾಗಿದೆ.

****

ಪರಮಾರ್ಶನ ಗ್ರಂಥಗಳು

I. ಪ್ರಾಥಮಿಕ ಆಕರಗಳು

1. **ಎಂ.ಆರ್. ಲಕ್ಷಮ್ಮ –ಸ್ವ ವಿವರ,**
   ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು.
2. **ಎಂ.ಆರ್. ಲಕ್ಷಮ್ಮ** –ಸೆರೆಮನೆ ದಿನಚರಿ (ಅಪ್ರಕಟಿತ)
   ವಿಭಾಗೀಯ ಪತ್ರಾಗಾರ ಕಛೇರಿ, ಮೈಸೂರು.
3. **ಎಂ.ಆರ್. ಲಕ್ಷಮ್ಮ –ಸೋದರಿ ಪತ್ರಿಕೆಯ ಸಂಚಿಕೆಗಳು,** (1950 ರಿಂದ 1957)
   ಸೋದರಿ ಕಾರ್ಯಾಲಯ, ಬೆಂಗಳೂರು–04
4. **ಎಂ.ಆರ್. ಲಕ್ಷಮ್ಮ – ಮಾರುತಿ,** ಮೈಸೂರು ಸಂಸ್ಥಾನದ ವಯಸ್ಕರ
   ಶಿಕ್ಷಣ ಸಮಿತಿ, ಮೈಸೂರು.
5. **ಎಂ.ಆರ್. ಲಕ್ಷಮ್ಮ - ಕುಂತೀದೇವಿ,** ಮೈಸೂರು ಸಂಸ್ಥಾನದ
   ವಯಸ್ಕರ ಶಿಕ್ಷಣ ಸಮಿತಿ, ಮೈಸೂರು 1943
6. **ಎಂ.ಆರ್. ಲಕ್ಷಮ್ಮ– ಬಳಕೆದಾರ,** ಕರ್ನಾಟಕ ಗ್ರಾಹಕರ ವೇದಿಕೆ,
   ಬೆಂಗಳೂರು. 1974.
7. **Proceedings of Mysore Representative Assembly debates,** 1945-1948
8. **Mysore City municipal council proceedings -** 1946-1949.
9. **Mysore legislative council Debates**-1952-1948, 1958-1964, 1964-1970.

II. ಸಂದರ್ಶನದ ಮಾಹಿತಿ

1. **ಶ್ರೀ ಮಾಧವ ಎನ್ ಮೂರ್ಚಿಂಗ್, ಎಂ.ಆರ್.ಲಕ್ಷಮ್ಮನವರ ಮಗ, ಬೆಂಗಳೂರು.**
2. **ಡಾ.ಬಿ.ಪಿ. ಇಂದಿರಾ, ಎಂ.ಆರ್. ಲಕ್ಷಮ್ಮನವರ ಸಂಬಂಧಿ, ಮೈಸೂರು.**

III. ದ್ವಿತೀಯ ದರ್ಜೆ ಆಕರಗಳು

1. **ಡಾ. ಜಮುನ – ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರು,**
   ಹೆಚ್.ಬಿ. ಪ್ರಕಾಶನ 1999.
2. **ಕಮಲಾ ಸಂಪಳ್ಳಿ – 'ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ವೀರವನಿತೆಯರು'**
   ಕ್ಯಾಪ್ಟನ್‌ಲಕ್ಷ್ಮಿ ಪ್ರಿಂಟಿಂಗ್ ಪ್ರೆಸ್ ಕುಮಾರಕೃಪ ರಸ್ತೆ, ಬೆಂಗಳೂರು–1

3. **ಡಾ.ಎಂ.ಸಿ. ಸಿಂಗ್‌ಮಾಳ್ – 'ರಾಜಕಾರಣದಲ್ಲಿ ಮಹಿಳೆ'**
ಅರ್ಚನಾ ಬುಕ್‌ಹೌಸ್, ಬೆಂಗಳೂರು. 2001

4. **ಗಾಯಿತ್ರಿನಾವಾಡ –'ಸ್ತ್ರೀವಾದದ ಸಾಂಸ್ಕೃತಿಕ ನೆಲೆಗಳು'**
ಧಾರವಾಡ ಸಾಹಿತ್ಯ ಪ್ರಕಾಶನ. 1994

5. **ಡಾ.ಸಿ. ಸುಶೀಲಮ್ಮ–ಮೈಸೂರು ರಾಜ್ಯದಲ್ಲಿ ಮಹಿಳಾ ಕಲ್ಯಾಣದ ಒಂದು ಅಧ್ಯಯನ (1881–1956)**

6. **ದೊರೆಸ್ವಾಮಿ. ಹೆಚ್.ಎನ್. – ಸ್ವಾತಂತ್ರ್ಯ ಸಂಗ್ರಾಮ,** ಕರ್ನಾಟಕ ಸಾಹಿತ್ಯ ಮಂದಿರ, ಬೆಂಗಳೂರು. 2000

7. **ದೊರೆಸ್ವಾಮಿ. ಹೆಚ್.ಎನ್. – ಹೋರಾಟದ ದಿಟ್ಟ ಹೆಜ್ಜೆಗಳು, ಬೆಂಗಳೂರು. 1972**

8. **ಡಾ: ರಂಗಪ್ಪ ಕೆ.ಎಸ್– (ಪ್ರಸಂ) ಮೈಸೂರು ದರ್ಶನ,** (ಸಂಪುಟ–1)
ಕರಾಮುವಿ, ಮೈಸೂರು. 2011

9. **ಡಾ:ಅಂಬಳಿಕೆ ಹಿರಿಯಣ್ಣ (ಪ್ರ ಸಂ)– ಕನ್ನಡ ವಿಷಯ ವಿಶ್ವಕೋಶ**
(ಇತಿಹಾಸ ಮತ್ತು ಪುರಾತತ್ವ) ಮೈಸೂರು ವಿ.ವಿ. 2009

10. **ಡಾ:ವಿಜಯ್ ಪೂಣಚ್ಚ ತಂಬಡ** (ಪ್ರ ಸಂ)–**ಸಮಕಾಲೀನ ಕರ್ನಾಟಕ**–9,
ಚರಿತ್ರೆಯ ವಿವಿಧ ಆಯಾಮಗಳು, ಕನ್ನಡ ವಿ.ವಿ, ಹಂಪಿ. 2010

11. **ದೊರೆಸ್ವಾಮಿ. ಹೆಚ್.ಎನ್. – ಸ್ವಾತಂತ್ರ್ಯ ಸೇನಾನಿ**
(ಎಂ.ಎನ್.ಜೋಯಿಸರ ಆತ್ಮಕಥನ) ಸಾಹಿತ್ಯ ಮಂದಿರ ಬೆಂಗಳೂರು. 1999

12. **ವೀರತ್ತಪ್ಪ.ಕೆ.** – **ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ,**
ವಿಜಯರವಿ ಪ್ರಕಾಶನ, ಬೆಂಗಳೂರು. 1977

13. **ವೀರಣ್ಣಗೌಡ ಹೆಚ್.ಕೆ. – ಬದುಕು ಮೆಲುಕು (ಆತ್ಮಕಥೆ)**
ಪ್ರಬುದ್ಧ ಪ್ರಕಾಶನ, ಮೈಸೂರು. 1974

14. **ಸುಂದರರಾವ್**.ಬ.ನಾ. – **ಚಲೋ ಮೈಸೂರು,** ವನವಿಹಾರಿ
ಪ್ರಕಾಶನ ಬೆಂಗಳೂರು. 1981

15. **ಸೂರ್ಯನಾಥ್‌ಕಾಮತ್** (ಸಂ) – **ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು,**
ಸಂಪುಟ 1,2,3 ಗೀತಾ ಬುಕ್‌ಹೌಸ್, ಮೈಸೂರು. 1977

16. **ಶರ್ಮ.ತಿ.ತಾ. – ಕರ್ನಾಟಕ ರಾಜ್ಯ ಗೆಜೆಟಿಯರ್ ಸಂಪುಟ 1 & 2,**
ಕರ್ನಾಟಕ ಸರ್ಕಾರ, ಬೆಂಗಳೂರು.

17. **ನಾರಾಯಣ್‌ರಾವ್.ವಿ.ಎಸ್.** – **ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶ್ರೀಸಾಮಾನ್ಯ.,**
ಬೆಂಗಳೂರು. 1978

18. **ಚಂದ್ರಶೇಖರ್.ಎಸ್ – ಸಾಮಾಜಿಕ ಹಿನ್ನೆಲೆಯಲ್ಲಿ ಮೈಸೂರು ರಾಜಕೀಯ ಒಳನೋಟಗಳು** (1881–1940) ಬೆಂಗಳೂರು. 1983

19. **ಚಂದ್ರಶೇಖರ್.ಎಸ್** (ಅನು) ಸಿ.ನಾಗಣ್ಣ– **ದಕ್ಷಿಣ ಭಾರತ, ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ,** ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ. 2000

20. **ಚಂದ್ರಶೇಖರ್.ಎಸ್– ವಸಾಹತುಕಾಲೀನ ಕರ್ನಾಟಕ–** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. 2006

21. **ಷೇಕ್ಅಲಿ ಮತ್ತು ಚಂದ್ರಶೇಖರ್.ಎಸ್. - ಕರ್ನಾಟಕ ಚರಿತ್ರೆ ಸಂಪುಟ.**7 (1900–1956) ಕನ್ನಡ ವಿ.ವಿ. ಹಂಪಿ. 1997

22. **ಶಂಕರನಾರಾಯಣರಾವ್.ಎಸ್.ಪಿ. – ಸ್ವಾತಂತ್ರ್ಯ** ಗಂಗೆಯ **ಸಾವಿರ ತೊರೆಗಳು,** ನವಕರ್ನಾಟಕ ಬೆಂಗಳೂರು 1991

23. **ಪ್ರೇಮಲತಾ ಸುಂದರೇಶನ್** (ಸಂ)– **ಸ್ವಾತಂತ್ರ್ಯದೆಡೆಗೆ** (ಎಂ.ಎನ್.ಜೋಯಿಸ್ ಅಭಿನಂದನಾ ಗ್ರಂಥ) ಡಿ.ವಿ.ಕೆ.ಮೂರ್ತಿ ಪ್ರಕಾಶನ ಮೈಸೂರು–1991

24. **ಸುರೇಶ್ಮೂನ–ಬೆಂಗಳೂರು ನಗರ ನಿರ್ಮಾಪಕರು,** ಭಾಗ–2, ಸಮೃದ್ಧ ಸಾಹಿತ್ಯ, ಬೆಂಗಳೂರು. 2012

25. **ನಂ.ಭಾಗ್ಯಲಕ್ಷ್ಮಿ– ಕನ್ನಡ ಪತ್ರಿಕಾಲೋಕದ ದೀಮಂತರು–8,** ಕರ್ನಾಟಕ ಪತ್ರಿಕಾ ಅಕಾಡೆಮಿ, ಬೆಂಗಳೂರು. 2000

26. **ಬಿ.ಆರ್. ಪ್ರಾಣೇಶ್‌ರಾವ್ - ಯಶೋಧರಾ ದಾಸಪ್ಪ ಮತ್ತು ಹೆಚ್.ಸಿ.ದಾಸಪ್ಪ ಜೀವನ ಸಾಧನೆ,** ಭಾರತೀ ಪ್ರಕಾಶನ ಮೈಸೂರು. 1997

27. **ಕೃಷ್ಣರಾವ್.ಎಂ.ವಿ– ಪ್ರಜಾಸರ್ಕಾರ,** ಪ್ರಸಾರಾಂಗ, ಮೈಸೂರು ವಿ.ವಿ. ಮೈಸೂರು 1955

28. **ಕೃಷ್ಣರಾವ್ ಎಂ.ವಿ. ಮತ್ತು ಕೇಶವಭಟ್ಟ. ಎಂ– ಕರ್ನಾಟಕ ಇತಿಹಾಸ ದರ್ಶನ,** ಸಹಕಾರಿ ಪ್ರಕಾಶನ ಬೆಂಗಳೂರು. 1970

29. **ಪ್ರೇಮಲತಾ ಸುಂದರೇಶನ್** (ಸಂ) – **ಮೈಸೂರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು.** ಮೈಸೂರು ನಗರ ಮತ್ತು ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘ, ಮೈಸೂರು–1994

30. **ಶರ್ಮ ತಿ.ತಾ. - ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸಂಗ್ರಾಮೇತಿಹಾಸ (ಒಂದು ಮನವಿ)** 1955

31. **ಶರ್ಮ ತಿ.ತಾ. - ಮೈಸೂರು ರಾಜಕೀಯ ಸುಧಾರಣೆಗಳ ತಿರುಳು. 1940**

32. **ಜೋಯಿಸ್ ಎಂ.ಎನ್. (ಸಂ) - ಕರ್ಮಯೋಗಿ** (ತಗಡೂರು ರಾಮಚಂದ್ರರಾಯರ ಆತ್ಮಕಥನ) ಮೈಸೂರು.1974

33. ಡಾ. ಸುರೇಶ ಎ.ಎನ್ - ಮೈಸೂರು ಸಂಸ್ಥಾನದಲ್ಲಿ ಗಾಂಧೀಜಿ ನಾಯಕತ್ವದ ಕಾಂಗ್ರೆಸ್‌ನ ರಚನಾತ್ಮಕ ಕಾರ್ಯಕ್ರಮಗಳು ಒಂದು ಅಧ್ಯಯನ (1920–1948) ಅಪ್ರಕಟಿತ ಪಿ.ಹೆಚ್.ಡಿ. ಪ್ರಬಂಧ ಮೈಸೂರು ವಿಶ್ವವಿದ್ಯಾನಿಲಯ. 2000.

34. ಕರ್ನಾಟಕ ಪ್ರಿವೆನ್ಸಿಯಲ್ ಕಾಂಗ್ರೆಸ್ ಕಮಿಟ ಬುಲೆಟಿನ್ ಆನ್ ಮೈಸೂರು ಸತ್ಯಾಗ್ರಹ, ಧಾರಾವಾಡ. 1989

35. ಉಮಾಪತಿ.ಕೆ.ಎಸ್–ಮೈಸೂರು ಚಲೋ ಸತ್ಯಾಗ್ರಹ ಪತ್ರಗಳು, ಅಂಕಿತ ಪ್ರಕಾಶನ, ಬೆಂಗಳೂರು. 1988

36. ನರಸಿಂಹಯ್ಯ.ಹೆಚ್. ಕ್ವಿಟ್ ಇಂಡಿಯಾ ಮತ್ತು ಮೈಸೂರು ಚಲೋ ಚಳುವಳಿಯಲ್ಲಿ ನನ್ನ ಅನುಭವಗಳು, ನ್ಯಾಷನಲ್ ಕಾಲೇಜ್ ಪ್ರೆಸ್, ಬೆಂಗಳೂರು. 1995

37. ಸೂರ್ಯನಾಥ್ ಕಾಮತ್ (ಸಂ) ಕರ್ನಾಟಕ ಗೆಜೆಟಿಯರ್, ಸಂಪುಟ–2, ಬೆಂಗಳೂರು– 1983

38. ರಾಕೇಶ್.ಹೆಚ್.ಎಸ್ ಮೈಸೂರು ಚಲೋ ಚಳುವಳಿ, ರೂಪ ಪ್ರಕಾಶನ, ಮೈಸೂರು. 2011

39. ಮಾಧವ ಎನ್ ಕಟ್ಟಿ (ಸಂ) ನಮ್ಮ ಮೈಸೂರು, ಭಾರತೀಯ ಇತಿಹಾಸ ಸಂಕಲನ ಸಮಿತಿ, ಮೈಸೂರು. 2001

IV. ಪತ್ರಿಕೆಗಳು

1. ಸಾಧ್ವಿ ಪತ್ರಿಕೆ ಸಂಚಿಕೆಗಳು
2. ಸತ್ಯವಾದಿ ಪತ್ರಿಕೆ ಸಂಚಿಕೆಗಳು

V. WORKS IN ENGLISH

1. **Abhi Shankar.K.(Ed) – Gazetteer of India Mysore state 1967**.Govt of Mysore.
2. **Divakar R.R. (Ed)- Karnataka through the Ages**, Govt.of Mysore-1967
3. **Handa R.L. – History of freedom struggle in Princely states.** Central News Agency, Delhi-1993
4. **Halappa G.S. - From princely Autocracy to people's Government** , Sayithya Mandira, Bangalore-1993

5. **Krishnarao. M.V. (Ed) – The freedom movement in Mysore and our popular ministry-** New Dehli. 1985.
6. **Ramaiah. P.R. – Mysore's political evolution** Banglore. 1961.
7. **Srinivasa Murthy.H.V & R. Ramakrishna – History of Karnataka,** S Chand & Company, New Delhi-1985.
8. **Veerathappa K. – Readings in modern History of Mysore,** New Dehli. 1985.
9. **Sarojini and Raghavendra Rao-Women Freedom Fighter in Karnataka,** Prasaranga, Karnataka University Dharwad. 1983
10. **James Maner-Political Change in an Indian State mysore. 1917-1955,** New Delhi. 1977
11. **Gayathri M. B-Development of Mysore State,** Prasaranga, Mysore University, Mysore-1997
12. **Honnaiah. N-Evolution of Responsible Government in the Native State Of Mysore, 1881-1950,** Mysore.

****

ಛಾಯಾಚಿತ್ರಗಳು



ಶ್ರೀಮತಿ ಎಂ.ಆರ್.ಲಕ್ಷಮ್ಮ. 1913–1984



ಪಂಡಿತ್ ಜವಹರ್ ಲಾಲ್ ನೆಹರೂ ಮತ್ತು ಇಂದಿರಾ ಗಾಂಧಿಯವರೊಂದಿಗೆ ಶ್ರೀಮತಿ ಎಂ.ಆರ್.ಲಕ್ಷಮ್ಮ.



ಅಮೇರಿಕಾದ ಉಪಾಧ್ಯಕ್ಷರಾದ ರಿಚರ್ಡ್ ನಿಕ್ಸನ್‌ರವರ ಪತ್ನಿ ಪ್ಯಾಟ್ರೀಷಿಯಾ ನಿಕ್ಸನ್‌ರೊಂದಿಗೆ
ಶ್ರೀಮತಿ ಎಂ.ಆರ್.ಲಕ್ಷಮ್ಮ (1954)



ಅನುಬಂಧಗಳು

Duplicate

Certified Extract From the Convict / Detenue / Undertrial Admission Register of Central Jail Bangalore, For the Year ....1947..........

1.	Convict/Detenue/Undertrial No.	330
2.	Name and father's or husband's name	Smt M.R.Lakshamma (F)
3.	Date of Admission in to this jail	16-9-47
4.	Admitted by direct or transfer	Not recorded
5.	If by transfer, from which jail and Sl No. in that jails register,	Not recorded
6	Sex, Married or Single	Female
7.	Race Religion and Cast	Not recorded
8.	Previous Occupation	Not recorded
9	Educational Qualification.	Not recorded
10	Age on Admission.	Not recorded
11.	Residence, Town or Village, Taluka & Dist.	Mysore Dist.
12	Identification marks:- 1) 2) 3)	Not recorded
13.	Offence for which Imprisoned.	Sec.3 of the M.P.S.Act 1940
14	Calander number of case and sentencing authority.	G.O.No.P.1679-82/Pol 90-47-28 dt. 13.9.47 District Magistrate, Mysore Dist.
15	Sentence	2 months
16.	Date of Sentence.	4.9.47
17.	Date of expiry of sentence.	3.11.47
18.	Disposal with date.	R/2/10
19	Date of return of warrant to court.	Not recorded

Senior Superintendent,
Central Prison, Bangalore.


No. Ji/Pol 2733 /83 84

Office of the Senior Superintendent
Central Prison, Bangalore
Date: 2.8.83

Forwarded to Smt.M.R.Lakshamma, 40,10th Main 5th, Block Jayanagar, Bangalore-11
with reference to his application dated 2.8.1983.

Senior Superintendent
Central Prison Bangalore

ಶ್ರೀಮತಿ ಎಂ.ಆರ್.ಲಕ್ಷಮ್ಮನವರ ಸೆರೆಮನೆ ವಾಸದ ದೃಡೀಕರಣ ಪತ್ರ



ಎಂ.ಆರ್.ಲಕ್ಷಮ್ಮನವರ ಸೋದರಿ ವಾರಪತ್ರಿಕೆಯ ಮೊದಲ
ಸಂಪುಟದ ಮುಖಪುಟ ಚಿತ್ರ (1950)




ಸೋದರಿ ಮಾಸಪತ್ರಿಕೆಯ ಕೊನೆಯ ಸಂಚಿಕೆಯ

ಮುಖಪುಟ (1957)



ಎಂ.ಆರ್.ಲಕ್ಷಮ್ಮನವರು ವಯಸ್ಕರ ಶಿಕ್ಷಣದ ಪುಸ್ತಕದ
ಮಾಲೆಗೆ ರಚಿಸಿರುವ ಕಥಾ ಪುಸ್ತಕ



ಎಂ.ಆರ್.ಲಕ್ಷಮ್ಮನವರು ವಯಸ್ಕರ ಶಿಕ್ಷಣದ ಪುಸ್ತಕದ
ಮಾಲೆಗೆ ರಚಿಸಿರುವ ಕಥಾ ಪುಸ್ತಕ